
"VARTHA JANAPADA" Monthly - Sep 2019
"ವಾರ್ತಾ ಜನಪದ" ಮಾಸಿಕ - ಸೆಪ್ಟೆಂಬರ್ 2019



RNI No. KAR/KAN/2017/75029

Regd No.KA/BGGPO/2583/2018-20 Licensed to post without prepayment Licence No. PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




downloaded from: www.kpscvaani.com

# ವಾರ್ತಾ ಜನಪದ

ವಾರ್ಷಿಕ ಚಂದಾ ರೂ.25/-
ಸೆಪ್ಟೆಂಬರ್ 2019





ಉತ್ತರ ಕರ್ನಾಟಕ ರಾಜ್ಯಗಳಲ್ಲಿ ಸಂಭವಿಸಿದ ಪ್ರವಾಹ ಪೀಡಿತ ಪ್ರದೇಶಗಳ ವೀಕ್ಷಣೆಗಾಗಿ ಆಗಮಿಸಿದ್ದ ಕೇಂದ್ರ ಗೃಹ ಸಚಿವರಾದ
ಅಮಿತ್ ಶಾ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರೊಂದಿಗೆ ವೈಮಾನಿಕ ಸಮೀಕ್ಷೆ ನಡೆಸುತ್ತಿರುವುದು.
ಈ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಸುರೇಶ್ ಅಂಗಡಿ, ಸೇರಿದಂತೆ ಸ್ಥಳೀಯ ಶಾಸಕರುಗಳು ಉಪಸ್ಥಿತರಿದ್ದರು.



ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಆಗಸ್ಟ್ 2 ರಂದು ಜಿಲ್ಲಾಧಿಕಾರಿಗಳು
ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ ನಡೆಸಿದರು. ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ
ಟಿ.ಎಂ. ವಿಜಯಭಾಸ್ಕರ್ ಅವರು ಸೇರಿದಂತೆ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.



ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಬೆಳಗಾವಿಯ ಕಾಕತಿ ಸಮೀಪ ಮಾರ್ಕಂಡೇಯ ನದಿ
ಪ್ರವಾಹವನ್ನು ವೀಕ್ಷಿಸಿದ ಬಳಿಕ ಪ್ರವಾಹದ ತೀವ್ರತೆ ಕುರಿತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಡಾ.ರಾಜೇಂದ್ರ ಅವರಿಂದ ಮಾಹಿತಿ ಪಡೆದುಕೊಳ್ಳುತ್ತಿರುವುದು.



ರಾಜಭವನದಲ್ಲಿ 2018 ನೇ ಸಾಲಿನ ರಾಷ್ಟ್ರಮಟ್ಟದ ಪ್ರಶಸ್ತಿ ಪುರಸ್ಕೃತ ಪೊಲೀಸ್ ಅಧಿಕಾರಿಗಳಿಗೆ ರಾಜ್ಯಪಾಲರಾದ
ವಜುಭಾಯಿ ವಾಲಾ ಅವರು ಮತ್ತು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಅಭಿನಂದನೆ ಸಲ್ಲಿಸಿದ
ಸಂದರ್ಭದಲ್ಲಿ ತೆಗೆಸಿದ ಗ್ರೂಪ್ ಫೋಟೋ

downloaded from: www.kpscvaani.com

ವಾರ್ತಾ
# ಜನಪದ
ಸಂಪುಟ-02 • ಸಂಚಿಕೆ-12 • ಸೆಪ್ಟೆಂಬರ್ 2019



05 ಮುಖ್ಯಮಂತ್ರಿಗಳ ಸ್ವಾತಂತ್ರ್ಯೋತ್ಸವದ ಸಂಕ್ಷಿಪ್ತ ಭಾಷಣ

12 ಆಧುನಿಕ ಕರ್ನಾಟಕದ ಶಿಲ್ಪಿ–ಭಾರತರತ್ನ ಸರ್.ಎಂ.ವಿ
• ಡಾ. ಕೆ.ಪುಟ್ಟಸ್ವಾಮಿ

15 ಸನ್ಮಾರ್ಗ ತೋರೋ ಗುರುವೇ
• ಶ್ವೇತಾ. ಜಿ

17 ಕವಿ ಕಲ್ಪನೆಯಲ್ಲಿ ಗಣೇಶ
• ಡಾ. ಗುರುರಾಜ ಪೋಶೆಟ್ಟಿಹಳ್ಳಿ

21 ಸಾಮೂಹಿಕ ಸಂಕಲ್ಪದಲ್ಲಿ ಅಭಿವೃದ್ಧಿಗೊಂಡ ಕೆರೆಗಳು
• ಕಿಶನ್‌ರಾವ್ ಕುಲಕರ್ಣಿ

25 ರೈತರ ಆರ್ಥಿಕ ನೆರವಿಗಾಗಿ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ
• ಬಿಂದುಮಾಲ

29 370 ನೇ ವಿಧಿ ಆಸಿಂಧು:ಕಾಶ್ಮೀರದಲ್ಲಿ ನವೋದಯ
• ಗೀತಾ ಗುರು

33 ಅಪರೂಪದ ಸಾಹಿತಿ:ಪೂರ್ಣಚಂದ್ರ ತೇಜಸ್ವಿ
• ಡಾ. ಸಂಗಮೇಶತಮ್ಮನಗೌಡ್ರ

36 ದೊಡ್ಡಬಳ್ಳಾಪುರದಲ್ಲಿ ಮಹಾತ್ಮ ಗಾಂಧಿ
• ವೇಮಗಲ್ ಸೋಮಶೇಖರ್

38 ಕರ್ನಾಟಕದಲ್ಲಿ ಪ್ರವಾಹ : ಕರ್ನಾಟಕ ಸರ್ಕಾರ, ಕನ್ನಡಿಗರ ಸ್ಪಂದನೆ

40 ಬಸವನಬಾಗೇವಾಡಿ ತಾಲೂಕು ಆಸ್ಪತ್ರೆಗೆ ಕಾಯಕಲ್ಪದ ಗರಿ
• ಗುರುರಾಜ. ಕನ್ನೂರ

42 ಹಲವು ರೋಗಗಳಿಗೆ ರಾಮಬಾಣ ಕರಿಬೇವು
• ಸಂಗಮೇಶ ಎಸ್. ಜವಾದಿ

45 ಮೈ–ಮನ ಪುಳಕಗೊಳಿಸುವ ಕುಮಾರಪರ್ವತ ಚಾರಣ
• ಬಲ್ಲೇನಹಳ್ಳಿ ಮಂಜುನಾಥ್

48 ರಾಜ್ಯ ಸಚಿವ ಸಂಪುಟ ಸಚಿವರ ಕಿರು ಪರಿಚಯ

ಪ್ರಧಾನ ಸಂಪಾದಕರು
ಎಸ್. ಎನ್. ಸಿದ್ದರಾಮಪ್ಪ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಎಂ ಕಂಬಿ
ಜಂಟಿ ನಿರ್ದೇಶಕರು

ಸಹನಾ ಎಂ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in
emagazine : karnatakajanapada.com | www.karnatakainformation.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 10

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

**downloaded from: www.kpscvaani.com**

# ಓದುಗರಿಂದ...



ನಮ್ಮ ವಾರ್ತಾ ಜನಪದ ಆಗಸ್ಟ್–2019 ರ ಮುಖಪುಟವು 73 ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳೊಂದಿಗೆ ನಮ್ಮ ರಾಜ್ಯದ ಪ್ರಥಮ ಪ್ರಜೆ ಅವರಿಂದ ರಾಜ್ಯದ ನೂತನ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರು ಹಸನ್ಮುಖದೊಂದಿಗೆ ಹೂವಿನ ಪುಷ್ಪಗುಚ್ಛವನ್ನು ಸ್ವೀಕರಿಸುತ್ತಿರುವ ಚಿತ್ರ ತುಂಬಾ ಆಕರ್ಷಣೀಯವಾಗಿದೆ. ಒಳಪುಟದಲ್ಲಿ 15 ನೇ ವಿಧಾನಸಭೆ ಮತ್ತು ವಿಧಾನಪರಿಷತ್ ಕಾರ್ಯಕಲಾಪ ನೋಟದ ಚಿತ್ರಗಳು ಸಹ ಕಣ್ತುಂಬಿಕೊಳ್ಳುವಂತಹ ಸಂತೋಷವನ್ನು ನೀಡಿತು.

ಇದೇ ಸಂಚಿಕೆಯಲ್ಲಿ ನಮ್ಮ ಹೆಮ್ಮೆಯ ಗುಮ್ಮಟ ನಗರಿ ವಿಜಯಪುರ ಕುರಿತು ಮೂರು ಪುಟಗಳಲ್ಲಿ ಸವಿಸ್ತಾರವಾಗಿ ಮೂಡಿ ಬಂದಿರುವುದಕ್ಕೆ ಅಭಿನಂದನೆಗಳು. ಅದರಂತೆ ಹೃದಯವಂತ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರ ಗಾಂಭೀರ್ಯ, ಹಸನ್ಮುಖದಿಂದ ಇರುವ ಭಾವಚಿತ್ರದೊಂದಿಗೆ ಮೈಸೂರು ಅರಸೊತ್ತಿಗೆ ದೇಶಕ್ಕೆ ಮಾದರಿಯಾದ ವಿಷಯ ತಿಳಿದು ಖುಷಿಯಾಯಿತು. ಮತ್ತು ಭಾರತ ಸಂವಿಧಾನದ ಮೂಲಭೂತ ಕರ್ತವ್ಯಗಳನ್ನು ನಿಮ್ಮ ಸಂಚಿಕೆಗಳಲ್ಲಿ ಹಾಕಲಾಗುತ್ತಿರುವುದರಿಂದ ಓದುಗರೆಲ್ಲರೂ ನಮ್ಮ ಸಂವಿಧಾನದ ಕರ್ತವ್ಯಗಳನ್ನು ಪಾಲಿಸಲು ಅನುಕೂಲವಾಗಲಿದೆ.

**–ಯುವರಾಜ,** ವಿಜಯಪುರ

ಆಗಸ್ಟ್ ವಾರ್ತಾ ಜನಪದ ಸಂಚಿಕೆಯು ಆಕರ್ಷಕವಾಗಿ ಮೂಡಿಬಂದಿದೆ. ಸಂಚಿಕೆಯಲ್ಲಿ ನೂತನ ಮುಖ್ಯಮಂತ್ರಿಗಳ ಕುರಿತು ಪ್ರಕಟಿಸಲಾಗಿರುವ ಲೇಖನವು ಸೇರಿದಂತೆ ಸ್ವಾತಂತ್ರ್ಯೋತ್ಸವದ ಹರ್ಷಧಾರೆಯಲ್ಲಿ, ಜಲಿಯನ್ ವಾಲಾಬಾಗ್ ಶತಮಾನ ಕಳೆದರೂ ಮಾಸದ ನೆನಪು, ಪ್ರಿಯಾನಗರವಾದ ಕಾಲಘಟ್ಟ ಗ್ರಾಮ, ಹೃದಯಂತ ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್, ಪರಿಸರ ರಕ್ಷಣೆಗೆ ಸಾರಜನಕದ ನಿರ್ವಹಣೆ ಇವೇ ಮುಂತಾದ ಲೇಖನಗಳು ಒಂದಕ್ಕಿಂತ ಒಂದು ಅತ್ಯುತ್ತಮವಾಗಿ ಮೂಡಿಬಂದಿದೆಯಲ್ಲದೆ, ಅಪಾರ ಮಾಹಿತಿಯನ್ನು ಒದಗಿಸಿವೆ.

**–ವಿದ್ಯಾಶಂಕರ್,** ಶಿರಸಿ

ಆಗಸ್ಟ್ 2019ರ ಸಂಚಿಕೆಯ ಮುಖಪುಟ ನೂತನ ಮುಖ್ಯಮಂತ್ರಿಗಳ ಪ್ರಮಾಣವಚನ ಸ್ವೀಕಾರದ ಫೋಟೋ ಅಂದವಾಗಿ ಮೂಡಿದೆ. ಸ್ವಾತಂತ್ರ್ಯೋತ್ಸವದ ಹರ್ಷಧಾರೆಯಲ್ಲಿ ಲೇಖನ ಇಂದಿನ ಯುವ ಜನತೆಗೆ ಅರಿತು ಬಾಳುವ ಶಕ್ತಿ ಒದಗಿಸುತ್ತದೆ. ಚಿತ್ರದುರ್ಗ ಜಿಲ್ಲಾಧಿಕಾರಿಗಳ ಗ್ರಾಮ ವಾಸ್ತವ್ಯದಿಂದ ಕಾಳಘಟ್ಟ ಗ್ರಾಮದಲ್ಲಾದ ಅಭಿವೃದ್ಧಿಯಂತೆ ಇತರೆ ಎಲ್ಲಾ ಗ್ರಾಮಗಳು ಮಾದರಿಯಾಗಿ ಅಭಿವೃದ್ಧಿ ಕಾಣಲು ಜನಪ್ರತಿನಿಧಿಗಳು ಮತ್ತು ಅಧಿಕಾರಿ ವರ್ಗದವರು ಶ್ರಮಿಸಿದರೆ ರಾಮರಾಜ್ಯ ಕಾಣುವಂತೆ ಮಾಡಬಹುದಾಗಿದೆ.

ಶ್ರೀಗಂಧ ಬೆಳೆಯುವ ಲೇಖನ ಬಯಲು ಸೀಮೆಯ ರೈತರಿಗೆ ವರದಾನವಾಗಿದೆ. ಗುಮ್ಮಟ ನಗರಿಯ ಲೇಖನ ಓದಿದೊಡನೆ ನಾವೇ ಸುತ್ತಿ ಬಂದಂತಾಯಿತು. ಹೃದಯವಂತ ಮಹಾರಾಜರ ಲೇಖನ ಇಂದಿನ ಜನಪ್ರತಿನಿಧಿಗಳಿಗೆ ಸಲಹೆ ನೀಡಿದಂತಿದೆ. ತಾಯಿ ಎದೆಹಾಲು ಕಂದಮ್ಮಗಳಿಗೆ ಬೇಕು ಎನ್ನುವ ಲೇಖನ ಇಂದಿನ ಯುವ ಮಹಿಳಾ ಕಣ್ಮಣಿಗಳಿಗೆ ದಾರಿ ದೀಪವಾಗಿದೆ. ಸಾವಯವ ಕೃಷಿಯಲ್ಲಿ ಯಶಸ್ವಿಯಾದ ಶಿಕ್ಷಕ ಲೇಖನವು, ವ್ಯವಸಾಯದಿಂದ ಆದಾಯಗಳಿಸಲು ಸಾಧ್ಯವಿಲ್ಲ ಎಂದು ಸರ್ಕಾರಿ ನೌಕರಿಗೇ ಕಾದು ಕೂರುವ ನಿರುದ್ಯೋಗಿ ಯುವ ಜನತೆಯ ಕಣ್ಣು ತೆರೆಸುತ್ತದೆ. ಇಷ್ಟೆಲ್ಲಾ ಮಾಹಿತಿಯನ್ನು ನೀಡಿದ ಪತ್ರಿಕೆಯ ಸಂಪಾದಕೀಯ ವೃಂದಕ್ಕೆ ಧನ್ಯವಾದಗಳು.

**–ಡಾ. ಬಿ. ಎ. ರಾಜಪ್ಪ ನಿಬಗೂರು,** ಜಗಲೂರು

ನಿಮ್ಮ ಆಗಸ್ಟ್ ವಾರ್ತಾ ಜನಪದ ಪತ್ರಿಕೆಯನ್ನು ಓದಿದ ನನಗೆ ಅಪಾರ ಸಂತೋಷವಾಯಿತು. ಮುಖಪುಟ ನೋಡಿ ಮನಮುದಗೊಂಡಿತು. ರಾಜಕೀಯ ಮುತ್ಸದ್ದಿಯಾಗಿ ಅಖಂಡ ಕರ್ನಾಟಕದ ಸುಖ–ಸಮೃದ್ಧಿಗಾಗಿ ಪರಿಶ್ರಮಿಸುವ ಉದಾತ್ತ ಉದ್ದೇಶ ಹೊಂದಿರುವ ಶ್ರೀ ಯಡಿಯೂರಪ್ಪನವರು ಹಸಿರು ಶಾಲು ಹೊದ್ದುಕೊಂಡು ಪ್ರಮಾಣ ಸ್ವೀಕರಿಸಿದ್ದು ರೈತ ಸಮುದಾಯಕ್ಕೆ ಸಂತೋಷವಾಗಿದೆ. ಅಲ್ಲದೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕೂಡಲೇ ರೈತರ ಖಾತೆಗೆ ಪ್ರತಿ ವರ್ಷ ನಾಲ್ಕು ಸಾವಿರ ರೂಗಳನ್ನು ಜಮೆ ಮಾಡಲಾಗುವುದೆಂದು ತಿಳಿಸಿದುದು ರೈತರ ಮುಖದಲ್ಲಿ ಮಂದಹಾಸ ಮೂಡಿಸಿದೆ.

ಪತ್ರಿಕೆಯಲ್ಲಿ ಪ್ರಕಟಿಸಲಾಗಿರುವ ರಾಷ್ಟ್ರ ಮತ್ತು ರಾಜ್ಯದ ಪ್ರಮುಖ ಪ್ರಸಿದ್ಧ ವ್ಯಕ್ತಿಗಳೊಂದಿಗೆ ಯಡಿಯೂರಪ್ಪನವರು ಇರುವ ಚಿತ್ರಗಳು ಸಂಗ್ರಹ ಯೋಗ್ಯವಾಗಿದ್ದು, ಓದುಗರನ್ನು ಸಂತೃಪ್ತಿಗೊಳಿಸಿದವು. ಇದೇ ಸಂಚಿಕೆಯಲ್ಲಿ ಪ್ರಕಟವಾದ ಸ್ವಾತಂತ್ರ್ಯೋತ್ಸವದ ಹರ್ಷಧಾರೆಯಲ್ಲಿ... ಎಂಬ ಲೇಖನ ಸಮಯೋಚಿತವಾಗಿತ್ತು. ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ರಾಜಕೀಯದ ವಿಷಯಗಳನ್ನು ವಿವರಿಸುವ ವಾರ್ತಾ ಜನಪದ ಮಾಸಿಕವು ಓದುಗರ ಅರಿವಿನ ಮೇರೆಯನ್ನು ವಿಸ್ತರಿಸುವ ವಿಶಿಷ್ಟವಾದ ನಿಯತಕಾಲಿಕವಾಗಿದೆ.

**–ಬಸವರಾಜ ಹೂಗಾರ,** ಹಿರೇಸಿಂಗನಗುತ್ತಿ

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/–

'ವಾರ್ತಾ ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ **"The Director, Department of Information & Public Relations"** ಹೆಸರಿನಲ್ಲಿ ಡಿ.ಡಿ. ಮುಖಾಂತರವೇ ಕಳುಹಿಸಬೇಕು. ಮನಿ ಆರ್ಡರ್ ಮೂಲಕ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.



# ಮುಖ್ಯಮಂತ್ರಿಗಳ ಸ್ವಾತಂತ್ರ್ಯೋತ್ಸವದ ಸಂಕ್ಷಿಪ್ತ ಭಾಷಣ

ನಾಡ ಬಾಂಧವರೆ,

ನಿಮಗೆಲ್ಲರಿಗೂ 73ನೇ ಸ್ವಾತಂತ್ರ್ಯ ದಿನಾಚರಣೆಯ ಹೃತ್ಪೂರ್ವಕ ಶುಭಾಶಯಗಳು. ಮಹಾತ್ಮಾ ಗಾಂಧೀಜಿಯವರು ಹೇಳಿರುವಂತೆ "Freedom is never dear at any price. It is the breath of life" ಅಂದರೆ ಸ್ವಾತಂತ್ರ್ಯ ನಮಗೆ ಉಸಿರಾಟದಷ್ಟೇ ಅಮೂಲ್ಯವಾದುದು.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ 150 ನೇ ಜನ್ಮ ವರ್ಷಾಚರಣೆಯ ಸಂದರ್ಭದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂದೇಶ ನೀಡುವ ಸುಯೋಗ ನನಗೆ ಒದಗಿ ಬಂದಿರುವುದು ನನ್ನಲ್ಲಿ ಧನ್ಯತೆ ಮೂಡಿಸಿದೆ. ಅವರ ರಾಮರಾಜ್ಯದ ಕನಸನ್ನು ನನಸಾಗಿಸುವತ್ತ ನಾವು ಮುನ್ನಡೆದಿದ್ದೇವೆ. ಅಭಿವೃದ್ಧಿಯೇ ಆಡಳಿತ ಮಂತ್ರ ಎನ್ನುವುದು ನಮ್ಮ ಸರ್ಕಾರದ ಧ್ಯೇಯವಾಗಿದೆ.

ಸ್ವಾತಂತ್ರ್ಯದ ಸಮರದಲ್ಲಿ ಅಸಂಖ್ಯಾತ ದೇಶಭಕ್ತರು ಬಲಿದಾನ ಮಾಡಿದ್ದಾರೆ. ಅವರ ಅಮರ ಬಲಿದಾನದ ಫಲವನ್ನು ನಾವು ನೀವೆಲ್ಲ ಉಣ್ಣುತ್ತಿದ್ದೇವೆ. ಅಪಾರ ತ್ಯಾಗ ಮತ್ತು ಬಲಿದಾನಗಳಿಂದ ಸಂಪಾದಿಸಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಹೊಣೆ ನಮ್ಮೆಲ್ಲರದ್ದಾಗಿದೆ. ಈ ದಿಸೆಯಲ್ಲಿ ಸ್ವಾತಂತ್ರ್ಯೋತ್ಸವ ದಿನವಾದ ಇಂದು ನಾವೆಲ್ಲ ದೀಕ್ಷೆ ತೆಗೆದುಕೊಳ್ಳೋಣ.

**ಪ್ರಕೃತಿಯ ಮುನಿಸು – ಪರಿಹಾರಕ್ಕೆ ಆದ್ಯತೆ**

ಕರ್ನಾಟಕ ರಾಜ್ಯ ಅತಿವೃಷ್ಟಿ, ಅನಾವೃಷ್ಟಿಗಳ ಅಡಕತ್ತರಿಯಲ್ಲಿ ಸಿಲುಕಿ ತತ್ತರಿಸುತ್ತಿದೆ. ಈ ಎರಡೂ ಪರಿಸ್ಥಿತಿಗಳನ್ನು ಎದುರಿಸಲು ನನ್ನ ಸರ್ಕಾರ ಸನ್ನದ್ಧವಾಗಿದೆ. ಅಧಿಕಾರ ಸ್ವೀಕರಿಸಿದ ಪ್ರಾರಂಭದಲ್ಲೇ ಜಿಲ್ಲಾಧಿಕಾರಿಗಳ ಸಭೆ ಕರೆದು ಆಗ ರಾಜ್ಯದಲ್ಲಿದ್ದ ಬರ ಪರಿಸ್ಥಿತಿಯ ಕುರಿತು ಸಂಪೂರ್ಣ ವಿವರಗಳನ್ನು ಪಡೆದು ಪರಿಸ್ಥಿತಿ ನಿಭಾಯಿಸಲು ಮಾರ್ಗದರ್ಶನ ನೀಡಿದ್ದೇನೆ.

ಕರ್ನಾಟಕ ಕಳೆದ 45 ವರ್ಷಗಳಲ್ಲಿ ಕಂಡರಿಯದ ಪ್ರಕೃತಿ ವಿಕೋಪವನ್ನು ಪ್ರಸ್ತುತ ಎದುರಿಸುತ್ತಿದೆ. ಸುಮಾರು ಅರ್ಧ ರಾಜ್ಯ ಜಲಪ್ರಳಯಕ್ಕೊಳಗಾಗಿದೆ. 22 ಜಿಲ್ಲೆಗಳ ವ್ಯಾಪ್ತಿಯಲ್ಲಿ 103 ತಾಲ್ಲೂಕುಗಳು ಭೀಕರ ಪ್ರವಾಹಕ್ಕೆ ತುತ್ತಾಗಿವೆ. ಪ್ರವಾಹದ ನಡುವೆ 5 ಜಿಲ್ಲೆಗಳ ಬಹುತೇಕ ಭಾಗದಲ್ಲಿ ಮಳೆಯಾಗದೆ ಬರ ಪರಿಸ್ಥಿತಿ ಉಂಟಾಗಿದೆ. ಅಂದರೆ ನೆರೆಯ ರಾಜ್ಯದ ಅಣೆಕಟ್ಟೆಗಳು ತುಂಬಿ ಹೊರ ಹರಿದ ನೀರಿನ ಜೊತೆಗೆ ನಮ್ಮ ರಾಜ್ಯದಲ್ಲೂ ಬಿದ್ದ ಮಳೆಯಿಂದ ನದಿಗಳು ತುಂಬಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಇದರ ಜೊತೆಗೆ ಮಳೆಯ ಚದುರುವಿಕೆಯಲ್ಲಿ ವ್ಯತ್ಯಾಸವಾಗಿ ಹಲವೆಡೆ ಬರ ಪರಿಸ್ಥಿತಿ ಉಂಟಾಗಿರುವುದು ಗಮನಾರ್ಹ. ಪ್ರವಾಹದಿಂದಾಗಿ ಈವರೆಗೆ 61 ಮಂದಿ ಸಾವನ್ನಪ್ಪಿದ್ದಾರೆ. ಮೃತಪಟ್ಟವರ ಕುಟುಂಬಗಳಿಗೆ 48 ಗಂಟೆಯೊಳಗಾಗಿ ತಲಾ 5



downloaded from: www.kpscvaani.com



ಲಕ್ಷ ರೂ. ಗಳಂತೆ ಪರಿಹಾರ ನೀಡಲಾಗುತ್ತಿದೆ. ಈವರೆಗೆ 6,97,948 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. 859 ಜಾನುವಾರುಗಳು ಸಾವನ್ನಪ್ಪಿದ್ದು, 51,460 ಜಾನುವಾರುಗಳನ್ನು ರಕ್ಷಿಸಲಾಗಿದೆ. ರಾಜ್ಯದಲ್ಲಿ ಒಟ್ಟು 1,224 ಪರಿಹಾರ ಕೇಂದ್ರಗಳನ್ನು ತೆರೆದಿದ್ದೇವೆ. ಅದರಲ್ಲಿ ಆಹಾರ, ವಸ್ತ್ರ, ಹೊದಿಕೆ, ಔಷಧ ಮತ್ತಿತರ ಅಗತ್ಯ ಮೂಲಸೌಲಭ್ಯಗಳನ್ನು ಒದಗಿಸಲಾಗಿದೆ. ಈ ಪರಿಹಾರ ಕೇಂದ್ರಗಳಲ್ಲಿ 3,96,617 ಜನರು ಆಶ್ರಯ ಪಡೆದಿದ್ದಾರೆ.

ದಿಢೀರ್ ನುಗ್ಗಿದ ಪ್ರವಾಹದ ನೀರು ತಂದೊಡ್ಡಿರುವ ಸಮಸ್ಯೆ ಮತ್ತು ಸವಾಲುಗಳು ಹಲವಾರು. ಕೃಷಿಕರು ಹೆಚ್ಚಿನ ತೊಂದರೆಗೆ ಈಡಾಗಿದ್ದಾರೆ. ಸುಮಾರು 4.69 ಲಕ್ಷ ಹೆಕ್ಟೇರ್ ಕೃಷಿ ಭೂಮಿಯಲ್ಲಿ ಪ್ರವಾಹ ಹಾಗೂ ಭೂ ಕುಸಿತದಿಂದ ಹಾನಿ ಸಂಭವಿಸಿದೆ. 58,620 ಮನೆಗಳಿಗೆ ಹಾನಿಯಾಗಿದೆ. ಸಾವಿರಾರು ಜನ ಮನೆ-ಮಠ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದಾರೆ.



ಪ್ರವಾಹ ಪರಿಸ್ಥಿತಿ ಎದುರಾದ ಕೂಡಲೇ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ್ದೇನೆ. ನಿರಂತರ ವೈಮಾನಿಕ ಸಮೀಕ್ಷೆ ಹಾಗೂ ಸ್ಥಳ ಪರೀಕ್ಷೆಗಳನ್ನು ಮಾಡಿ ಸಂತ್ರಸ್ತರಿಗೆ ತಡವಿಲ್ಲದೆ ಪರಿಹಾರ ಒದಗಿಸಲು ಪ್ರಯತ್ನಿಸಿದ್ದೇನೆ. ಬೆಳಗಾವಿ, ಬಾಗಲಕೋಟೆ, ವಿಜಯಪುರ, ರಾಯಚೂರು, ಯಾದಗಿರಿ, ದಕ್ಷಿಣ ಕನ್ನಡ, ಶಿವಮೊಗ್ಗ, ಮೈಸೂರು ಮತ್ತು ಗದಗ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಸಂಚರಿಸಿ ಸಂತ್ರಸ್ತರ ರಕ್ಷಣೆ ಮತ್ತು ಪರಿಹಾರ ಕ್ರಮಗಳನ್ನು ಕೈಗೊಂಡಿದ್ದೇನೆ.

ನಮ್ಮ ಅಧಿಕಾರಿಗಳು, ಶಾಸಕರು, ಸಂಸದರು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಮಾನವೀಯ ಕಾಳಜಿಯುಳ್ಳ ಜನ ಆಪತ್ಬಾಂಧವರಂತೆ ನೆರವು ನೀಡಿ ಸಂತ್ರಸ್ತರನ್ನು ಕಾಪಾಡಿದ್ದಾರೆ. ವಿರೋಧ ಪಕ್ಷಗಳ ನಾಯಕರು ಕೂಡ ಪರಿಹಾರ ಕ್ರಮಗಳ ಬಗ್ಗೆ ಸಮಾಧಾನ ವ್ಯಕ್ತಪಡಿಸಿ ಸಹಕರಿಸಿದ್ದಾರೆ.

ಪ್ರವಾಹ ಸಂತ್ರಸ್ತರಿಗೆ ತಕ್ಷಣದ ನೆರವಿಗೆ 10,000 ರೂಪಾಯಿ, ಮನೆ ಸಂಪೂರ್ಣವಾಗಿ ಕಳೆದುಕೊಂಡವರಿಗೆ 5 ಲಕ್ಷ ರೂಪಾಯಿ ಪರಿಹಾರ ಹಾಗೂ ಮನೆ ದುರಸ್ತಿ ಮಾಡಿಕೊಳ್ಳಲು 1 ಲಕ್ಷ ರೂ. ನೆರವು ನೀಡುವುದಾಗಿ ಘೋಷಣೆ ಮಾಡಿದ್ದೇನೆ.

ಪ್ರವಾಹದಿಂದ ನಗರ ಪ್ರದೇಶದ ಕೊಳೆಗೇರಿಗಳಲ್ಲಿ ಮನೆಗಳಿಗೆ ಹಾಗೂ ಮೂಲಸೌಲಭ್ಯಗಳಿಗೆ ತೀವ್ರ ಹಾನಿಯಾಗಿದ್ದು, ನಿವಾಸಿಗಳ ಬದುಕು ದುಸ್ತರವಾಗಿದೆ. ಆದ್ದರಿಂದ ಕೊಳೆಗೇರಿ ನಿವಾಸಿಗಳಿಗೆ ಮನೆಗಳನ್ನು ನಿರ್ಮಿಸಿ, ರಸ್ತೆ, ಒಳಚರಂಡಿ, ಕುಡಿಯುವ ನೀರು, ಶೌಚಾಲಯ ಮತ್ತಿತರ ಮೂಲಸೌಕರ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆ.

**ಕೇಂದ್ರದ ನೆರವು**

ದೆಹಲಿಗೆ ಭೇಟಿ ನೀಡಿ ಕೇಂದ್ರ ಸರ್ಕಾರದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಹಾಗೂ ಇತರ ಸಚಿವರನ್ನು ಕಂಡು ರಾಜ್ಯಕ್ಕೆ ಅಗತ್ಯ ನೆರವು ಒದಗಿಸುವಂತೆ ಮನವಿ ಮಾಡಿದ್ದೇನೆ. ಕೇಂದ್ರ ಸರ್ಕಾರ ತಕ್ಷಣ ಸೇನೆ ಮತ್ತು ಎನ್‌ಡಿಆರ್‌ಎಫ್ ಪಡೆಗಳನ್ನು ಒದಗಿಸಿದ್ದಲ್ಲದೇ ಅಗತ್ಯವಾದ ಸೇನಾ ಹೆಲಿಕಾಪ್ಟರ್ ಮತ್ತು ರಕ್ಷಣಾ ದೋಣಿಗಳು ಇತ್ಯಾದಿ ಸೌಲಭ್ಯಗಳನ್ನು ಒದಗಿಸಿದೆ.

ವಿತ್ತ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್, ಗೃಹ ಸಚಿವ ಶ್ರೀ ಅಮಿತ್ ಶಾ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಶ್ರೀ ಡಿ.ವಿ. ಸದಾನಂದ ಗೌಡ, ಕಲ್ಲಿದ್ದಲು ಸಚಿವ ಶ್ರೀ ಪ್ರಹ್ಲಾದ್ ಜೋಶಿ, ರೈಲ್ವೆ ಖಾತೆ ರಾಜ್ಯ ಸಚಿವ ಶ್ರೀ ಸುರೇಶ್ ಅಂಗಡಿ ಮತ್ತು ಸಂಸದರು ಕೂಡ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿರುವುದಲ್ಲದೆ, ಕೇಂದ್ರದಿಂದ ಹೆಚ್ಚಿನ ನೆರವು ಒದಗಿಸಿಕೊಡುವ ಭರವಸೆ ನೀಡಿದ್ದಾರೆ.

ಪ್ರಕೃತಿ ವಿಕೋಪದಿಂದ ಹಲವು ಸಹಸ್ರ ಕೋಟಿ ರೂ.ಗಳ ಮೌಲ್ಯದ ಆಸ್ತಿಪಾಸ್ತಿಗೆ ಹಾನಿಯಾಗಿದೆ. ಪ್ರವಾಹ, ಮಳೆ ಮತ್ತು ಭೂಕುಸಿತದಿಂದ ಹಾನಿಗೊಳಗಾಗಿರುವ ಮನೆಗಳನ್ನು ಅಗತ್ಯವಿದ್ದರೆ ದುರಸ್ತಿ ಇಲ್ಲವೇ ಪುನರ್ನಿರ್ಮಾಣಕ್ಕೆ ರಾಜ್ಯ ಸರ್ಕಾರ ಎಲ್ಲಾ ಕ್ರಮ ಕೈಗೊಳ್ಳಲಿದೆ. ಒಟ್ಟಾರೆ ಹಾನಿಯ ಅಂದಾಜು ಮಾಡುತ್ತಿದ್ದು, ಕೇಂದ್ರಕ್ಕೆ ಈಗಾಗಲೇ ಸಲ್ಲಿಸಿರುವ ನೆರವಿನ ಕೋರಿಕೆಯ ಮನವಿಗಳನ್ನು ಇತ್ತೀಚಿನ ಮಾಹಿತಿಯೊಂದಿಗೆ ಇಂದೀಕರಿಸಿ ಹೆಚ್ಚಿನ ನೆರವನ್ನು ಕೋರಲಾಗುವುದು.

ಪರಿಹಾರ ಕ್ರಮಗಳನ್ನು ಚುರುಕುಗೊಳಿಸಲು ಶಾಸಕರು ಹಾಗೂ ಸಂಸದರ ತಂಡಗಳನ್ನು ರಚಿಸಿ, ಪ್ರವಾಹ ಪೀಡಿತ ಜಿಲ್ಲೆಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸುವಂತೆ ಸೂಚಿಸಿದ್ದೆ, ಅದರಂತೆ ಅವರು ಕ್ರಮ ವಹಿಸಿದ್ದಾರೆ. ಅಪರ ಮುಖ್ಯ ಕಾರ್ಯದರ್ಶಿಗಳ ಮಟ್ಟದ ಅಧಿಕಾರಿಗಳ ತಂಡ ತಮಗೆ ವಹಿಸಿರುವ ಜಿಲ್ಲೆಗಳಲ್ಲಿ ರಕ್ಷಣೆ ಹಾಗೂ ಪರಿಹಾರ ಕ್ರಮಗಳ ಉಸ್ತುವಾರಿ ವಹಿಸಿಕೊಂಡಿದೆ. ಜನರ ಸಂಕಷ್ಟಗಳಿಗೆ ತುರ್ತು ಸಂದರ್ಭದಲ್ಲಿ ನೆರವಿಗೆ ಧಾವಿಸಲು ಸರ್ಕಾರ ಯಾವ ಪ್ರಯತ್ನವನ್ನೂ ಕೈಬಿಟ್ಟಿಲ್ಲ ಎಂಬುದನ್ನು ಆತ್ಮಸಾಕ್ಷಿಯಾಗಿ ಹೇಳಬಲ್ಲೆ.

ಕಡಲು ಕೊರೆತದಿಂದ ಕರಾವಳಿ ಭಾಗದ ಹಲವು ಮೀನುಗಾರರು ಮನೆ ಕಳೆದುಕೊಂಡಿದ್ದಾರೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರವೂ ನೆರವಿಗೆ ಬಂದಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಅಂತೆಯೇ ರಾಜ್ಯ ಸರ್ಕಾರವೂ ಕಡಲ ಕೊರೆತದಿಂದ ಸಂಕಷ್ಟಕ್ಕೊಳಗಾದ ಮೀನುಗಾರರಿಗೆ ಒತ್ತಾಸೆಯಾಗಿ ನಿಲ್ಲಲಿದೆ.

**ಅಭಿವೃದ್ಧಿಯ ಪಥದಲ್ಲಿ ಕರ್ನಾಟಕ**

ಕರ್ನಾಟಕ ರಾಜ್ಯ ದೇಶದ ಮುಂಚೂಣಿಯ ರಾಜ್ಯಗಳಲ್ಲಿ ಮುಖ್ಯವಾದದ್ದು. 2 ಸಾವಿರ ವರ್ಷಗಳಿಗೂ ಹೆಚ್ಚಿನ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಹಿನ್ನೆಲೆಯುಳ್ಳ ಶ್ರೀಮಂತ ಇತಿಹಾಸದ, ವಿಶಿಷ್ಟ ಸಂಸ್ಕೃತಿಯ ತವರೂರು. ಅಪಾರ ನೈಸರ್ಗಿಕ ಹಾಗೂ ಅಸಾಧಾರಣ ಮಾನವ ಸಂಪನ್ಮೂಲದಿಂದ ತುಂಬಿರುವ ಕರ್ನಾಟಕ ಭಾರತದ ಅಭಿವೃದ್ಧಿ ನಕ್ಷೆಯಲ್ಲಿ ಶಿಖರ ಪ್ರಾಯ ಸ್ಥಾನ ಹೊಂದಿದೆ.

ಅಭಿವೃದ್ಧಿಯಲ್ಲಿ ಸ್ಥಿರತೆಯನ್ನು ಕಾಯ್ದುಕೊಂಡು, ಸುಭಿಕ್ಷ, ಸಮೃದ್ಧ ಕರ್ನಾಟಕ ನಿರ್ಮಾಣಕ್ಕೆ ನಮ್ಮ ಸರ್ಕಾರ ಕಟಿಬದ್ಧವಾಗಿದೆ. ಅಧಿಕಾರ ಸ್ವೀಕಾರದ ತರುವಾಯ ಮೊದಲ ಸಚಿವ ಸಂಪುಟ ಸಭೆಯಲ್ಲಿ ನಮ್ಮ ಸರ್ಕಾರ ಕೈಗೊಂಡ ನಿರ್ಣಯಗಳೇ ಇದಕ್ಕೆ ಸಾಕ್ಷಿ.

ಇತ್ತೀಚೆಗೆ ರಾಜ್ಯದಲ್ಲಿನ ಉದ್ಯೋಗಗಳಲ್ಲಿ ಕನ್ನಡಿಗರ ಪ್ರಾತಿನಿಧ್ಯ ಕಡಿಮೆಯಾಗುತ್ತಿದೆ ಎಂಬ ಕೂಗೆದ್ದಿದೆ. ರಾಜ್ಯದಲ್ಲಿನ ಉದ್ಯೋಗಗಳಲ್ಲಿ ಅಧಿಕಾಂಶ ಕನ್ನಡಿಗರಿಗೇ ದೊರೆಯಬೇಕೆಂಬುದು ನಮ್ಮ ನಿಲುವು. ನಮ್ಮ ಸರ್ಕಾರದ ನೀತಿಯೂ ಇದೇ ಆಗಿದೆ. ಈ ನೆಲದ ಭಾವನೆಗಳನ್ನು ನಮ್ಮ ಸರ್ಕಾರ ಗೌರವಿಸುತ್ತದೆ. ಕನ್ನಡಿಗರ ಸ್ವಾಭಿಮಾನ, ಗೌರವ ಮತ್ತು ಉದ್ಯೋಗಾವಕಾಶಗಳಿಗೆ ಧಕ್ಕೆ ಬರದಂತೆ ಎಚ್ಚರವಹಿಸಲು ನಾವು ಬದ್ಧರಿದ್ದೇವೆ ಎಂದು ಈ ಸಂದರ್ಭದಲ್ಲಿ ಘೋಷಿಸಬಯಸುತ್ತೇನೆ.







downloaded from: www.kpscvaani.com



ಆಧುನಿಕ ಕರ್ನಾಟಕದ ಶಿಲ್ಪಿ

# ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯ

ಕಡು ಬಡತನದ ಹಿನ್ನೆಲೆಯಲ್ಲಿಯೂ ತಮ್ಮ ಸತತ ಪರಿಶ್ರಮ ಮತ್ತು ಚಿಂತನೆಯಿಂದ ಸಾಧನೆಯ ಶಿಖರವೇರಿದರು. ಶತಾಯುಷಿಗಳಾಗಿ ನಾಡಿನ ಸಾಕ್ಷಿಪ್ರಜ್ಞೆಯಾಗಿ ಬದುಕಿದರು. ಭಾರತರತ್ನ ಬಿರುದು ಪಡೆದು ಪ್ರಶಸ್ತಿಗೇ ಗೌರವ ತಂದುಕೊಟ್ಟರು. ಅವರ ಜೀವನ ಸಾಧನೆ ಎಲ್ಲರಲ್ಲೂ ಕುತೂಹಲ ಮತ್ತು ರೋಮಾಂಚನ ಮೂಡಿಸುವ ಕಥಾನಕ.

ಡಾ. ಕೆ.ಪುಟ್ಟಸ್ವಾಮಿ

ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಅವರು ಈ ದೇಶಕಂಡ ಅದ್ಭುತ ಚಿಂತಕ, ತಂತ್ರಜ್ಞ, ಪ್ರಾಮಾಣಿಕ ಮತ್ತು ದಕ್ಷ ಆಡಳಿತಗಾರರು. ತಮ್ಮ ನಿಸ್ವಾರ್ಥ ಸೇವೆಯಿಂದ ದೇಶ ವಿದೇಶಗಳಲ್ಲಿ ಪ್ರಸಿದ್ಧರಾದವರು. ಅವರು ಎಂಜಿನಿಯರ್ ಪದವಿ ಪಡೆದು ತಂತ್ರಜ್ಞರೆನಿಸಿಕೊಂಡರು, ಮಾತ್ರವಲ್ಲ ಅವರ ಚಿಂತನೆಗಳ ಹರಹು ಹಲವಾರು ಕ್ಷೇತ್ರಗಳಿಗೆ ವ್ಯಾಪಿಸಿತ್ತು. ಅವರು ಶಿಕ್ಷಣ, ಆಡಳಿತ, ಕೈಗಾರಿಕೆ, ನೀರಾವರಿ, ಸಾಹಿತ್ಯ ಕ್ಷೇತ್ರಗಳಲ್ಲಿ ಗಮನಾರ್ಹ ಪರಿವರ್ತನೆಯನ್ನು ತಂದರು. ಬದುಕಿದ್ದಾಗಲೇ ಅವರ ಬದುಕು ಸಾಧನೆ ದಂತಕಥೆಯಾಗಿತ್ತು. ಅವರೊಬ್ಬ ಅನುಕರಣೀಯ ಮತ್ತು ಆದರ್ಶ ವ್ಯಕ್ತಿತ್ವಕ್ಕೆ ಮಾದರಿಯಾಗಿದ್ದರು. ಕಡು ಬಡತನದ ಹಿನ್ನೆಲೆಯಲ್ಲಿಯೂ ತಮ್ಮ ಸತತ ಪರಿಶ್ರಮ ಮತ್ತು ಚಿಂತನೆಯಿಂದ ಸಾಧನೆಯ ಶಿಖರವೇರಿದರು. ಶತಾಯುಷಿಗಳಾಗಿ ನಾಡಿನ ಸಾಕ್ಷಿಪ್ರಜ್ಞೆಯಾಗಿ ಬದುಕಿದರು. ಭಾರತರತ್ನ ಬಿರುದು ಪಡೆದು ಪ್ರಶಸ್ತಿಗೇ ಗೌರವ ತಂದುಕೊಟ್ಟರು. ಅವರ ಜೀವನ ಸಾಧನೆ ಎಲ್ಲರಲ್ಲೂ ಕುತೂಹಲ ಮತ್ತು ರೋಮಾಂಚನ ಮೂಡಿಸುವ ಕಥಾನಕ.

ಅಂದಿನ ಕೋಲಾರ ಜಿಲ್ಲೆಯ, ಇಂದಿನ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ವಾಸವಿದ್ದ ಸಂಸ್ಕೃತ ವಿದ್ವಾಂಸರಾದ ಶ್ರೀನಿವಾಸ ಶಾಸ್ತ್ರಿ ಮತ್ತು ವೆಂಕಟಲಕ್ಷ್ಮಮ್ಮ ದಂಪತಿಗಳಿಗೆ ವಿಶ್ವೇಶ್ವರಯ್ಯನವರು ದಿನಾಂಕ 15ನೇ ಸೆಪ್ಟೆಂಬರ್ 1861ರಂದು ಜನಿಸಿದರು. ಅವರ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದ ಸರ್ಕಾರಿಶಾಲೆಯಲ್ಲಿ ಆರಂಭವಾಯಿತು. ವ್ಯಾಸಂಗದಲ್ಲಿ ಅತ್ಯಾಸಕ್ತಿ ಹೊಂದಿದ್ದ ಬಾಲಕನಿಗೆ ಹದಿನೈದನೆಯ ವಯಸ್ಸಿನಲ್ಲಿ ಪಿತೃವಿಯೋಗವಾದ ಕಾರಣ ಬದುಕು ಬಡತನದ ಬೇಗೆಗೆ ಬಿತ್ತು. ಧೃತಿಗೆಡದ ತಾಯಿ ಅನ್ಯರ ಮನೆಯಲ್ಲಿ ಮನೆಕೆಲಸ ಇತ್ಯಾದಿಗಳನ್ನು ಮಾಡುತ್ತಾ ಬಾಲಕನ ಬದುಕಿಗೆ ಆಸರೆಯಾಗಿ ನಿಂತರು. ಅವರ ಬುದ್ಧಿಮತ್ತೆಯನ್ನು ಮೆಚ್ಚಿದ ಸೋದರಮಾವ ಎಚ್.ರಾಮಯ್ಯನವರು ವಿಶ್ವೇಶ್ವರಯ್ಯ ಅವರನ್ನು 1875ರಲ್ಲಿ ಬೆಂಗಳೂರಿಗೆ ಕರೆತಂದರು. ಅವರ ನೆರವಿನಿಂದ ವೆಸ್ಲಿಯನ್ ಮಿಷನ್ ಹೈಸ್ಕೂಲಿಗೆ ಸೇರಿದರು.

ಅವರ ಶಾಲಾ ಕಾಲೇಜಿನ ದಿನಗಳು ಅತ್ಯಂತ ದುರ್ಭರ ದಿನಗಳು. ತೀವ್ರವಾದ ಆರ್ಥಿಕ ಮುಗ್ಗಟ್ಟು, ಹಸಿವು, ಇವು ಯಾವೂ ಅವರ ವಿದ್ಯಾಸಕ್ತಿಯನ್ನು ಕುಂದಿಸಲಿಲ್ಲ. ವಿಶ್ವೇಶ್ವರಯ್ಯನವರು ವ್ಯಾಸಂಗದ ದಿನಗಳಲ್ಲಿ ಪಟ್ಟ ಕಷ್ಟಗಳ ಬಗ್ಗೆ ಅನೇಕ ಕಥೆಗಳು ಜನಜನಿತವಾಗಿವೆ. ರಾತ್ರಿಯ ಹೊತ್ತು ಓದಲು ಸಹ ದೀಪವಿಲ್ಲದಂಥ ಸ್ಥಿತಿಯಲ್ಲಿ ಅವರು ಬೀದಿಬದಿಯ ದೀಪಗಳ ಕೆಳಗೆ ಕುಳಿತು ಅಭ್ಯಾಸ ಮಾಡಿದರು. ಮೆಟ್ರಿಕುಲೇಶನ್ ಪರೀಕ್ಷೆಗೆ ಹಣ ಹೊಂದಿಸಲು ಅವರು ಬೆಂಗಳೂರಿನಿಂದ ಮುದ್ದೇನಹಳ್ಳಿಗೆ ನಡೆದುಕೊಂಡೇ ಹೋಗಿ ಮನೆಯ ಪಾತ್ರೆಗಳನ್ನು ಅಡವಿಟ್ಟು ಮತ್ತೆ ನಡೆದುಕೊಂಡು ಬೆಂಗಳೂರು ಸೇರಿದರು. ಅವರ ಬತ್ತದ ಉತ್ಸಾಹ, ಸಂಕಲ್ಪಶಕ್ತಿಯನ್ನು ಉದಾಹರಿಸಿ ಹೀಗೆ ಹಲವಾರು ಪ್ರಸಂಗಗಳು ಜನಜನಿತವಾಗಿವೆ. ಈ ಸಂಕಲ್ಪಶಕ್ತಿ ಮತ್ತು ವ್ಯಾಸಂಗಾಸಕ್ತಿಗಳೇ ಬದುಕಿನಲ್ಲಿ ಅವರನ್ನು ಮುನ್ನಡೆಸಿದವು.



ಇಂಟರ್‌ಮೀಡಿಯಟ್ ನಂತರ ಅವರು ಬೆಂಗಳೂರಿನ ಸೆಂಟ್ರಲ್‌ಕಾಲೇಜಿನಲ್ಲಿ ವಿಜ್ಞಾನದ ವಿಷಯಗಳನ್ನು ಆರಿಸಿಕೊಂಡು ಬಿ.ಎ. ಪದವಿ ಸೇರಿದರು. ಬದುಕು ತೂಗಿಸಲು ಹಲವು ವಿದ್ಯಾರ್ಥಿಗಳಿಗೆ ಪಾಠ ಹೇಳಿ ಧನಾರ್ಜನೆ ಮಾಡಿದರು. 1881ರಲ್ಲಿ ಅಗ್ರ ಅಂಕಗಳನ್ನು ಗಳಿಸಿ ಬಿ.ಎ. ಪದವಿ ಪಡೆದು ಪುಣೆಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶ ದೊರಕಿಸಿಕೊಂಡರು. ಅಲ್ಲಿ ಅವರು ಎಂಜಿನಿಯರಿಂಗ್ ಡಿಪ್ಲೋಮಾಗೆ ತತ್ಸಮಾನವಾದ ಎಲ್‌ಸಿಇ ಪದವಿ ಪಡೆದರು.

ವಿಶ್ವೇಶ್ವರಯ್ಯನವರ ತಾಂತ್ರಿಕ ಪರಿಣತಿ ಬಹುಬೇಗನೆ ಪ್ರಸಿದ್ಧಿಗೆ ಬಂತು. ಅವರು ನೀರಾವರಿ ಮತ್ತು ನೀರು ನಿರ್ವಹಣೆಯ ಕ್ಷೇತ್ರದಲ್ಲಿ ವಿಶೇಷ ತಜ್ಞತೆಯನ್ನು ರೂಢಿಸಿಕೊಂಡಿದ್ದರು. ಜಲಾಶಯಗಳಲ್ಲಿ ಹೊರ ಮತ್ತು ಒಳಹರಿವನ್ನು ನಿಯಂತ್ರಿಸಿ ಪ್ರವಾಹ ಮತ್ತು ಬರವನ್ನು ಪರಿಹರಿಸುವ ಸ್ವಯಂಚಾಲಿತ ದ್ವಾರಗಳನ್ನು ಅವರು ಆವಿಷ್ಕರಿಸಿದರು. ಅದಕ್ಕಾಗಿ ಪೇಟೆಂಟು ಪಡೆದರೂ ರಾಯಧನವನ್ನು ನಿರಾಕರಿಸಿದರು. ಪುಣೆಯ ಸರೋವರ, ಹೈದರಾಬಾದಿನ ಉಸ್ಮಾನ್ ಮತ್ತು ಹಿದಾಯತ್ ಸರೋವರ ಹಾಗೂ ಯೆಮೆನ್ ದೇಶದ ಆಡೆನ್ ನಗರದ ಜಲಾಶಯಗಳಿಗೆ ಅವುಗಳನ್ನು ಯಶಸ್ವಿಯಾಗಿ ಅಳವಡಿಸಿ ಲೋಕ ನಿಬ್ಬೆರಗಾಗುವಂತೆ ಮಾಡಿದರು. ವಿಶಾಖಪಟ್ಟಣಂ ಬಂದರನ್ನು ಸಮುದ್ರ ಸವಕಳಿಯಿಂದ ಮುಕ್ತಗೊಳಿಸುವ ವ್ಯವಸ್ಥೆಯನ್ನು ರೂಪಿಸಿದರು. ಬಿಹಾರ್ ಪ್ರಾಂತ್ಯದಲ್ಲಿ ಹರಿಯುವ ಗಂಗಾನದಿಗೆ ಅಡ್ಡಲಾಗಿ ನಿರ್ಮಿಸಿದ ಮೋಕಮ ಸೇತುವೆಯ ಸ್ಥಳ ನಿರ್ಣಯಿಸಲು ತಾಂತ್ರಿಕ ಸಲಹೆ ನೀಡಿದರು. ಹೀಗೆ ಅವರ ತಂತ್ರಜ್ಞಾನ ದೇಶ ವಿದೇಶಗಳಲ್ಲಿ ಹಲವು ನಿರ್ಮಾಣದಲ್ಲಿ ಬಳಕೆಯಾಯಿತು.

ವಿಶ್ವೇಶ್ವರಯ್ಯನವರನ್ನು ಕನ್ನಡಿಗರು ವಿಶೇಷವಾಗಿ

**ಜಲಾಶಯಗಳಲ್ಲಿ ಹೊರ ಮತ್ತು ಒಳಹರಿವನ್ನು ನಿಯಂತ್ರಿಸಿ ಪ್ರವಾಹ ಮತ್ತು ಬರವನ್ನು ಪರಿಹರಿಸುವ ಸ್ವಯಂಚಾಲಿತ ದ್ವಾರಗಳನ್ನು ಅವರು ಆವಿಷ್ಕರಿಸಿದರು. ಅದಕ್ಕಾಗಿ ಪೇಟೆಂಟು ಪಡೆದರೂ ರಾಯಧನವನ್ನು ನಿರಾಕರಿಸಿದರು. ಪುಣೆಯ ಸರೋವರ, ಹೈದರಾಬಾದಿನ ಉಸ್ಮಾನ್ ಮತ್ತು ಹಿದಾಯತ್ ಸರೋವರ ಹಾಗೂ ಯೆಮೆನ್ ದೇಶದ ಆಡೆನ್ ನಗರದ ಜಲಾಶಯಗಳಿಗೆ ಅವುಗಳನ್ನು ಯಶಸ್ವಿಯಾಗಿ ಅಳವಡಿಸಿ ಲೋಕ ನಿಬ್ಬೆರಗಾಗುವಂತೆ ಮಾಡಿದರು.**

ನೆನೆಯಲು ಅವರು "ಆಧುನಿಕ ಕರ್ನಾಟಕದ ಶಿಲ್ಪಿ" ಎನ್ನುವ ಕಾರಣಕ್ಕೆ. ಅವರು ಪ್ರಾರಂಭದಲ್ಲಿ ಮೈಸೂರು ಸರ್ಕಾರದ ಮುಖ್ಯ ಎಂಜಿನಿಯರಾಗಿ 1909ರಲ್ಲಿ ನೇಮಕಗೊಂಡರು. ಅನಂತರ 1912ರಲ್ಲಿ ದೀವಾನರಾಗಿ 1917ರವರೆಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ವಿಶ್ವೇಶ್ವರಯ್ಯನವರು ವಹಿಸಿದ ಪಾತ್ರದಿಂದಾಗಿ ಅಂದಿನ ಮೈಸೂರು ಪ್ರಗತಿ ಪಥದಲ್ಲಿ ದಾಪುಗಾಲು ಹಾಕಿತು. ಅದೊಂದು ಸುವರ್ಣಯುಗ. ಅವರ ಕಾರ್ಯಕ್ಷೇತ್ರ ಆಡಳಿತವನ್ನು ಮೀರಿ ಜನಜೀವನದ ಎಲ್ಲ ರಂಗಗಳಿಗೂ ವ್ಯಾಪಿಸಿತು. ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ ಜನಜೀವನದ ಗುಣಮಟ್ಟವನ್ನು ಸುಧಾರಿಸಿದ ಬಹುದೊಡ್ಡ ಸುಧಾರಕ ಅವರಾಗಿದ್ದರು. ಅವರ ಸಾಧನೆಯ ಸಣ್ಣ ಪಟ್ಟಿ ಇಂತಿದೆ:

"ಕೈಗಾರಿಕೀಕರಣ ಇಲ್ಲವೇ ನಾಶ" ಎಂಬುದು ವಿಶ್ವೇಶ್ವರಯ್ಯನವರ ಘೋಷಮಂತ್ರವಾಗಿತ್ತು. ಸ್ಥಳೀಯ



downloaded from: www.kpscvaani.com



**ಆಧುನಿಕ ಕರ್ನಾಟಕದ ಭಾಗ್ಯವಿಧಾತರೆನಿಸಿದ ವಿಶ್ವೇಶ್ವರಯ್ಯನವರಿಗೆ ಬ್ರಿಟಿಷ್ ಸರ್ಕಾರ ನೈಟ್ಹುಡ್ ಪದವಿಗೆ ಆಯ್ಕೆ ಮಾಡಿ 'ಸರ್' ಬಿರುದನ್ನು 1915ರಲ್ಲಿ ನೀಡಿತು. ಸ್ವತಂತ್ರ ಭಾರತವು 1955ರಲ್ಲಿ ಭಾರತರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.**

ನೈಸರ್ಗಿಕ ಸಂಪತ್ತನ್ನು ಆಧರಿಸಿ ಕೈಗಾರಿಕೆಗಳನ್ನು ಆರಂಭಿಸಿದರೆ ಸ್ಥಳೀಯ ಜನರಿಗೆ ಉದ್ಯೋಗ ದೊರೆಯುವ ಜೊತೆಗೆ ನಾಡಿನ ಆರ್ಥಿಕ ಶಕ್ತಿ ಹೆಚ್ಚುವುದನ್ನು ಅವರು ಮನಗಂಡಿದ್ದರು. ಆದಕ್ಕಾಗಿಯೇ ಅವರು ಮೈಸೂರು ಸರ್ಕಾರದ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಮೈಸೂರು ಸಾಬೂನು ಕಾರ್ಖಾನೆ, ಪ್ಯಾರಾಸಿಟಾಯ್ಡ್ ಪ್ರಯೋಗಾಲಯ, ಬೆಂಗಳೂರು ಸರ್ಕಾರಿ ಮುದ್ರಣಾಲಯ, ಭದ್ರಾವತಿಯಲ್ಲಿ ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಅಲ್ಲದೆ ಅನೇಕ ಉದ್ಯಮಗಳ ಸ್ಥಾಪನೆಗೆ ಕಾರಣೀಭೂತರಾದರು.

ತಾಂತ್ರಿಕ ಶಿಕ್ಷಣದ ಮಹತ್ವವನ್ನು ಅರಿತ ಅವರು ಬೆಂಗಳೂರಿನಲ್ಲಿ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್, ಈಗಿನ ಯುವಿಸಿಇ ಕಾಲೇಜು, ಕೃಷಿ ಕಾಲೇಜು ಸ್ಥಾಪನೆಯಲ್ಲಿ ಮಹತ್ವದ ಪಾತ್ರ ವಹಿಸಿದರು. ಮೈಸೂರಿನ ಕಾಲೇಜುಗಳು ಹಿಂದೆ ಮದ್ರಾಸ್ ಆಡಳಿತಕ್ಕೆ ಒಳಪಟ್ಟಿದ್ದವು. ಮದ್ರಾಸ್ ವಿಶ್ವವಿದ್ಯಾಲಯದ ಹಿಡಿತದಲ್ಲಿದ್ದ ರಾಜ್ಯದ ಕಾಲೇಜುಗಳನ್ನು ಬಿಡಿಸಿ ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆಗೆ ಹರಸಾಹಸ ಮಾಡಿ ಅವರು ಯಶಸ್ವಿಯಾದರು. ವಿಶ್ವೇಶ್ವರಯ್ಯನವರ ಶ್ರಮದಿಂದ ಕರ್ನಾಟಕದಲ್ಲಿ ಮೊದಲ ವಿಶ್ವವಿದ್ಯಾಲಯ ಆರಂಭವಾಯಿತು. ಸೆಂಚುರಿಕ್ಲಬ್, ಮೈಸೂರು ವಾಣಿಜ್ಯ ಮಂಡಳಿ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹೀಗೆ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿದ ಸಂಸ್ಥೆಗಳನ್ನು ಸ್ಥಾಪಿಸಿದರು. ಅವರು ದಿವಾನರಾಗಿದ್ದ ಅವಧಿಯಲ್ಲಿ ಖಾಸಗಿ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸಿದರು. ತಿರುಮಲ ಮತ್ತು ತಿರುಪತಿ ನಡುವೆ ರಸ್ತೆ ನಿರ್ಮಾಣ ಯೋಜನೆಯಲ್ಲೂ ಅವರು ಪ್ರಮುಖ ಪಾತ್ರವಹಿಸಿದರು.

ಕನ್ನಡ ನಾಡು ನುಡಿಯ ಬಗ್ಗೆ ಅವರಿಗೆ ಅಪಾರವಾದ ಪ್ರೀತಿಯಿತ್ತು, ಕನ್ನಡ ಭಾಷೆಯ ಅಭಿವೃದ್ಧಿಗಾಗಿ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ ಮಾಡಿದರು. ವಿಚಾರ ಸಂಕಿರಣಗಳು, ಗೋಷ್ಠಿಗಳು, ಸಾಹಿತ್ಯ ಕಾರ್ಯಕ್ರಮಗಳೆಲ್ಲವೂ ಕನ್ನಡದಲ್ಲೇ ನಡೆಯಬೇಕೆಂಬುದು ಅವರ ಅಪೇಕ್ಷೆಯಾಗಿತ್ತು.

ವಿಶ್ವೇಶ್ವರಯ್ಯನವರ ಹೆಸರು ನೆನಪಾದಗಲೆಲ್ಲ ಕನ್ನಂಬಾಡಿ( ಕೃಷ್ಣರಾಜ ಸಾಗರ) ನೆನಪಾಗುವುದು ಸಹಜ. ಅಷ್ಟರಮಟ್ಟಿಗೆ ಅವೆರಡು ಹೆಸರು ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿವೆ. ಕಾವೇರಿ ನದಿಗೆ ಅಡ್ಡವಾಗಿ ಕನ್ನಂಬಾಡಿ ಗ್ರಾಮದ ಬಳಿ ಜಲಾಶಯ ನಿರ್ಮಿಸಿ ಮಂಡ್ಯ ಮತ್ತು ಮೈಸೂರಿನ ಬರಡು ಭೂಮಿಗೆ ನೀರುಣಿಸುವ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕನಸನ್ನು ಸಾಕಾರಗೊಳಿಸಲು ವಿಶ್ವೇಶ್ವರಯ್ಯನವರು ಯೋಜನೆಯ ಮುಖ್ಯ ಎಂಜಿನಿಯರ್ ಆಗಿ ನೀಲನಕ್ಷೆ ಸಿದ್ಧಪಡಿಸಿ ಆರಂಭದಲ್ಲಿ ಅದರ ಜಾರಿಗೆ ಶ್ರಮವಹಿಸಿದರು. ಆ ಕಾಲಕ್ಕೆ ಅದು ಇಡೀ ಏಷ್ಯಾ ಖಂಡದ ಅತಿ ದೊಡ್ಡ ಜಲಾಶಯ. ಕಲ್ಲು ಮತ್ತು ಗಾರೆಗಚ್ಚನ್ನು ಬಳಸಿ ಕಟ್ಟಿದ, ಈ ಜಲಾಶಯ ಮೈಸೂರು ರಾಜ್ಯದ ಕೃಷಿ ಪ್ರಗತಿಯಲ್ಲಿ ಮಹತ್ವದ ಪಾತ್ರವಹಿಸಿತು. ಒಂದು ಲಕ್ಷ ಇಪ್ಪತ್ತು ಸಾವಿರ ಎಕರೆ ನೀರಾವರಿಗೊಳಪಟ್ಟು ಮಂಡ್ಯ ಜಿಲ್ಲೆಯು ಮೈಸೂರು ಸಂಸ್ಥಾನ ಸಕ್ಕರೆ ನಾಡು, ಬತ್ತದ ಬೀಡು ಎನಿಸಿತು. ಅಲ್ಲದೆ ಕೃಷ್ಣರಾಜ ಸಾಗರದ ಏರಿಯ ಹಿಂಭಾಗದಲ್ಲಿ ಬೃಂದಾವನ ತೋಟದ ವಾಸ್ತುಶಿಲ್ಪಿಯೂ ಸಹ ಅವರೇ ಆಗಿದ್ದರು. ಒಂದು ಇಂಜಿನಿಯರಿಂಗ್ ನಿರ್ಮಾಣವು ಸೌಂದರ್ಯೋಪಾಸನೆಯ ತಾಣವಾಗುವ ರಮ್ಯ ಕಲ್ಪನೆಯೇ ಹೊಸದು. ವಿಶ್ವೇಶ್ವರಯ್ಯನವರು ಅದನ್ನು ಆಗು ಮಾಡಿದರು. ಕೃಷ್ಣರಾಜ ಸಾಗರ ಮತ್ತು ಬೃಂದಾವನ ಗಾರ್ಡನ್ ರಚನೆಯನ್ನು ಅನುಸರಿಸಿ  ನಿರ್ಮಾಣವಾದ ಹಲವಾರು ಜಲಾಶಯಗಳಿಗೆ ಸೌಂದರ್ಯ ಮತ್ತು ಭವ್ಯತೆಯಲ್ಲಿ ಅದನ್ನು ಮೀರಿಸಲು ಸಾಧ್ಯವಾಗಲೇ ಇಲ್ಲ.

ಓದಿನಲ್ಲಿ ಶಿಸ್ತು, ವೃತ್ತಿಯಲ್ಲಿ ಪ್ರಾಮಾಣಿಕತೆ, ದಕ್ಷತೆ, ಸಮಗ್ರತೆ ಹಾಗು ಸಮುದಾಯದ ಅಭಿವೃದ್ಧಿಯಲ್ಲಿ ತೋರಿದ ದಾರ್ಶನಿಕತೆ ಮತ್ತು ಆದರ್ಶ ವ್ಯಕ್ತಿತ್ವಕ್ಕೆ ಮಾದರಿಯಾದ, ಆಧುನಿಕ ಕರ್ನಾಟಕದ ಭಾಗ್ಯವಿಧಾತರೆನಿಸಿದ ವಿಶ್ವೇಶ್ವರಯ್ಯನವರಿಗೆ ಬ್ರಿಟಿಷ್ ಸರ್ಕಾರ ನೈಟ್ಹುಡ್ ಪದವಿಗೆ ಆಯ್ಕೆ ಮಾಡಿ 'ಸರ್' ಬಿರುದನ್ನು 1915ರಲ್ಲಿ ನೀಡಿತು. ಸ್ವತಂತ್ರ ಭಾರತವು 1955ರಲ್ಲಿ ಭಾರತರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಅಲ್ಲದೆ ಅವರ ಬಹುಮುಖ ಸಾಧನೆಯನ್ನು ಪರಿಗಣಿಸಿ ಕೊಲ್ಕತ್ತಾ ವಿಶ್ವವಿದ್ಯಾಲಯ, ಮುಂಬೈ ವಿಶ್ವವಿದ್ಯಾಲಯ, ಬನಾರಸ್ ಹಿಂದೂ ವಿಶ್ವವಿದ್ಯಾಲಯ, ಅಲಹಾಬಾದ್ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ ಮತ್ತು ಆಂಧ್ರ ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದವು. ಅಲ್ಲದೆ ಅವರ ಜನ್ಮ ದಿನವಾದ ಸೆಪ್ಟೆಂಬರ್ 15 ರಂದು 'ಎಂಜಿನಿಯರರ ದಿನ' ವನ್ನಾಗಿ ಆಚರಿಸಿ ಅವರಿಗೆ ಅರ್ಥಪೂರ್ಣ ಗೌರವ ಸಲ್ಲಿಸಲಾಗುತ್ತಿದೆ. ಅಂದು ಎಂಜಿನಿಯರರು ಮಾತ್ರವಲ್ಲದೇ ಎಲ್ಲಾ ವರ್ಗದ ಜನರು ಅವರನ್ನು ಸಮ್ಮರಿಸುವಂತಹ ದಿನವಾಗಿದೆ ಎಂದರೆ ತಪ್ಪಾಗಲಾರದು.





# ಸನ್ಮಾರ್ಗ ತೋರೋ ಗುರುವೇ......

ಶ್ವೇತಾ ಜಿ.

**ಭಾರತೀಯ ಶಿಕ್ಷಣ ಕ್ಷೇತ್ರಕ್ಕೊಂದು ಅರ್ಥವತ್ತಾದ ಚೌಕಟ್ಟನ್ನು ನೀಡುವ ಮೂಲಕ ಶಿಕ್ಷಣ ಕ್ಷೇತ್ರ, ತತ್ವಜ್ಞಾನ, ದೇಶದ ಅಭಿವೃದ್ಧಿಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟದ್ದ ರಾಧಾಕೃಷ್ಣನ್ ಅವರು ಇಂದಿಗೂ ಭಾರತೀಯರ ಮನದಲ್ಲಿ ಅಚ್ಚಳಿಯದ ಛಾಪೊತ್ತಿದ್ದಾರೆ. ಇವರು ಓರ್ವ ಶ್ರೇಷ್ಠ ಶಿಕ್ಷಣ ತಜ್ಞರಾಗಿದ್ದರು.**

'ಗುರು ಬ್ರಹ್ಮ, ಗುರು ವಿಷ್ಣು, ಗುರು ದೇವೋ ಮಹೇಶ್ವರಹ:, ಗುರು ಸಾಕ್ಷಾತ್ ಪರಬ್ರಹ್ಮ: ತಸ್ಮಯಶ್ರೀ ಗುರುವೇ ನಮ:' ಈ ಒಂದು ಸಾಲನ್ನು ಒಮ್ಮೆ ನೆನೆದರೆ ಸಾಕು, ಪ್ರತಿಯೊಂದು ಜೀವಕ್ಕೂ ತನ್ನ ಗುರುವಿನ ನೆನಪಾಗುತ್ತದೆ. ಅದಲ್ಲದೇ ನಮ್ಮ ಸಂಪ್ರದಾಯದಲ್ಲಿ ಗುರುವಿನ ಮಹತ್ವವನ್ನು ನಾವೆಲ್ಲಾ ಕಾಣಬಹುದು. ಎಲ್ಲರಿಗೂ ಪ್ರತ್ಯಕ್ಷ ದೇವರೆಂದರೇ ತಾಯಿ–ತಂದೆಯ ಬಳಿಕದ ಸ್ಥಾನ ಗುರುವಿಗೆ ಮಾತ್ರ, ಗುರುವಿನ ಸ್ಥಾನ ತ್ರಿಲೋಕ ಸೃಷ್ಟಿಕರ್ತರಾದ ಬ್ರಹ್ಮ, ವಿಷ್ಣು, ಮಹೇಶ್ವರ ಎಲ್ಲರಿಗಿಂತಲೂ ಮಿಗಿಲಾದುದು. ಗುರು ಶಿಷ್ಯರ ಬಾಂಧವ್ಯ ತುಂಬಾ ಮಹತ್ತರವಾದುದು. ಒಬ್ಬ ಶಿಷ್ಯನಿಗೆ ಯಾವುದೇ ಸ್ವಾರ್ಥವಿಲ್ಲದೇ ಸನ್ಮಾರ್ಗ ತೋರುವ ನಿಜವಾದ ಪ್ರಭುವೇ ಗುರುಗಳು.

ಗುರು ಶಿಷ್ಯರ ಬಾಂಧವ್ಯದ ಬಗ್ಗೆ ನಾವು ಪುರಾತನ ಕಾಲದಿಂದಲೂ ಕೇಳಿದ್ದೇವೆ. ವೇದಗಳ ಕಾಲದಲ್ಲಿ ಗುರುಗಳಿಗೆ ವಿಶೇಷ ಸ್ಥಾನಮಾನ ನೀಡಲಾಗಿತ್ತು. ಋಗ್ವೇದದಲ್ಲಿ ಗುರುಕುಲ ಪದ್ಧತಿ ಜಾರಿಯಲ್ಲಿತ್ತು. ಆಶ್ರಮ ಪದ್ಧತಿಯಲ್ಲಿ ಮಕ್ಕಳು ತಮ್ಮ ಬಾಲ್ಯ ಹಾಗೂ ಯೌವ್ವನದಲ್ಲಿ ಗುರುವಿನ ಆಸರೆಯಲ್ಲಿರಬೇಕಾಗಿತ್ತು. ಉಪನಯನ ಆದ ಕೂಡಲೇ ಮಗುವನ್ನು ಗುರುವಿಗೆ ಒಪ್ಪಿಸಿ ಬಂದರೆ, ಮತ್ತೆ ಅವರನ್ನು ನೋಡುವುದು 20–25 ವರ್ಷಗಳ ನಂತರ. ಆಗಿನ ಪದ್ಧತಿ ಅಷ್ಟು ಕಟ್ಟುನಿಟ್ಟಾಗಿತ್ತು. ಗುರುಕುಲ ಪದ್ಧತಿಯಲ್ಲಿ ಎಲ್ಲರೂ ಸಮಾನರು, ಎಲ್ಲರಿಗೂ ಒಂದೇ ರೀತಿಯ ಪಾಠ ಪ್ರವಚನಗಳು ನಡೆಯುತ್ತಿದ್ದವು. ಹೆಚ್ಚಾಗಿ ವೇದಗಳ ಅಧ್ಯಯನವೇ ಆಗುತ್ತಿತ್ತು. ಋಗ್ವೇದದಲ್ಲಿ ಗಾರ್ಗಿಯಂತಹ ಸ್ತ್ರೀಯರು ಕೂಡ ವಿದ್ಯಾಭ್ಯಾಸದಲ್ಲಿ ತೊಡಗಿ, ಸಾಧನೆ ಮಾಡಿದ್ದಾರೆ. ಅಂದು ಜ್ಞಾನಾರ್ಜನೆಗಾಗಿ ಶಿಷ್ಯರೇ ಗುರುಗಳನ್ನರಸುತ್ತಾ ಸಾಗುತ್ತಿದ್ದರು.

ಕ್ರಿ.ಪೂ.5ನೇ ಶತಮಾನದಲ್ಲಿ ಜ್ಞಾನದಾಹ ಹೆಚ್ಚಾಗಿತ್ತು. ಅಂದಿನ ಶಿಕ್ಷಣ ಕಾಡುಗಳಲ್ಲಿ, ಮರದ ಕೆಳಗೆ ಅಥವಾ ಯಾವುದಾದರೂ



downloaded from: www.kpscvaani.com

ಮಂದಿರಗಳಲ್ಲಿ ನಡೆಯುತ್ತಿತ್ತು. ಈ ರೀತಿಯ ಮಂದಿರಗಳನ್ನು ಘಟಿಕಾಲಯಗಳು ಎನ್ನುತ್ತಿದ್ದರು. ಅಲ್ಲಿ ಅವರಿಗೆ ಬಿಲ್ವಿದ್ಯೆಗಳನ್ನು ಕೂಡ ಹೇಳಲಾಗುತ್ತಿತ್ತು. ಗುರುವಿನ ಆಶ್ರಯದಲ್ಲಿ ಕಲಿಯದ ವಿದ್ಯೆ ಅಪೂರ್ಣ ಎಂದು ಅವರು ನಂಬಿದ್ದರು. ಹೀಗೆ ಹಂತ ಹಂತವಾಗಿ ಬೆಳೆದು ಬಂದ ಗುರು ಶಿಷ್ಯರ ಸಂಬಂಧ ಇತ್ತೀಚಿನ ವರ್ಷಗಳಲ್ಲಿ ನಾಲ್ಕು ಕೋಣೆಗಳ ಮಧ್ಯದ ವಿದ್ಯಾಭ್ಯಾಸವಾಗಿದೆ. ಈ ಶಿಕ್ಷಣ ಪದ್ಧತಿಯಿರುವುದು ನಮ್ಮ ಭಾರತದಲ್ಲಿ ಮಾತ್ರ. ನಮ್ಮ ಶಿಕ್ಷಣ ಪದ್ಧತಿ ಇಡೀ ಜಗತ್ತಿಗೆ ಮಾದರಿಯಾಗಿದೆ.

ನಾವೆಲ್ಲಾ ಮಹಾಭಾರತದ ಏಕಲವ್ಯನ ಕಥೆ ಕೇಳಿದ್ದೇವೆ. ತನ್ನ ಗುರುವಾದ ದ್ರೋಣಾಚಾರ್ಯರಿಗೆ ತನ್ನ ಹೆಬ್ಬೆರಳನ್ನೇ ಕತ್ತರಿಸಿ ಕೊಟ್ಟಿದ್ದನ್ನು ನೆನೆದರೆ, ಒಂದು ಕ್ಷಣ ಏಕಲವ್ಯನ ಗುರುಭಕ್ತಿಯ ಪರಾಕಷ್ಠೆ ಅರಿಯಬಹುದು. ಆದರೆ, ಇಂದಿನ ಗುರು– ಶಿಷ್ಯರ ಸಂಬಂಧ ತನ್ನ ತಿರುಳನ್ನೇ ಕಳೆದುಕೊಂಡಿದೆ. ಇತ್ತೀಚೆಗೆ ಗುರುವಿಗೆ ವಿದ್ಯಾರ್ಥಿಗಳು ಸೌಜನ್ಯ ತೋರುವುದನ್ನೇ ಮರೆತಿದ್ದಾರೆ. ಹಿಂದಿನ ಕಾಲದಲ್ಲಿ ಶಿಷ್ಯರು ಗುರುಗಳನ್ನು ಅರಸುತ್ತಿದ್ದರೆ, ಇಂದಿನ ದಿನಮಾನಗಳಲ್ಲಿ ನಮ್ಮ ಶಿಕ್ಷಕರೇ ವಿದ್ಯಾರ್ಥಿಗಳನ್ನು ಹುಡುಕಿಕೊಂಡು ಸಾಗುವಂತಾಗಿದೆ. ಈ ದೃಶ್ಯವನ್ನು ನೆನೆದರೆ ನಮ್ಮ ಕಣ್ಣಾಲಿಗಳು ಒದ್ದೆಯಾಗುತ್ತವೆ.

ನಾವೆಲ್ಲಾ ಪ್ರತಿವರ್ಷ ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನವನ್ನು ಆಚರಿಸುತ್ತೇವೆ. ಅಂದು ಎಲ್ಲಾ ಶಾಲಾ ಕಾಲೇಜುಗಳಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುತ್ತೇವೆ. ನಾವು ನೋಡಿರುವ ಎಲ್ಲಾ ಶಿಕ್ಷಕರ ಜನ್ಮದಿನವನ್ನು ಬಿಟ್ಟು, ರಾಧಾಕೃಷ್ಣನ್ ಅವರ ಜನ್ಮದಿನವನ್ನೇ ಆಯ್ಕೆ ಮಾಡಿದ್ದೇಕೆ? ಎಂಬ ಪ್ರಶ್ನೆ ಮೂಡುವುದು ಸಹಜ. ಆ ಪ್ರಶ್ನೆಗೆ ಉತ್ತರ ಇಲ್ಲಿದೆ ನೋಡಿ. ಸರ್ವಪಲ್ಲಿ ರಾಧಾಕೃಷ್ಣನ್ ದೇಶ ಕಂಡ ಒಬ್ಬ ಶಿಕ್ಷಕರಲ್ಲಿ ಅಗ್ರಗಣ್ಯರಾಗಿದ್ದಾರೆ. ಮಾಜಿ ರಾಷ್ಟ್ರಪತಿ ಹಾಗೂ ಶಿಕ್ಷಕರಾಗಿ ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ್ದಾರೆ. ಎಷ್ಟೋ ಸಂವತ್ಸರಗಳು ಉರುಳಿದರೂ ಕೂಡ ಆದರ್ಶ ಶಿಕ್ಷಕರೆಂದರೆ ಎಲ್ಲರಿಗೂ ನೆನಪಾಗುವುದು ರಾಧಾಕೃಷ್ಣನ್. ಇಚ್ಛಾಶಕ್ತಿ, ಕ್ರಿಯಾಶಕ್ತಿ ಮತ್ತು ಜ್ಞಾನಶಕ್ತಿಯಿದ್ದರೆ, ಏನು ಬೇಕಾದರೂ ಸಾಧಿಸಬಹುದು ಎನ್ನುವುದಕ್ಕೆ ಉತ್ತಮ ಉದಾಹರಣೆ ಡಾ. ಸರ್ವಪಲ್ಲಿ ರಾಧಾಕೃಷ್ಣನ್. ಶಿಕ್ಷಕ, ಶಿಕ್ಷಣ ತಜ್ಞ, ತತ್ವಜ್ಞಾನಿ ಮತ್ತು ಭಾರತ ಕಂಡ ಮೊದಲ ಉಪರಾಷ್ಟ್ರಪತಿ ಇವರಾಗಿದ್ದು, ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಕಾರ್ಯವೈಖರಿ ಮೆರೆದಿದ್ದಾರೆ. ಇವರು ಶಿಕ್ಷಕರ ಬಗ್ಗೆ ಅಪಾರ ಪ್ರೀತಿ, ಗೌರವ, ನಿಷ್ಠೆ ಹೊಂದಿದ್ದರು. ಇಂದು ನಾವೆಲ್ಲಾ ಅವರ ಜನ್ಮದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸಿ, ಅವರ ಸಾಧನೆಗೆ ಗೌರವ ಸಲ್ಲಿಸುತ್ತಾ ಬರುತ್ತಿದ್ದೇವೆ.

ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರು ದಕ್ಷಿಣ ಭಾರತದ, ತಮಿಳುನಾಡಿನ 'ತಿರುತ್ತಣಿ' ಎಂಬಲ್ಲಿ 1818 ಸೆಪ್ಟೆಂಬರ್ 5 ರಲ್ಲಿ ಜನಿಸಿದರು. ತುಂಬಾ ಬಡತನವಿದ್ದ ಕಾರಣ ತಮ್ಮ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಸ್ಕಾಲರ್ ಶಿಪ್‌ನಲ್ಲೇ ಮುಗಿಸಿದರು. ಈಗಿನ ಚೆನ್ನೈನಲ್ಲಿ ತತ್ವಶಾಸ್ತ್ರ ವಿಷಯದ ಮೇಲೆ ಬಿ.ಎ ಮತ್ತು ಎಂ.ಎ ಪದವಿ ಮುಗಿಸಿದರು.

1909 ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಹಾಯಕ ಉಪನ್ಯಾಸಕರಾಗುವುದರ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದರು. ಅಪಾರ ಜ್ಞಾನ ಸಂಪತ್ತನ್ನು ಹೊಂದಿದ್ದ ಇವರು, ಪ್ರತಿಯೊಬ್ಬ ವಿದ್ಯಾರ್ಥಿಯ ಮನದಲ್ಲಿ ಮನೆಮಾಡಿದರು. 1918 ರಲ್ಲಿ ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಒಂದಾದ 'ಮೈಸೂರು ವಿಶ್ವವಿದ್ಯಾಲಯದ ಮಹಾರಾಜ ಕಾಲೇಜಿನಲ್ಲಿ' ತತ್ವಜ್ಞಾನ ವಿಭಾಗದ ಉಪನ್ಯಾಸಕರಾಗಿ ಆಯ್ಕೆಯಾದರು. 1962 ರಲ್ಲಿ ಇವರಿಗೆ ಉಪರಾಷ್ಟ್ರಪತಿಯಾಗಿ ಆಯ್ಕೆಯಾಗಿರುವುದಾಗಿ ದೆಹಲಿಯಿಂದ ಕರೆ ಬಂದಿತು. ಆಗ ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ತಾವೆ ತಯಾರು ಮಾಡಿದ ಜಟಕಾಬಂಡಿಯಲ್ಲಿ ಅವರನ್ನು ಕೂರಿಸಿಕೊಂಡು, ಕುದುರೆಗಳ ಜಾಗದಲ್ಲಿ ತಾವೇ ಜಟಕಾಬಂಡಿಯನ್ನು ಎಳೆದುಕೊಂಡು ತಮ್ಮ ನೆಚ್ಚಿನ ಶಿಕ್ಷಕರನ್ನು ಮೈಸೂರಿನ ರೈಲ್ವೆ ನಿಲ್ದಾಣದವರೆಗೂ ಕರೆತಂದರು. ಇವರ ಗುರುಭಕ್ತಿ ಕಂಡ ರಾಧಾಕೃಷ್ಣನ್ ಅವರು ಭಾವೋದ್ವೇಗಕ್ಕೆ ಒಳಗಾಗಿದ್ದರು.

ರಾಧಾಕೃಷ್ಣನ್ ಅವರು ಸಪ್ತಸಾಗರಗಳಾಚೆ ಭಾರತದ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದು, ಭಾರತೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಭಾರತೀಯ ಸನಾತನ ಧರ್ಮ ಮತ್ತು ತತ್ವಜ್ಞಾನ ಕುರಿತು ವಿದೇಶಿಯರಿಗೆ ಮನಮುಟ್ಟುವಂತೆ ಮಾಡಿದ್ದಾರೆ. ಇವರು ರಾಷ್ಟ್ರಪತಿಯಾದಾಗ ಸ್ನೇಹಿತರು ಹಾಗೂ ಶಿಷ್ಯರು ಸೆಪ್ಟೆಂಬರ್ 5 ರಂದು ಹುಟ್ಟು ಹಬ್ಬ ಆಚರಿಸಲು ರಾಧಾಕೃಷ್ಣನ್ ಬಳಿ ಹೋದಾಗ, ಅವರು ಶಿಕ್ಷಕ ಹುದ್ದೆಯನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಕಾರಣ, ತನ್ನ ಜನ್ಮದಿನವನ್ನು 'ಶಿಕ್ಷಕರ ದಿನ'ವನ್ನಾಗಿ ಆಚರಿಸುವಂತೆ ಅಪೇಕ್ಷೆ ವ್ಯಕ್ತಪಡಿಸಿದರು. ಅಂದಿನಿಂದಲೇ (1962) ಸೆಪ್ಟೆಂಬರ್ 5 ಶಿಕ್ಷಕರ ದಿನವಾಯಿತು.

ಭಾರತೀಯ ಶಿಕ್ಷಣ ಕ್ಷೇತ್ರಕ್ಕೊಂದು ಅರ್ಥವತ್ತಾದ ಚೌಕಟ್ಟನ್ನು ನೀಡುವ ಮೂಲಕ ಶಿಕ್ಷಣ ಕ್ಷೇತ್ರ, ತತ್ವಜ್ಞಾನ, ದೇಶದ ಅಭಿವೃದ್ಧಿಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದ ರಾಧಾಕೃಷ್ಣನ್ ಅವರು ಇಂದಿಗೂ ಭಾರತೀಯರ ಮನದಲ್ಲಿ ಅಚ್ಚಳಿಯದ ಛಾಪೊತ್ತಿದ್ದಾರೆ. ಇವರು ಓರ್ವ ಶ್ರೇಷ್ಠ ಶಿಕ್ಷಣ ತಜ್ಞರಾಗಿದ್ದರು.

ಮಕ್ಕಳಿಗೆ ಉತ್ತಮ ನಡವಳಿಕೆ, ಸಂಸ್ಕಾರ ಮತ್ತು ನೈತಿಕತೆ ಕಲಿಸುವ ಶಿಕ್ಷಕ ಮೊದಲು ತಾನು ಅವುಗಳನ್ನೆಲ್ಲಾ ರೂಢಿಸಿಕೊಂಡಿರಬೇಕು. ಶಿಕ್ಷಕರ ವೈಯಕ್ತಿಕ ಜೀವನ ತೆರೆದ ಪುಸ್ತಕದಂತಿರಬೇಕು, ಅದು ಉಳಿದವರಿಗೆ ಮಾದರಿಯಾಗಿರಬೇಕು. ಜೊತೆಗೆ ಸಮಾಜದಲ್ಲಿ ಉತ್ತಮ ಗೌರವವನ್ನು ಸಂಪಾದಿಸಿರಬೇಕು, ಹೀಗೆ ಇನ್ನೂ ಅನೇಕ ಉತ್ತಮ ಗುಣಗಳಿರುವ ಶಿಕ್ಷಕ ಒಬ್ಬ ಮಾರ್ಗದರ್ಶಕ ಹಾಗೂ ಒಬ್ಬ ಆದರ್ಶ ಶಿಕ್ಷಕನಾಗುವುದರಲ್ಲಿ ಎರಡು ಮಾತಿಲ್ಲ.

ನಮ್ಮ ಜೀವದಲ್ಲಿ ಯಾವುದೇ ಪ್ರತಿಫಲಾಕ್ಷೆಯಿಲ್ಲದೇ, ನಿಸ್ವಾರ್ಥ ಮನೋಭಾವದಿಂದ ಸೇವೆ ಮಾಡುವ ನಮ್ಮ ಗುರುಗಳಿಗೆ ನಾವೆಂದು ಚಿರಋಣಿಯಾಗಿರೋಣ. ಎಲ್ಲಾದರೂ ನಿಮ್ಮ ಶಿಕ್ಷಕರು ಸಿಕ್ಕರೆ ಗುರುತು ಹಿಡಿದು ಮಾತನಾಡಿಸಿ, ಅವರಿಗೆ ಮರ್ಯಾದೆ ಕೊಡದಿದ್ದರೂ ಪರವಾಗಿಲ್ಲ, ಅವರನ್ನು ಅಣುಕಿಸಿ ತಮಾಷೆ ಮಾಡಬೇಡಿ. ನಮ್ಮ ಕಣ್ಣಿಗೆ ಕಾಣುವ ದೈವವೆಂದರೆ ನಮ್ಮ ಗುರುಗಳು. ಅವರನ್ನು ಪ್ರೀತಿಸಿ, ಪೂಜಿಸಿ, ಗೌರವಿಸಿ ಎಂಬುದು ನಮ್ಮ ಆಶಯವಾಗಿದೆ. ■



# ಕವಿ ಕಲ್ಪನೆಯ ಗಣೇಶ

ಡಾ. ಗುರುರಾಜ ಪೋಶೆಟ್ಟಿಹಳ್ಳಿ

ಸಾಹಿತ್ಯ ಕೃತಿಗಳ ಆರಂಭಕ್ಕೂ ಗಣಪತಿಯ ಸ್ಮರಣೆಯ ಸಾಲುಗಳು ಇರಲೇಬೇಕು. ನವೋದಯ ಕವಿಗಳು 'ಪ್ರಕೃತಿಯಾರಾಧನೆಯೇ ಪರಮಾರಾಧನೆ' ಎಂಬ ತತ್ವವನ್ನು ನಂಬಿದವರು. ಇನ್ನೂ ಮುಂದುವರೆದು ಆಧುನಿಕರು, ಧೀನ ದಲಿತರಲ್ಲಿ ಸಮಾಜದ ಕಟ್ಟಕಡೆಯ ಮನುಷ್ಯನ ಆತ್ಮದಲ್ಲಿ ದೇವರನ್ನು ಗುರುತಿಸುತ್ತಾರೆ.

ಕುವೆಂಪುರವರ ಭಗವಂತ ಸ್ವರೂಪದ ಕಲ್ಪನೆ ಆ ಯುಗದ ಸಂವೇದನೆಗಳಿಂದ ರೂಪುಗೊಂಡಿದೆ.

ಪ್ರಾಕೃತಿಕ ಸತ್ಯಗಳನ್ನು ಪೂಜಿಸುವ ನಂಬಿಕೆ ಇಲ್ಲಿ ಮುಖ್ಯ. ಅಗ್ನಿ ಹಂಸ ಕವನ ಸಂಕಲನದಲ್ಲಿ ರಚಿತಗೊಂಡಿರುವ ಕುವೆಂಪುರವರ 'ಗಣೇಶ ಗಾಥಾ' ಒಂಬತ್ತು ಮುದ್ರಿತ ಪುಟಗಳ ಸುದೀರ್ಘ ಕಥನ ಕವನ. ಇದೊಂದು ರೀತಿಯ 'ಗಣೇಶ ಚರಿತ್ರೆ'. ಸುಮಾರು 265 ಸಾಲುಗಳ ಹರಹನ್ನು ಹೊಂದಿದೆ. ಇದರಲ್ಲಿ ಗೌರಿ ಗಣೇಶನ ಆಗಮನ, ಆತಿಥ್ಯ, ಪ್ರಯಾಣ ಎಂಬ ಮೂರು ಭಾಗಗಳಿವೆ.

ಕವನದ ವಸ್ತು, ಶೀರ್ಷಿಕೆಯೇ ಹೇಳುವಂತೆ 'ಗಣೇಶ ಗಾಥಾ' ಎಂದರೆ ಸ್ತುತಿ, ಹಾಡು. ಅದರೊಂದಿಗೆ ಗೌರಿಯ ಗಾಥಾ ಕೂಡ ಉಂಟು. ಜನರ ರೂಢಿಯಲ್ಲಿರುವ ಆಚರಣೆಗಳಲ್ಲಿ ಪ್ರತಿಬಿಂಬಿತವಾಗುತ್ತಿರುವ ಅವರ ನಿರೀಕ್ಷೆ, ಹಾರೈಕೆ, ಸನ್ಮಂಗಳದ ಬಯಕೆ ಇವೆಲ್ಲವೂ ಈ ನೀಳ್ಗವನದಲ್ಲಿ ಹಾಸು ಹೊಕ್ಕಾಗಿದೆ. ನಮ್ಮ ಪಾಲಿಗೆ ಈ ದೇವತೆಗಳು ಆತ್ಮೀಯರಾದ ಬಂಧು–ಬಳಗದವರೇ ಹೊರತು ದೂರದ ವಿಗ್ರಹಗಳಲ್ಲ.

ಎಂತಹ ನಾಸ್ತಿಕರನ್ನೂ, ಕಟ್ಟಾ ವಿಚಾರವಾದಿಗಳನ್ನು ಗಣೇಶನ ಆತ್ಮೀಯ ವಲಯದ ಆಜನ್ಮ ಸದಸ್ಯರನ್ನಾಗಿ ಮಾಡುವ ಶಕ್ತಿ ಈ ಕವನಕ್ಕುಂಟು. ಗಾಥಾ ಆರಂಭವಾಗುವುದು ನೀಲವ್ಯೋಮ ವಿಶಾಲಪಥದಲ್ಲಿ ಶ್ರಾವಣನೀರದ ನೀಲರಥದಲಿ. ಅವರು ಏರಿ ಬರುತಿರುವ ಮುಗಿಲಿನ ತೇರಿಗೆ ಬೆಳ್ಳಕ್ಕಿಯ ಸಾಲೇ ತೋರಣ, ಹೂಮಾಲೆ, ಕುಂಕುಮ ವರ್ಣದ ಕೊಕ್ಕಿನ ಹಸುರು ಗಿಳಿಗಳೇ ಅಕ್ಷತೆ. ಹೊಸ ಅತಿಥಿಗಳನ್ನು ಪ್ರೀತಿಯಿಂದ ಕಾಣುತ್ತಿರುವ ಬನದೇವಿ ಚಿಗುರುತ್ತಿದ್ದಾಳೆ. ಮಲೆನಾಡಿನಲ್ಲಿ ಹುಟ್ಟಿ, ಬೆಳೆದು ಅಲ್ಲಿನ ಸೌಂದರ್ಯವನ್ನು ಕಣ್ಣಾರೆ ಕಂಡು ಮೈ ಮರೆತಿರುವ ಕವಿ ಚೇತನಕ್ಕೆ ಮಾತ್ರ ಇಂಥ ತೇರಿನ ಕಲ್ಪನೆ ಸಾಧ್ಯವಾದೀತು.

ತೇರು ಬಂದಿಳಿಯುತ್ತಿದ್ದಂತೆ ಭಾರತದ ಕನ್ನಡನಾಡಿನ ವೈಶಿಷ್ಟ್ಯವನ್ನು ವರ್ಣಿಸುವ ಅವಕಾಶವನ್ನು ಕವಿ ಬಳಸಿಕೊಂಡಿದ್ದಾರೆ. ಇಡೀ ಪೃಥ್ವಿಗೋಲವನ್ನು ಸುತ್ತಿ ಬಂದರೂ ಗೌರಿ–ಗಣೇಶರು ಇಳಿಯ ಬಯಸಿದ್ದು ಪುಣ್ಯ ಹಿಮಾಚಲ ಗಿರಿಶಿಖರದಲ್ಲೇ, ಅದರಲ್ಲೂ ಪೂಜಾ ಕೈಂಕರ್ಯವನ್ನು ಸ್ವೀಕರಿಸಲು ಬಂದಿದ್ದು ಕನ್ನಡ ನಾಡನ್ನು ಅರಸಿಯೇ.





downloaded from: www.kpscvaani.com

ಲೆಕ್ಕಣಿಕೆಯಿಂದ ಯಾವ ದೌತಿಯನ್ನು ಬಳಸಿ ಬರೆದನೋ ಆ ಲೆಕ್ಕಣಿಕೆ ಹಾಗೂ ದೌತಿಯನ್ನು ತನಗೆ ಕೊಡೆಂದು ಬೇಂದ್ರೆ ಬೆನಕನನ್ನು ಕೇಳುವ ಪರಿಯೇ ಅವರ ಕವನದಲ್ಲಿನ ವಿನೂತನತೆ.

ತಂತ್ರವೇ ಆಗಲಿ, ಮಂತ್ರವೇ ಆಗಲಿ, ತಂತ್ರ ತಪ್ಪಿದರೆ ಎಲ್ಲವೂ ಅತಂತ್ರ, ಸ್ವಂತ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಲ್ಲಿ ಗಣಪತಿಯ ಸ್ಮರಣೆ ಮಾಡಿ ಪ್ರಜ್ಞಾವಂತನಾಗುವುದು ಹೇಗೆ ಎಂಬ ಉತ್ತರ ಬೇಂದ್ರೆಯವರ ಕವನದಲ್ಲಿ ಅಭಿವ್ಯಕ್ತಿಗೊಂಡಿದೆ.

ಬೇಂದ್ರೆ ಪೂರ್ವಜರಾದ ವಿಲ್ಲಂ ಭಟ್ಟರು ಸ್ವಪ್ನಾದೇಶಿತರಾಗಿ ರತ್ನಗಿರಿಯಿಂದ ಕರ್ನಾಟಕಕ್ಕೆ ಬಂದದ್ದು ಗಣಪತಿ ಪೂಜಾರಿಗಳಾಗಿ. ಆದರೆ ಈ ಮನೆತನಕ್ಕೆ ಸೇರಿದ ದ.ರಾ.ಬೇಂದ್ರೆ ಗಣಪತಿಯ ಸಾಹಿತ್ಯಾರಾಧಕರಾಗಿ ವಿಶ್ವಕ್ಕೆ ಕೊಟ್ಟಿದ್ದು ನವ ಪ್ರಕಾಶವನ್ನು. ಬೇಂದ್ರೆಯವರಿಗೆ ಸಂಖ್ಯಾ ರಹಸ್ಯಗಳನ್ನು ಸ್ವಪ್ನದಲ್ಲಿ ವಿವರಿಸಿದನು.

ತಾಯಿ ಅಂಬಿಕೆ ಮತ್ತು ಮಗ ಗಣಪತಿ ಇವರ ಆನಂದದ ಶಿಖರವಾದ ಗಂಡಸ್ಥಳವನ್ನು ಬೇಂದ್ರೆ ಮನತುಂಬಿ ಸ್ತುತಿಸಿದ್ದಾರೆ. ಮೂಲಾಧಾರ ಚಕ್ರದಲ್ಲಿ ಸ್ಥಾನ ಪಡೆದ ಗಣಪತಿ, ಕವಿಗೆ ತನ್ನ ಮಾಹಿತಿಯನ್ನು ವಿವರಿಸಿದ ಬಗೆ ಹೀಗಿದೆ : ನಾನು ಹೊಲಸಿನ ಹೊಲಿಗೆ ಬಿಚ್ಚಿ ಬಂದ ಸುಗಂಧ . ಭಾರತೀಯ ಪಾರಂಪರಿಕ ದೃಷ್ಟಿ ಮತ್ತು ಆಧುನಿಕ ವಿಜ್ಞಾನಿಗಳ ಸಂಬಂಧ ಸೂತ್ರ ಇಲ್ಲಿದೆ. ಇಲ್ಲಿ ರಾಸಾಯನಿಕ ಶಾಸ್ತ್ರದ ಸಂಕೇತಗಳನ್ನು ಬಳಸಿದ್ದು ಅತ್ಯಂತ ವಿನೂತನ ಪ್ರಯೋಗ, ತಂತ್ರಶಾಸ್ತ್ರದ ಮೇರೆಗೆ ಈ ವಿವರಣೆ ಇರುವುದು ಗಮನಾರ್ಹ.

ಗಣಪತಿಯ ಮದುವೆ ಆಗಿಲ್ಲ ಎಂಬುದು ನಿಜವಿದ್ದು, ಕಾಮನ ಪ್ರೀತಿ–ರತಿಯಾಗುವಂತೆ ; ಶಂಕರನ ಸತಿ ಪಾರ್ವತಿಯಾಗುವಂತೆ; ಅಭಿವೃದ್ಧಿ ಮತ್ತು ಫಲದ ಸಂಕೇತವಾಗಿ ಗಣಪತಿಯೊಂದಿಗೆ ಬುದ್ಧಿ ಮತ್ತು ಸಿದ್ಧಿ ಜೊತೆಗಿದ್ದಾರೆ. ಇದು ಆಧ್ಯಾತ್ಮದ ಹಾದಿ. ಬೇಂದ್ರೆಯವರು ಅವನಿಂದ ಅಪೇಕ್ಷಿಸಿದ್ದು ಎಲ್ಲರಿಗೂ ನವೋ ನವ ಮತಿಯ ಬುದ್ಧಿಯ ದಾನ. ಇದು ಗಣಪತಿ ಮಾಡಬೇಕಾದ ವಿಶ್ವವ್ಯಾಪಿ ಅನುಗ್ರಹ.

ಗಣಪತಿಯ ಉಪಾಸನೆಯಲ್ಲಿ ಪಾವಿತ್ರ್ಯದ ಜೊತೆಗೆ ಅತಿರೇಕಗಳು ಸೇರಿಕೊಳ್ಳುತ್ತಾ ಸಾಗಿದೆ. ವ್ಯವಹಾರ ನಿಪುಣನಾದ ಒಬ್ಬ ವ್ಯಕ್ತಿ ಗಣಪತಿಯ ಮೂರ್ತಿಯನ್ನು ಬೆಲ್ಲದಿಂದ ಮಾಡಿ, ನೈವೇದ್ಯಕ್ಕಾಗಿ ಅವನ ಕುಂಡಿಯ ಬೆಲ್ಲವನ್ನೇ ಉಪಯೋಗಿಸುತ್ತಾನೆ ಎಂಬ ಒಂದು ಘಟನೆ ಇಲ್ಲಿ ವರ್ಣಿಸಲಾಗಿದೆ. ಇಂಥ ಜಾಣತನ ಉತ್ತಮ ಲಕ್ಷಣವಲ್ಲ ಎಂಬ ಎಚ್ಚರಿಕೆಯನ್ನು ಬೇಂದ್ರೆ ಕೊಟ್ಟಿದ್ದಾರೆ. ಆರಾಧನೆಯಲ್ಲಿಯೂ ಸ್ವಾರ್ಥ ಸಾಧಕರು ಪರರ ಯಾವ ಸುಖವನ್ನೂ ಬಯಸಲಾರರು ಎಂಬ ಸೂಚನೆ ಇಲ್ಲಿದೆ. ಇಂಥವರಿಗೆ ಗಣಪತಿ ವಿಘ್ನಗಳನ್ನು ನಿರ್ಮಿಸಿ ಬುದ್ಧಿ ಕಲಿಸದೇ ಬಿಡನು.

ಗಣಪತಿಯ ನಾಲ್ಕನೆಯ ಆಯಾಮದ ಕುರಿತು ಚಿಂತನೆ ಒಂದು ಪದ್ಯದಲ್ಲಿದೆ. ತಂತಿ ಎಂಬುದು ಜೀವನದ ಸೂತ್ರ, ಪ್ರತಿಯೊಬ್ಬನ ಜೀವನ ಸೌಖ್ಯಕ್ಕೆ ನಾಲ್ಕು ಸೂತ್ರಗಳಿರುತ್ತವೆ. ಹೊನ್ನು, ಹೆಣ್ಣು ಮತ್ತು ಗಂಡಿನ ದರ್ಪ ಇವು ಮೂರು ಆಯಾಮಗಳು, ಮಿತಿಗಳು. ಇವುಗಳಿಂದ ಮನುಷ್ಯನನ್ನು ದಾಟಿಸಬಲ್ಲವನು ಗಣಪತಿ. ಇವನೇ ನಾಲ್ಕನೇ ತಂತಿ.

ಜಗತ್ತಿನಲ್ಲಿ ಅನ್ನದ ಕೊರತೆ ಇಲ್ಲ. ಅನ್ನವನ್ನು ಸಂಗ್ರಹಿಸಿ, ಪರರಿಗೆ ಸಿಗಲಾರದಂತೆ ಮಾಡುವ ಧನ ಮೋಹಕರ ದುರ್ಬುದ್ಧಿಯೇ ಇದೆ. ಇದರ ಪರಿಹಾರವಾಗಿ ಎಲ್ಲರಲ್ಲಿ ಸಹಭೋಜನ ಸುಖದ ಸುಬುದ್ಧಿಯ ಉದಯವಾಗಲಿ ಎಂದು ಬೇಂದ್ರೆ ಪ್ರಾರ್ಥಿಸಿದ್ದಾರೆ. ಎಡ, ಬಲ, ಮತ್ತು ನೇರ ಸೊಂಡಿಲ ವೈವಿಧ್ಯ ಮತ್ತು ಕಡಲೆ, ಸಾಸಿವೆ ಕಾಳಿನಿಂದ ಪ್ರಾರಂಭವಾಗಿ ಗಣಪತಿಯ ಬೃಹತ್ ಆಕಾರದ ಮೂರ್ತಿ ಶಿಲ್ಪ ಅಸ್ತಿತ್ವದಲ್ಲಿದೆ.ಇದು ಅಸಮಾನತೆಯಲ್ಲವೆ ಎಂದು ಬೇಂದ್ರೆಯವರು ಗಣಪತಿಗೆ ಪ್ರಶ್ನೆ ಕೇಳಿದ್ದಾರೆ. ಅಸಮಾನತೆ, ಒಡಕು ಹುಟ್ಟಿಸುವ ದುರ್ಬುದ್ಧಿ ಮತ್ತು ವಿರೋಧಿಗಳ ಒಳಸಂಚಿನ ಮೋಸ ಪ್ರವೃತ್ತಿಗೆ ಬೆಂಬಲಿಸುವ ಗಣಪತಿಯೇ ಸಮಸ್ತ ಜನತೆಯ ಕಲ್ಯಾಣ ಆಗುವುದು ಹೇಗೆ ಸಾಧ್ಯ ಎಂದಿದ್ದಾರೆ.

ವಿನಾಯಕ ವಿದ್ಯಾ ಪ್ರದಾಯಕ ದೈವತ. ಜನರು ವಿದ್ಯಾಸಂಪನ್ನರಾಗಲು ಗಣಪತಿ ಮತ್ತು ಸರಸ್ವತಿ ಕಾರಣರು. ಪ್ರತಿ ಗಣೇಶ ಚೌತಿಗೆ ಗಣಪತಿ ಮಳೆ ಹಾಗೂ ಬೆಳೆ ಕೊಡಲಿ. ಆ ಅನ್ನ ತಿಂದ ಜನತೆಗೆ ಒಳ್ಳೆಯ ಜಾಣ, ಸುಬುದ್ಧಿಯ ಸಂತಾನ(ಮಗ, ಮಗಳು) ಪ್ರಾಪ್ತಿಯಾಗಲಿ.

ಬೇಂದ್ರೆಯವರಿಗೆ ದೇವರ ಭಯಕಾರಕ ಭೂಮಿಕೆ ಎಂದೆಂದೂ ಒಪ್ಪಿಗೆಯಾಗಿರಲಿಲ್ಲ. ಕೇಡನ್ನು ಬಯಸುವವ ಮತ್ತು ಮಾಡುವವ ದೇವರೇ ಅಲ್ಲ ಎಂಬುದು ಬೇಂದ್ರೆಯವರ ಖಚಿತವಾದ ನಿಲುವು. ಸಕಲರಲ್ಲಿ ಪ್ರೇಮದ ಒಲವನ್ನು ನಿರ್ಮಿಸುವ ಜ್ಞಾನ ಪ್ರಕಾಶವೇ ದೇವರು ಎಂಬುದು ಅವರ ವ್ಯಾಖ್ಯೆ.

ಸಕಲ ದೇವತಾ ಆರಾಧನೆಯ ಮುಖ್ಯಗುರಿ ವ್ಯಷ್ಟಿಯ ಭೋಗಲಾಲಸೆ. ಇದನ್ನು ಬೇಂದ್ರೆಯವರು ಹದಿಮೂರು ಕವನಗಳಲ್ಲಿ ವಿರೋಧಿಸಿದ್ದಾರೆ. ಸಮಷ್ಟಿಯ ಸಕಲರ ಸಮ್ಯಕ ಸಂತೋಷ, ಕಲ್ಯಾಣ, ಅಭಿವೃದ್ಧಿಯ ಉಪಾಸಕರು ಬೇಂದ್ರೆ, ಇದು ಬೇಂದ್ರೆ ಕಾವ್ಯದ ಗುರಿ. ಗಣಪತಿ ನಾದ, ಕಲ್ಪನೆಗಳ ಅತೀತ.

ಪ್ರತಿಯೊಬ್ಬನ ಪ್ರೇಮದ ಸಂಕೇತವಾದ ತುಟಿಯ ಮುದ್ದು ಅವನಿಗೆ ಬೇಕಾಗಿದೆ. ನಾಲಗೆ, ತುಟಿ ಮತ್ತು ದಂತ (ಹಲ್ಲು)ಗಳ ಸಹಕಾರದಿಂದ ಅಕ್ಷರ ಉಚ್ಚಾರ ಸಾಧ್ಯ, ಎಲ್ಲ ವರ್ಣಗಳ ವಿಲಾಸವೇ ಸಾಹಿತ್ಯ ಬೇಂದ್ರೆಯವರ ಗಣಪತಿಯ ವಾಹನ ಇಲಿ. ಈ ಮಾರ್ಗದರ್ಶನ ಗಣಪತಿಯೇ ಮಾಡಿದ್ದಾನೆ.

ಅವರಿಗೆ ಇನ್ನೊಬ್ಬರ ಅನುಭವ ಅಪ್ರಸ್ತುತ. ಅವರು ನಂಬಿದ್ದು ಪ್ರತ್ಯಕ್ಷ ಪ್ರಮಾಣ. ಪ್ರತ್ಯಯ ಎಂಬುದಕ್ಕೆ ವಿಶ್ವಾಸ, ಜ್ಞಾನ, ಸ್ವಾನುಭವ, ಕಾರಣ ಮತ್ತು ಅಧೀನ ಎಂಬ ಅರ್ಥಗಳಿದ್ದು ಅದರ ಸಾರ್ಥಕತೆ ಬೇಂದ್ರೆಯವರ ಗಣಪತಿ ಕವನ ಗುಚ್ಛದಲ್ಲಿದೆ. 'ಹುಟ್ಟು ಇರುವಿಕೆ ಸಾವು ಮೀರಿದ ವರತ್ರಯಾಧಾರಿ' ಅಂಬಿಕಾತನಯದತ್ತ ಕಾವ್ಯನಾಮಧಾರಿ ದ. ರಾ. ಬೇಂದ್ರೆಯ ಸ್ಮರಣೆಯನ್ನು ಶಾಶ್ವತಗೊಳಿಸಲು 'ಬೇಂದ್ರೆ ಕಂಡ ಬೆನಕ' ಎಂಬ ವಿದ್ಯಾ ವಿನಾಯಕ ದೇವಾಲಯವು ಅವರ 107ನೇ ಜನ್ಮ ದಿನದ ಪ್ರಯುಕ್ತ ಅಪೂರ್ವ ಸ್ವರೂಪ ತಾಳಿ ನಿಂತಿದೆ.

ಅಂಬಿಕಾತನಯದತ್ತರು ಸೃಷ್ಟಿಕರ್ತ ವಿನಾಯಕನನ್ನು ಕುರಿತು ರಚಿಸಿದ 15 ಕವನಗಳು ಈ ದೇವಳದ ಮೈಯಾಗಿ, ಕಪ್ಪು ಶಿಲೆಯಲ್ಲಿ ಕೆತ್ತನೆಗೊಂಡು ಅರಳಿ ನಿಂತಿವೆ.





# ಸಾಮೂಹಿಕ ಸಂಕಲ್ಪದಲ್ಲಿ ಅಭಿವೃದ್ಧಿಗೊಂಡ ಕೆರೆಗಳು

ಕಿಶನ್‌ರಾವ್ ಕುಲಕರ್ಣಿ

ಸಾರ್ವಜನಿಕರು, ರೈತರು ಸಂಕಲ್ಪಿಸಿದಂತೆ ಜನರ ಸಹಭಾಗಿತ್ವದಲ್ಲಿ ಆರಂಭಗೊಂಡ ಕೊಪ್ಪಳ ಜಿಲ್ಲೆಯ ನಾಲ್ಕಾರು ಬೃಹತ್ ಕೆರೆಗಳ ಹೂಳೆತ್ತುವ ಮತ್ತು ಅಭಿವೃದ್ಧಿಪಡಿಸುವ ಕಾಯಕ ಫಲ ನೀಡಿದೆ. ಮಳೆಯ ನೀರನ್ನು ಕೆರೆಯಲ್ಲಿ ವ್ಯವಸ್ಥಿತವಾಗಿ ಸಂಗ್ರಹಿಸುವ ಮೂಲಕ, ಸುತ್ತಲಿನ ಜನರ ಬದುಕನ್ನು ಹಸನಗೊಳಿಸುವ ಸಂಕಲ್ಪದೊಂದಿಗೆ ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ನಿಡಶೇಸಿ ಕೆರೆ ಅಭಿವೃದ್ಧಿ ಕೆಲಸ ಅಂದುಕೊಂಡಂತೆ ಸುಗಮ ರೀತಿಯಲ್ಲಿ ಮತ್ತು ಅಚ್ಚುಕಟ್ಟಾಗಿ ಮುಗಿದಿದೆ.

ಈ ಕೆರೆಗಳು ಉಳಿದ ಜಿಲ್ಲೆಗಳ ಕೆರೆ ಅಭಿವೃದ್ಧಿಗೆ ಪ್ರೇರಣೆಯಾಗುತ್ತಿರುವುದು ಹೊಸ ಬೆಳವಣಿಗೆಯಾಗಿದೆ. ಸಾರ್ವಜನಿಕರ ಶಕ್ತಿಯಿಂದ ಸಿದ್ಧವಾಗಿರುವ ಜಿಲ್ಲೆಯ ಈ ಕೆರೆಗಳ ಪರಿಸರದಲ್ಲಿ ಉತ್ತಮ ಮಳೆಯಾದರೆ, ಬರಡಾಗಿರುವ ಸಾವಿರಾರು ಎಕರೆ ಭೂಮಿಯಲ್ಲಿ ಹಸಿರು ಬೆಳೆಯ ಪಸಿರಿ ಕಾಣುವಂತಾಗುತ್ತದೆ.

350 ಎಕರೆ ವಿಸ್ತೀರ್ಣದ ನಿಡಶೇಸಿ ಕೆರೆಯಲ್ಲಿ ಸುಮಾರು 288 ಎಕರೆ ಪ್ರದೇಶದಲ್ಲಿ ನೀರು ನಿಲ್ಲುವ ಸಾಮರ್ಥ್ಯ ಹೊಂದಿದೆ. ಕೆರೆ ಸಂಪೂರ್ಣ ಹೂಳು ತುಂಬಿಕೊಂಡಿದ್ದರಿಂದ ಪ್ರತಿವರ್ಷ ಸಾಕಷ್ಟು ನೀರು ಪೋಲಾಗುತ್ತಿತ್ತು, ನಿರ್ವಹಣೆ ಇಲ್ಲದ ಕಾರಣವಾಗಿ ಕೆರೆಯಂಗಳದಲ್ಲಿ ಮುಳ್ಳುಕಂಟಿ, ಜಲಕಸ, ಹೂಳಿನಿಂದ ತುಂಬಿ ದುಸ್ಥಿತಿಗೆ ಒಳಗಾಗಿತ್ತು, ಆದರೆ ಸಾರ್ವಜನಿಕರ ಪರಿಶ್ರಮದಿಂದಾಗಿ ಈಗ ಅಗಾಧ ರೀತಿಯಲ್ಲಿ ಕೆರೆ ಬದಲಾಗಿದ್ದು, ಸಣ್ಣ ಅಣೆಕಟ್ಟೆಯನ್ನು ಹೋಲುವಂತಿದೆ. ಜನರ ಬೆವರಿನ ಕೋಟ್ಯಾಂತರ ರೂಪಾಯಿ ಹಣದಿಂದ ಇಂಥ ಅದ್ಭುತವಾದ ಕೆಲಸ ನಡೆದಿರುವುದು ರಾಜ್ಯದಲ್ಲಿ ಇದೇ ಮೊದಲು. ಜನರು ಕೆರೆಯ ಕಾಮಗಾರಿ ನಡೆಯಲು ನಿರೀಕ್ಷೆಗೂ ಮೀರಿ ಸಹಕರಿಸುವ ಮೂಲಕ ಸಾಮಾಜಿಕ ಬದ್ಧತೆಯನ್ನು ಪ್ರದರ್ಶಿಸಿದ್ದರಿಂದ ಬೃಹತ್ ಪ್ರಮಾಣದಲ್ಲಿ ಕೆಲಸ ನಡೆಸಲು ಇಲ್ಲಿ ಸಾಧ್ಯವಾಗಿದೆ.





downloaded from: www.kpscvaani.com

ಆವಿಷ್ಕಾರಕ್ಕೆ ಕಾರಣ ಎಂದು ನಿಡಶೇಸಿ ಕೆರೆ ಅಭಿವೃದ್ಧಿಯ ಕನಸು ಕಂಡ ಇಲ್ಲಿಯ ಜನ ಕಾಯಕಕ್ಕೆ ಟೊಂಕ ಕಟ್ಟಿ ನಿಂತರು. ಆರಂಭದಲ್ಲಿ ಕೆರೆ ಅಭಿವೃದ್ಧಿ ಆದಂತೆಯೇ... ಎಂದು ಕೆಲವರು ಮೂಗು ಮುರಿದಿದ್ದುಂಟು. ಆದಕ್ಕೆ ಕಿವಿಗೊಡದ ಜನ ಕೆರೆ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಜಲಸಾಕ್ಷರರಾಗುವ ದೃಢಸಂಕಲ್ಪ ತಾಳಿದರು.

ಮಳೆ ನೀರಿನ ಸಂಗ್ರಹಣೆ ಜಲಸಂರಕ್ಷಣೆಯಂತಹ ವಿಷಯದಲ್ಲಿ ಇಲ್ಲಿಯ ಜನರ ಸಾಕ್ಷಿಪ್ರಜ್ಞೆ ಜಾಗೃತಗೊಂಡಿದೆ. 'ನಮ್ಮ ಕೆರೆ ನಮ್ಮ ಶ್ರಮ' ಘೋಷವಾಕ್ಯದೊಂದಿಗೆ ಹಿರಿಯರು, ಕಿರಿಯರು, ರೈತರು, ಮಹಿಳೆಯರು, ಮಕ್ಕಳು, ವಿವಿಧ ಇಲಾಖೆಗಳ ಅಧಿಕಾರಿಗಳು ಆರ್ಥಿಕ ನೆರವು, ಮತ್ತು ಶ್ರಮದಾನಕ್ಕೆ ಮುಂದಾದರೆ, ದೂರ ದೂರದ ಅನೇಕ ಮಠಮಾನ್ಯರುಗಳೂ ಜನರ ಈ ಸಮಾಜಮುಖಿ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಆಶೀರ್ವಾದ ರೂಪದಲ್ಲಿ ಕಾಣಿಕೆ ನೀಡಿ ಹಾರೈಸಿದರು.

ಕೆರೆ ಅಭಿವೃದ್ಧಿ ವಿಚಾರ ಬಂದಾಗ ಪ್ರಾರಂಭದಲ್ಲಿ ಬಹುತೇಕ ಜನ ಉದಾಸೀನ ಮಾಡಿದ್ದುಂಟು. ಆದರೆ, ಕೆರೆ ಕಾಯಕದ ವಿಷಯದಲ್ಲಿ ವಿಶೇಷ ಆಸಕ್ತಿ, ಕಳಕಳಿ ಮೆರೆಯುವ ಮೂಲಕ ಸಾಮಾಜಿಕ ಪ್ರಜ್ಞೆಯ ಜೊತೆಗೆ ಜನರಲ್ಲಿ ಕಾಯಕ ಪ್ರಜ್ಞೆಯೂ ಜಾಗೃತಿಗೊಳಿಸುವಲ್ಲಿ ಕೊಪ್ಪಳದ ಗವಿಶ್ರೀ ಸ್ವಾಮೀಜಿ ಯಶಸ್ವಿಯಾದರು. ಮಠದಲ್ಲಿ ಕುಳಿತು ಪಾದಪೂಜೆಯಲ್ಲಿ ಕಾಲಕಳೆಯದ ಇವರು, ಲುಂಗಿ ಮೇಲೆ ಕಟ್ಟಿಕೊಂಡು ಹಗಲು ರಾತ್ರಿ ಎನ್ನದೆ ಕೆರೆ ಕೆಲಸಕ್ಕೆ ಸ್ವತಃ ಹೆಗಲುಗೊಟ್ಟು ಅವಿನಾಭಾವ ಸಂಬಂಧದೊಂದಿಗೆ ಜನರನ್ನು ಒಗ್ಗೂಡಿಸುವ ಕೆಲಸ ಮಾಡಿದ್ದು ಸಾಮಾನ್ಯ ಸಂಗತಿಯಲ್ಲ. ಬಿಸಿಲು-ಗಾಳಿ ಎನ್ನದೆ ಅವರು ಜನರ ನಡುವೆಯೇ ಇದ್ದು, ಪ್ರೇರಣಾಶಕ್ತಿಯಾಗಿ ಜನರ ಮನ ಪರಿವರ್ತನೆಗೊಳಿಸಿದರು ಎಂಬುದು ಇಲ್ಲಿಯ ಜನರ ಅಭಿಮಾನದ ಮಾತು.

ಈ ಕೆರೆ ಕಾಯಕವು ಒಡೆದು ಹೋದ ಜನರ ಮನಸ್ಸುಗಳನ್ನು ಒಂದಾಗಿಸುವಲ್ಲಿ ಯಶಸ್ವಿಯಾಗಿದೆ. ಬದಲಾವಣೆ ಪಥದಲ್ಲಿ ಜನ ಸಾಗುವಂತೆ ಮಾಡಿದ್ದೇ ಈ ಕೆರೆ ಕೆಲಸ ಎಂದರೆ ಅತಿಶಯೋಕ್ತಿ ಅಲ್ಲ. ಕೆರೆ ಅಭಿವೃದ್ಧಿಯಲ್ಲಿ ತೊಡಗಿರುವವರ ಮನಸ್ಸಿನಲ್ಲಿ ನಕಾರತ್ಮಕ ಆಲೋಚನೆಗಳ ಬದಲು ಸಕಾರಾತ್ಮಕ ಚಿಂತನೆಗಳು ಬೆಳೆಯುತ್ತಿವೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ನಿಡಶೇಸಿ ಕೆರೆ ಕಾಯಕಕ್ಕೆ ಚಾಲನೆ ದೊರೆಯುತ್ತಿದ್ದಂತೆ ಅದು ಇಡಿ ಜಿಲ್ಲೆಗೆ ಪ್ರೇರಣೆಯಾಯಿತು. ತಾವರಗೇರೆಯ ರಾಯನ ಕೆರೆ, ಯಲಬುರ್ಗಾ ತಾಲ್ಲೂಕಿನ ಕಲಭಾವಿ ಕೆರೆ, ಗಂಗಾವತಿಯ ದುರ್ಗಮ್ಮ ಬೃಹತ್ ಕಾಲುವೆ, ಕೊಪ್ಪಳ ತಾಲ್ಲೂಕಿನ 23 ಕಿ.ಮೀ ಉದ್ದದ ಹಿರೇಹಳ್ಳದ ಪುನಶ್ಚೇತನ ಆರಂಭಗೊಂಡಿದ್ದರೆ, ಇನ್ನೂ ಅನೇಕ ಊರುಗಳ ಜನರಲ್ಲಿ ಇದೇ ರೀತಿ ಆಲೋಚನೆ ಬಂದು ಹಲವಾರು ಸಣ್ಣಪುಟ್ಟ ಕೆರೆಗಳು ಅಭಿವೃದ್ಧಿಗೊಂಡಿವೆ. 'ಕೆರೆ ಅಭಿವೃದ್ಧಿಗೊಳಿಸುವುದರ ಹಿಂದೆ ಯಾರದೂ ವೈಯಕ್ತಿಕ ಹಿತಾಸಕ್ತಿ ಅಡಗಿಲ್ಲ. ಇಲ್ಲಿಯ ರೈತರು, ಜನರ ಬದುಕು ಹಸನಾಗಬೇಕು. ಜಲ ಮೂಲಗಳನ್ನು ಅಭಿವೃದ್ಧಿಪಡಿಸಿ ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವ ಮೂಲಕ ಭವಿಷ್ಯದ ಪೀಳಿಗೆಗೆ ನಾವು ಉತ್ತರದಾಯಿಯಾಗಬೇಕು ಎಂಬ ವಿಷಯದಲ್ಲಿ ಜನರು ಒಟ್ಟುಗೂಡಿ ಕೆಲಸ ಮಾಡಿದ್ದಾರೆ'

### ವಿವಿಧ ಶಾಲೆಯಲ್ಲಿ ಜಲ ಸಾಕ್ಷರತೆ

ನಿಡಶೇಸಿ ಕೆರೆಯ ಕಾಮಗಾರಿ ಕೇವಲ ಅದೊಂದು ಕೆಲಸವಾಗಿ ಪರಿಗಣಿಸಲಿಲ್ಲ... ಅದೊಂದು ಜನಪದ ಸಾಹಿತ್ಯವಾಗಿ ಹಾಡುಗಳು ಹುಟ್ಟಿಕೊಂಡವು, ಕಥೆಗಳು ಜನ್ಮತಾಳಿದವು, ನೀರಿನ ಮಹತ್ವ ಸಾರುವ ಘೋಷಣೆಗಳು ಹೊರ ಬಂದವು. ಇವು ಜಿಲ್ಲೆಯ ಜನಕ್ಕೆ ಜಾಗೃತಿ ಮೂಡಲು ಕಾರಣವಾಯಿತು. ಶಿಕ್ಷಕರು ಮಕ್ಕಳನ್ನು ಕೆರೆಯ ಮಡಿಲಿಗೆ ಕರೆತಂದು ಮಕ್ಕಳಲ್ಲಿ ನೀರಿನ ಮಹತ್ವ, ಮಳೆ ನೀರು ನಿಲ್ಲಿಸುವ ವ್ಯವಸ್ಥೆ ಹಾಗೂ ಅಂತರ್ಜಲ ಸಂರಕ್ಷಣೆಯಂತಹ ನೈಸರ್ಗಿಕ ಪಾಠ ಮಾಡಿದರು.

ಕುಷ್ಟಗಿಯ ಅಜಯ ಅಕ್ಷರ ಎಂಬ ಪಬ್ಲಿಕ್ ಶಾಲೆ ಜಲ ಸಂರಕ್ಷಣೆಯ ಮಹತ್ವ ಸಾರಲು ಶಾಲೆಯಲ್ಲಿ ಬೃಹತ್ ಕಾರ್ಯಕ್ರಮ ಏರ್ಪಡಿಸಿತ್ತು. ಕಾರ್ಯಕ್ರಮದಲ್ಲಿ ಸೇರಿದ್ದ ಮಕ್ಕಳು, ಶಿಕ್ಷಕರು, ಪಾಲಕರು ಹಾಗೂ ಆಡಳಿತ ಮಂಡಳಿಯಿಂದ ಆ ಸಮಯದಲ್ಲಿ ಸಂಗ್ರಹವಾದ 1ಲಕ್ಷ 50 ಸಾವಿರ ರೂಪಾಯಿ ದೇಣಿಗೆಯನ್ನು ನಿಡಶೇಸಿ ಕೆರೆ ಪುನಃಶ್ಚೇತನಕ್ಕೆ ನೀಡಿ ಸಾರ್ಥಕತೆ ಮೆರೆದರು. ಹೀಗೆ ಕುಷ್ಟಗಿಯ ಪ್ರತಿಯೊಬ್ಬ ಸಾರ್ವಜನಿಕರ ಸಹಾಯ ಮತ್ತು ಪರಿಶ್ರಮದಿಂದ ನಿಡಶೇಸಿ ಕೆರೆಯು ತನ್ನ ವಿಸ್ತೀರ್ಣವನ್ನು ಹೆಚ್ಚಿಸಿಕೊಂಡು, ತನ್ನ ಒಡಲಿನಲ್ಲಿ ಅಪಾರ ಪ್ರಮಾಣದ ನೀರನ್ನು ಸಂಗ್ರಹಿಸಿಕೊಳ್ಳಲಾರಂಭಿಸಿದೆ.

ಎಂದು ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ದೇವೇಂದ್ರಪ್ಪ ಬಳೂಟಗಿ ಹೇಳುತ್ತಾರೆ.

**ರಾಜಸ್ಥಾನದ ಭಗೀರಥ ಲಕ್ಷ್ಮಣ ಸಿಂಗ್ ಭೇಟಿ:**

ರಾಜಸ್ಥಾನದ ಭಗೀರಥ ಎಂದೇ ಕರೆಯಿಸಿಕೊಳ್ಳುವ ಲಕ್ಷ್ಮಣ ಸಿಂಗ್ ಅವರು ನಿಡಶೇಸಿ ಕೆರೆಗೆ ಭೇಟಿ ನೀಡಿ ಸಲಹೆ ನೀಡಿದರು. 'ಜೈಪೂರ ಜಿಲ್ಲೆಯ ಲಾಪೋಡಿಯಾ ಗ್ರಾಮದವನಾದ ನಾನು ನೀರಿಗೆ ಶಾಶ್ವತ ಪರಿಹಾರ ತರಲು ಕೆರೆ ಹೂಳೆತ್ತುವ ಕಾರ್ಯ ಮಾಡಬೇಕು ಎಂದು ನನ್ನ 17ನೇ ವಯಸ್ಸಿನಲ್ಲಿಯೇ ಸಂಕಲ್ಪ ಮಾಡಿದೆ. ನಂತರದ ದಿನಗಳಲ್ಲಿ ಗ್ರಾಮದ ಜನರೊಂದಿಗೆ ಅನೇಕ ಸಭೆ ನಡೆಸಿ ಅವರ ಮನವೊಲಿಸುವ ಮೂಲಕ ಅವರ ಸಹಕಾರದೊಂದಿಗೆ ಕೆರೆ ಹೂಳೆತ್ತುವ ಕಾರ್ಯಕ್ಕೆ ಮುಂದಾದೆವು. ಅದರ ಪರಿಣಾಮ ಇಂದು ಲಾಪೋಡಿಯಾ ಗ್ರಾಮದ ಸುತ್ತಮುತ್ತಲಿನ 50 ಹಳ್ಳಿಗಳಲ್ಲಿನ ಕೆರೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ. ಇದರಿಂದ ಕೆರೆ ತುಂಬಿ, ಸುತ್ತಮುತ್ತಲಿನ ಪ್ರದೇಶ ಹಸಿರಿನಿಂದ ಸಮೃದ್ಧವಾಯಿತು. ಜಾನುವಾರು, ಪಕ್ಷಿಗಳಿಗೆ ಅನುಕೂಲವಾಗುವ ಜೊತೆಗೆ ನಮ್ಮ ಗ್ರಾಮದಲ್ಲಿ ನೀರಿನ ಕೊಂದರೆ ತಪ್ಪಿತು. ಭೂಮಿಯಲ್ಲಿ ನೀರಿನ ಸೆಲೆ ಹೆಚ್ಚಾಯಿತು. ಹಳೇ ಭಾವಿಗಳೆಲ್ಲ ತುಂಬಿಕೊಂಡವು' ಎಂದು ಹೇಳಿ ಅಲ್ಲಿ ಸೇರಿದ್ದ ಜನರಿಗೆ ಮತ್ತಷ್ಟು ಉತ್ತೇಜನ ತುಂಬಿದರು.

**ರೈತರಿಗೆ ವರವಾದ ಫಲವತ್ತಾದ ಮಣ್ಣು :**

ಕೆರೆಯಲ್ಲಿ ಇದ್ದ ಫಲವತ್ತಾದ ಹೂಳನ್ನು ರೈತರು ಟ್ರ್ಯಾಕ್ಟರ್, ಟಿಪ್ಪರ್‌ಗಳ ಮೂಲಕ ತೆಗೆದುಕೊಂಡು ಹೋಗಿ ತಮ್ಮ ತಮ್ಮ ಜಮೀನುಗಳಿಗೆ ಹಾಕಿಕೊಂಡಿದ್ದಾರೆ. ಇದು ಫಲವತ್ತಾದ ಮಣ್ಣು ಆಗಿರುವುದರಿಂದ ಉತ್ತಮ ಫಸಲು ಬೆಳೆಯಲು ರೈತರಿಗೆ ವರದಾನವಾಗಿ ಪರಿಣಮಿಸಿದೆ. ■





ರೈತರ ಆರ್ಥಿಕ ನೆರವಿಗಾಗಿ

# ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ

ಬಿಂದುಜಾಲ

ರೈತರಿಗೆ ಆರ್ಥಿಕ ನೆರವು ನೀಡಲು ಜಾರಿಗೆ ತರಲಾಗಿರುವ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಗೆ ಮತ್ತಷ್ಟು ಶಕ್ತಿ ತುಂಬಲು ಕರ್ನಾಟಕ ಸರ್ಕಾರ ನಾಲ್ಕು ಸಾವಿರ ರೂಪಾಯಿಗಳನ್ನು ಹೆಚ್ಚುವರಿಯಾಗಿ ನೀಡುತ್ತಿದೆ. ಇಡೀ ದೇಶದಲ್ಲಿ ಈ ಯೋಜನೆಗೆ ಹೆಚ್ಚುವರಿ ಇಂಬು ನೀಡಿರುವ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿದೆ. ಈ ಯೋಜನೆಯ ಮೂಲಕ ರಾಜ್ಯದ ರೈತರು ವರ್ಷಕ್ಕೆ ಹತ್ತು ಸಾವಿರ ರೂಪಾಯಿಗಳ ಆರ್ಥಿಕ ನೆರವನ್ನು ಪಡೆಯಲಿದ್ದು ಇದು ರಾಜ್ಯದ ರೈತರ ಪಾಲಿಗೆ ಆಶಾಕಿರಣವಾಗಿದೆ.





downloaded from: www.kpscvaani.com






ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರಿಗೆ ನೆಮ್ಮದಿ ಮತ್ತು ಸ್ವಾಭಿಮಾನದ ಬದುಕು ಕಟ್ಟಿಕೊಡಲು ಮತ್ತು ಅವರನ್ನು ಆರ್ಥಿಕ ಸಂಕಷ್ಟಗಳಿಂದ ಪಾರು ಮಾಡುವ ಘನ ಉದ್ದೇಶದಿಂದ ಕೇಂದ್ರ ಸರ್ಕಾರ ಇದೇ ಮೊದಲ ಬಾರಿಗೆ ಪ್ರಧಾನಮಂತ್ರಿಗಳ ಹೆಸರಿನಲ್ಲಿ ಕಿಸಾನ್ ಸಮ್ಮಾನ್ ಎಂಬ ಯೋಜನೆಯನ್ನು ಆರಂಭ ಮಾಡಿದೆ.

ಇಡೀ ದೇಶದಲ್ಲಿ ಈ ಯೋಜನೆಗೆ ಮತ್ತಷ್ಟು ಶಕ್ತಿ ತುಂಬಲು ಕರ್ನಾಟಕ ಸರ್ಕಾರ ನಾಲ್ಕು ಸಾವಿರ ರೂಪಾಯಿಗಳನ್ನು ಹೆಚ್ಚುವರಿಯಾಗಿ ರೈತರ ಖಾತೆಗಳಿಗೆ ಜಮೆ ಮಾಡುವುದಾಗಿ ಘೋಷಣೆ ಮಾಡಿದೆ. ಹೀಗಾಗಿ ಈ ಯೋಜನೆಯ ಮೂಲಕ ರಾಜ್ಯದ ರೈತರು ವರ್ಷಕ್ಕೆ ಹತ್ತು ಸಾವಿರ ರೂಪಾಯಿಗಳ ಆರ್ಥಿಕ ನೆರವನ್ನು ಪಡೆಯಲಿದ್ದಾರೆ. ಇದು ರಾಜ್ಯದ ರೈತರ ಪಾಲಿಗೆ ವರದಾನವಾಗಿದೆ.

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು 2019 ರ ಫೆಬ್ರವರಿಯಲ್ಲಿ ಮಂಡನೆಯಾದ ಮಧ್ಯಂತರ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಘೋಷಿಸಿತ್ತು, 2018 ರ ಡಿಸೆಂಬರ್ 1 ರಿಂದ ಪೂರ್ವಾನ್ವಯವಾಗಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ.

ಈ ಯೋಜನೆಗಾಗಿ ಕೇಂದ್ರ ಸರ್ಕಾರ ಮೊದಲ ವರ್ಷಕ್ಕಾಗಿ 20 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದೆ. ಪ್ರಸಕ್ತ 2019–20 ನೇ ಸಾಲಿಗೆ 75 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ.

**ಏನಿದು ಕಿಸಾನ್ ಸಮ್ಮಾನ್ ?**

ರೈತರಿಗೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ನೆರವಾಗಲು ವಾರ್ಷಿಕ ಆರು ಸಾವಿರ ರೂಪಾಯಿ ನೀಡುವ ಯೋಜನೆ ಇದಾಗಿದೆ.

2019 ರ ಫೆಬ್ರವರಿಯಲ್ಲಿ ಮಂಡನೆಯಾದ ಮಧ್ಯಂತರ ಬಜೆಟ್‌ನಲ್ಲಿ ಎರಡು ಹೆಕ್ಟೇರ್ ಗಿಂತ ಕಡಿಮೆ ಕೃಷಿ ಭೂಮಿ ಹೊಂದಿರುವವರಿಗೆ ಈ ನೆರವು ನೀಡುವುದಾಗಿ ತಿಳಿಸಲಾಗಿತ್ತು. 2019 ರ ಜುಲೈ 5 ರಂದು ಮಂಡನೆಯಾದ ಕೇಂದ್ರ ಬಜೆಟ್‌ನಲ್ಲಿ ಈ ನೆರವನ್ನು ಎಲ್ಲಾ ರೈತರಿಗೆ ವಿಸ್ತರಿಸುವುದಾಗಿ ಘೋಷಿಸಲಾಯಿತು.

**ಕಿಸಾನ್ ಸಮ್ಮಾನ್ ಗುರಿ:**

ಬಿತ್ತನೆ ಮಾಡಲು ಬೇಕಾಗುವ ಬಿತ್ತನೆ ಬೀಜ ಖರೀದಿ, ಅಗತ್ಯ ಸಾಧನ, ಸಲಕರಣೆ ಖರೀದಿ, ರಸಗೊಬ್ಬರ ಖರೀದಿ, ಕೀಟ ನಾಶಕ, ಇವೇ ಮುಂತಾದ ಕೃಷಿ ಸಂಬಂಧಿತ ಚಟುವಟಿಕೆಗಳ ಖರೀದಿಗಾಗಿ ಸಣ್ಣ ಮತ್ತು ಮಧ್ಯಮ ವರ್ಗದ ಎಲ್ಲಾ ರೈತರಿಗೆ ಆರ್ಥಿಕ ನೆರವು ನೀಡುವುದು ಈ ಯೋಜನೆಯ ಗುರಿಯಾಗಿದೆ.

> **ಈ ಯೋಜನೆಗೆ ಅರ್ಹರಾದ ರೈತ ಮೃತಪಟ್ಟಲ್ಲಿ ಆತನ ವಾರಸುದಾರರಿಗೆ ಈ ಯೋಜನೆ ಮುಂದುವರಿಸಲಾಗುವುದು. ಆದರೆ ಸಾವಿನ ಹೊರುತು ಈ ಯೋಜನೆಯ ಲಾಭ ಇತರರಿಗೆ ದೊರೆಯುವುದಿಲ್ಲ. ಅಂದರೆ ಭೂಮಿ ಮಾರಾಟ ಮಾಡಿದರೆ ಅಥವಾ ದಾನ ನೀಡಿದರೆ ಹೀಗೆ ಇತರೆ ಕಾರಣಗಳಿಗೆ ಭೂಮಿಯ ಒಡೆತನ ಬದಲಾದರೆ ಆಗ ಯೋಜನೆಯ ಲಾಭ ವರ್ಗಾವಣೆಯಾಗುವುದಿಲ್ಲ.**

**ರಾಜ್ಯದಲ್ಲಿ ಕಿಸಾನ್ ಸಮ್ಮಾನ್:**

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಈ ಯೋಜನೆಯಡಿ ಹೆಚ್ಚುವರಿ ಸಹಾಯಧನ ನೀಡುವ ಘೋಷಣೆಯನ್ನು ಮಾಡಿದ್ದಾರೆ. ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ನಾಲ್ಕು ಸಾವಿರ ರೂಪಾಯಿಗಳನ್ನು ಎರಡು ಕಂತುಗಳಲ್ಲಿ ನೀಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ರಾಜ್ಯದ ಸುಮಾರು 31 ಲಕ್ಷ ರೈತರಿಗೆ ಈ ಯೋಜನೆಯ ಲಾಭ ಸಿಗಲಿದೆ. ಮೊದಲ ಕಂತಿನ ಎರಡು ಸಾವಿರ ರೂಪಾಯಿಗಳನ್ನು 15 ರಿಂದ 20 ದಿನಗಳೊಳಗೆ ಜಮೆ ಮಾಡಲು ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಇತ್ತೀಚೆಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭದಲ್ಲಿ ಅವರು ಕಿಸಾನ್ ಸಮ್ಮಾನ್ ಯೋಜನೆಯಡಿ ಹೆಚ್ಚುವರಿಯಾಗಿ ನಾಲ್ಕು ಸಾವಿರ ರೂಪಾಯಿ ನೀಡುವುದಾಗಿ ಹೇಳಿದ್ದರು.

ರಾಜ್ಯದ ಅರ್ಹ ಫಲಾನುಭವಿಗಳ ಖಾತೆಗೆ ರಾಜ್ಯ ಸರ್ಕಾರ ನೀಡುವ ಮೊದಲ ಕಂತಿನ 2000 ರೂ ಗಳನ್ನು ಜಮಾ ಮಾಡುವ ಮೂಲಕ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ 2019 ರ ಆಗಸ್ಟ್ 14 ರಂದು ಯೋಜನೆಗೆ ಚಾಲನೆ ನೀಡಿದ್ದಾರೆ.

ವಾರ್ಷಿಕವಾಗಿ ಅರ್ಹ ರೈತರ ಖಾತೆಗಳಿಗೆ ಮೂರು ಕಂತುಗಳಲ್ಲಿ ಎರಡು ಸಾವಿರ ರೂಪಾಯಿಗಳಂತೆ ಆರು ಸಾವಿರ ರೂಪಾಯಿಗಳನ್ನು ಜಮಾ ಮಾಡಲಾಗುತ್ತದೆ. ಅಲ್ಲದೇ ರಾಜ್ಯ ಸರ್ಕಾರದ ವತಿಯಿಂದ ಸಹ ಎರಡು ಕಂತುಗಳಲ್ಲಿ ತಲಾ ಎರಡು ಸಾವಿರ ರೂಪಾಯಿ ನೀಡಲಾಗುತ್ತದೆ. ಅಂದರೆ ಕರ್ನಾಟಕದ ಅರ್ಹ ಫಲಾನುಭವಿಗಳಿಗೆ ವರ್ಷಕ್ಕೆ ಕೇಂದ್ರದಿಂದ ಆರು ಸಾವಿರ ರೂ ಹಾಗೂ ರಾಜ್ಯ ಸರ್ಕಾರದ ನಾಲ್ಕು ಸಾವಿರ ರೂ ಸೇರಿ ಒಟ್ಟಾಗಿ ಹತ್ತು ಸಾವಿರ ರೂಪಾಯಿ ಆರ್ಥಿಕ ನೆರವು ದೊರೆಯುತ್ತದೆ.

**ಫಲಾನುಭವಿಗಳು:**

ಅರ್ಹ ಫಲಾನುಭವಿಗಳನ್ನು ಗುರುತಿಸುವ ಜವಾಬ್ದಾರಿ ರಾಜ್ಯ ಸರ್ಕಾರಕ್ಕೆ ವಹಿಸಲಾಗಿದೆ. ಕೃಷಿ ಭೂಮಿ ಹೊಂದಿರುವ ರೈತನ ಹೆಸರು, ಲಿಂಗ, ಸಮುದಾಯ, ಆಧಾರ್ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆ, ಮೊಬೈಲ್ ಸಂಖ್ಯೆಗಳನ್ನು ಕ್ರೋಢೀಕರಿಸಿ ಪಟ್ಟಿ ತಯಾರಿಸಿ ಫಲಾನುಭವಿಗಳನ್ನು ಗುರುತಿಸಲಾಗುತ್ತಿದೆ. ಕೃಷಿ ಭೂಮಿ ಇಂತಿಷ್ಟೇ ಇರಬೇಕು ಎಂಬ ನಿಯಮವೇನಿಲ್ಲ.



ಕೃಷಿ ಭೂಮಿಯಲ್ಲಿ ಸಾಗುವಳಿ ಮಾಡುವ ಗಂಡ, ಹೆಂಡತಿ, 18 ವರ್ಷದೊಳಗಿನ ಮಗ / ಮಗಳು ಇರುವ ಕುಟುಂಬ 2019 ರ ಫೆಬ್ರವರಿ 1 ಕ್ಕಿಂತ ಮೊದಲು ಭೂ ದಾಖಲೆಗಳಲ್ಲಿ ಹೆಸರಿರುವ ಹಿಡುವಳಿದಾರರನ್ನು ಮಾತ್ರ ಈ ಯೋಜನೆಯಡಿ ಪರಿಗಣಿಸಲಾಗುವುದು. ಐದು ವರ್ಷಗಳ ಬಳಿಕ ಹೊಸ ಹಿಡುವಳಿದಾರರನ್ನು ಪರಿಗಣಿಸಲಾಗುವುದು.

ಒಂದು ವೇಳೆ ಈ ಯೋಜನೆಗೆ ಅರ್ಹರಾದ ರೈತ ಮೃತಪಟ್ಟಲ್ಲಿ ಆತನ ವಾರಸುದಾರರಿಗೆ ಈ ಯೋಜನೆ ಮುಂದುವರಿಸಲಾಗುವುದು. ಆದರೆ ಸಾವಿನ ಹೊರುತು ಈ ಯೋಜನೆಯ ಲಾಭ ಇತರರಿಗೆ ದೊರೆಯುವುದಿಲ್ಲ. ಅಂದರೆ ಭೂಮಿ ಮಾರಾಟ ಮಾಡಿದರೆ ಅಥವಾ ದಾನ ನೀಡಿದರೆ ಹೀಗೆ ಇತರೆ ಕಾರಣಗಳಿಗೆ ಭೂಮಿಯ ಒಡೆತನ ಬದಲಾದರೆ ಆಗ ಯೋಜನೆಯ ಲಾಭ ವರ್ಗಾವಣೆಯಾಗುವುದಿಲ್ಲ. ಈಶಾನ್ಯ ರಾಜ್ಯಗಳಲ್ಲಿ ಸಮುದಾಯ ಆಧಾರಿತ ಜಮೀನು ಒಡೆತನವಿರುವೆಡೆ ಫಲಾನುಭವಿ ಆಯ್ಕೆಗೆ ಪ್ರತ್ಯೇಕ ಮಾನದಂಡ ಅನುಸರಿಸಲಾಗುತ್ತಿದೆ.

ರೈತರಾಗಿದ್ದು ಪಹಣಿ ಇತ್ಯಾದಿ ದಾಖಲೆಗಳಿದ್ದು ಭೂಹಿಡುವಳಿ ಪಟ್ಟಿಯಲ್ಲಿ ಹೆಸರಿದ್ದರೂ ಕೆಲವು ರೈತರಿಗೆ ಈ ಯೋಜನೆ ಅನ್ವಯವಾಗುವುದಿಲ್ಲ.

- ಸಾಂವಿಧಾನಿಕ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವವರು / ಸಲ್ಲಿಸಿದ್ದವರು
- ಹಾಲಿ / ಮಾಜಿ ರಾಜ್ಯ / ಕೇಂದ್ರ ಸಚಿವರು
- ಹಾಲಿ / ಮಾಜಿ ಪಾಲಿಕೆ ಸದಸ್ಯರು / ಜಿಲ್ಲಾ ಪಂಚಾಯತ್ ಅಧ್ಯಕ್ಷರು
- ಹಾಲಿ / ನಿವೃತ್ತ ಸರ್ಕಾರಿ ನೌಕರರು
- ಮಾಸಿಕ ಹತ್ತು ಸಾವಿರ ರೂಪಾಯಿಗಿಂತ ಹೆಚ್ಚು ಪಿಂಚಣಿ ಪಡೆಯುತ್ತಿರುವವರು (ಗ್ರೂಪ್ ಡಿ / ನಾಲ್ಕನೇ ದರ್ಜೆ / ಮಲ್ಟಿ ಟಾಸ್ಕಿಂಗ್ ಸ್ಟಾಫ್ ಹೊರತುಪಡಿಸಿ)
- ಡಾಕ್ಟರ್, ಎಂಜಿನಿಯರ್, ವಕೀಲ, ಲೆಕ್ಕಪರಿಶೋಧಕ, ಆರ್ಕಿಟೆಕ್ಟ್ ಮೊದಲಾದ ವೃತ್ತಿನಿರತರು
- ಕಳೆದ ಪರಿಶೀಲನಾ ವರ್ಷದಲ್ಲಿ (ಅಸೆಸ್ಮೆಂಟ್ ಇಯರ್) ಆದಾಯ ತೆರಿಗೆ ಪಾವತಿಸಿದವರು (ಕುಟುಂಬದ ಯಾರೊಬ್ಬರಾದರೂ ಆದಾಯ ತೆರಿಗೆ ಪಾವತಿಸಿದಲ್ಲಿ ಅಂತಹ ಕುಟುಂಬ ಅರ್ಹವಾಗುವುದಿಲ್ಲ)





downloaded from: www.kpscvaani.com

ಈ ಯೋಜನೆಯ ಲಾಭ ಪಡೆಯಲು ಅರ್ಹರಲ್ಲ.

- ಒಂದು ವೇಳೆ ಈ ಯೋಜನೆಯ ಲಾಭ ಪಡೆಯುತ್ತಿರುವ ಕುಟುಂಬ ಸದಸ್ಯರಲ್ಲಿ ಯಾರಿಗಾದರೂ ಯೋಜನೆಯ ಅವಧಿಯಲ್ಲಿ ಸರ್ಕಾರಿ ನೌಕರಿ ದೊರೆತರೆ ಅಥವಾ ಅವರು ಆದಾಯ ತೆರಿಗೆ ಪಾವತಿದಾರರಾದರೆ ಅಥವಾ ಸಾಂವಿಧಾನಿಕ ಹುದ್ದೆಗಳಿಗೆ ಆಯ್ಕೆಯಾದರೆ, ಆಗ ಅಂದಿನಿಂದ ಈ ಯೋಜನೆಯಡಿ ನೀಡುತ್ತಿರುವ ನೆರವನ್ನು ರದ್ದುಪಡಿಸಲಾಗುತ್ತದೆ.
- ಗ್ರೂಪ್ ಡಿ / ನಾಲ್ಕನೇ ದರ್ಜೆ / ಮಲ್ಟಿ ಟಾಸ್ಕಿಂಗ್ ಸ್ಟಾಫ್ (ಬಹು ಕಾರ್ಯ ನಿರ್ವಹಿಸುವ) ಸರ್ಕಾರಿ ನೌಕರರು ಈ ಯೋಜನೆಯ ಫಲಾನುಭವಿಗಳಾಗಬಹುದು.
- ಯಾವುದೇ ಕುಟುಂಬ ಕೃಷಿ ಭೂಮಿ ಹೊಂದಿದ್ದರೆ ಅಂತಹ ಕುಟುಂಬಗಳು ಈ ಯೋಜನೆಯ ಲಾಭ ಪಡೆಯಲು ಅರ್ಹವಾಗಿದ್ದು, ಅದು ನಗರ ಅಥವಾ ಗ್ರಾಮೀಣ ಭಾಗದಲ್ಲಿದ್ದರೂ ಯೋಜನೆಯಡಿ ನೆರವು ಪಡೆಯಬಹುದಾಗಿದೆ. ಆದರೆ ಕೃಷಿಯೇತರ ಭೂಮಿಗೆ ಈ ನೆರವು ಅನ್ವಯವಾಗುವುದಿಲ್ಲ.
- ಕೃಷಿ ಭೂಮಿಯಾಗಿದ್ದರೂ ಕೃಷಿ ಚಟುವಟಿಕೆ ನಡೆಸದೇ ಇತರೆ ಕೆಲಸಗಳಿಗೆ ಭೂಮಿಯನ್ನು ಬಳಸಿಕೊಳ್ಳುತ್ತಿದ್ದರೂ ಈ ಯೋಜನೆ ಅನ್ವಯವಾಗುವುದಿಲ್ಲ.

**ತಪ್ಪು ಮಾಹಿತಿ ನೀಡಿದಲ್ಲಿ:**

ಒಂದು ವೇಳೆ ತಪ್ಪು ಮಾಹಿತಿ ನೀಡಿ ಯೋಜನೆಯ ಲಾಭ ಪಡೆಯುತ್ತಿದ್ದರೆ, ಸುಳ್ಳು ಮಾಹಿತಿ ನೀಡಲಾಗಿದೆ ಎಂದು ತಿಳಿದು ಬಂದ ಕೂಡಲೇ ಯೋಜನೆಯಡಿ ನೆರವನ್ನು ಸ್ಥಗಿತಗೊಳಿಸಲಾಗುತ್ತದೆ. ಅಲ್ಲದೇ ಹಿಂದೆ ನೀಡಿರುವ ನೆರವನ್ನೂ ಸಹ ವಾಪಸ್ ಪಡೆಯಲಾಗುತ್ತದೆ.

**ಸಲ್ಲಿಸಬೇಕಾದ ಅಗತ್ಯ ದಾಖಲೆಗಳು:**

ಆಧಾರ್ ಕಾರ್ಡ್ : ಮೊದಲ ಕಂತಿನ ನೆರವು ಜಮಾ ಮಾಡಲು ಆಧಾರ್ ಸಂಖ್ಯೆ ನೀಡಲು ವಿನಾಯಿತಿ ನೀಡಲಾಗಿತ್ತು. ಉಳಿದ ಕಂತುಗಳ ನೆರವು ಪಡೆಯಲು ಆಧಾರ್ ಕಾರ್ಡ್ ಕಡ್ಡಾಯವಾಗಿದೆ.

ಮೊದಲ ಕಂತಿನಲ್ಲಿ ಗುರುತು ಖಾತ್ರಿ ಪಡಿಸಲು ಆಧಾರ್ ಕಾರ್ಡ್‌ಗೆ ಪರ್ಯಾಯವಾಗಿ ಚುನಾವಣಾ ಗುರುತಿನ ಚೀಟಿ, ವಾಹನ ಚಾಲನಾ ಪರವಾನಗಿ ಅಥವಾ ರಾಜ್ಯ / ಕೇಂದ್ರ ಸರ್ಕಾರದ ಅಧಿಕೃತ ಗುರುತಿನ ಚೀಟಿ ಒದಗಿಸುವುದು ಅಗತ್ಯವಾಗಿತ್ತು. ಉಳಿದ ಕಂತುಗಳಿಗೆ ಆಧಾರ್ ಕಡ್ಡಾಯವಾಗಿದೆ.

ಇನ್ನು ಬ್ಯಾಂಕ್ ಖಾತೆ ಹೊಂದಿರುವುದು ಕಡ್ಡಾಯ. ಯೋಜನೆಯಡಿ ನೆರವನ್ನು ರೈತರ ಖಾತೆಗಳಿಗೆ ನೇರವಾಗಿ ಜಮಾ ಮಾಡಲಾಗುತ್ತದೆ. ನಗದು ನೀಡಲಾಗುವುದಿಲ್ಲ.

ಮೊದಲ ಕಂತು ಹೊರತುಪಡಿಸಿ 2020 ರ ಮಾರ್ಚ್‌ವರೆಗೂ ಜಮ್ಮು ಕಾಶ್ಮೀರ, ಅಸ್ಸಾಂ, ಮೇಘಾಲಯ ರಾಜ್ಯಗಳ ಫಲಾನುಭವಿಗಳಿಗೆ ಆಧಾರ್ ಕಾರ್ಡ್ ನೀಡುವುದರಿಂದ ವಿನಾಯಿತಿ ನೀಡಲಾಗಿದೆ. ಈ ರಾಜ್ಯ / ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಧಾರ್ ಕಾರ್ಡ್ ಹೊಂದಿರುವವರ ಸಂಖ್ಯೆ ಗಣನೀಯವಾಗಿ ಕಡಿಮೆ ಇರುವುದರಿಂದ ಸರ್ಕಾರ ತಾತ್ಕಾಲಿಕವಾಗಿ ವಿನಾಯಿತಿ ನೀಡಿ. ಫಲಾನುಭವಿಗಳು ಇತರೆ ಗುರುತಿನ ದಾಖಲೆಗಳನ್ನು ಸಲ್ಲಿಸಲು ಅವಕಾಶ ನೀಡಿದೆ.

ಆಧಾರ್ ಕಾರ್ಡ್ ಸಹಿತ ಅರ್ಜಿ ಸಲ್ಲಿಸಿದರೆ ಪರಿಶೀಲನೆ ನಂತರ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಆನ್ ಲೈನ್‌ನಲ್ಲಿ ಪ್ರಕಟಿಸಲಾಗುತ್ತದೆ. ಅರ್ಜಿ ಪರಿಶೀಲನೆಯ ಜವಾಬ್ದಾರಿ ರಾಜ್ಯ ಸರ್ಕಾರ / ಕೇಂದ್ರಾಡಳಿತ ಪ್ರದೇಶಗಳಿಗೆ ಸೇರಿರುತ್ತದೆ.

**ಮೊಬೈಲ್ ಆ್ಯಪ್**

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಚುರುಕುಗೊಳಿಸಲು ಮೊಬೈಲ್ ಆ್ಯಪ್ ಬಿಡುಗಡೆ ಮಾಡಲು ಭೂ ಮಾಪನ ಮತ್ತು ಭೂ ದಾಖಲೆ ಇಲಾಖೆ ಸಜ್ಜಾಗಿದೆ. ಇದರಡಿ ಗ್ರಾಮ ಲೆಕ್ಕಿಗ ತನ್ನ ವ್ಯಾಪ್ತಿಯ ಪ್ರತಿ ಹಳ್ಳಿಯ ರೈತರ ಮನೆಗಳಿಗೆ ತೆರಳಿ ಜಮೀನಿನ ಸರ್ವೆ ಸಂಖ್ಯೆ ಮೊದಲಾದ ಮಾಹಿತಿ ಪಡೆದು ಆಪ್‌ನಲ್ಲಿ ನಮೂದಿಸಬೇಕಿದೆ. ನಂತರ ಹೀಗೆ ಸಂಗ್ರಹಿಸಲಾದ ಮಾಹಿತಿಯನ್ನು ಇಲಾಖೆಗೆ ಕಳುಹಿಸಬೇಕಿದೆ. ಈ ಮೂಲಕ ರೈತರ ಮಾಹಿತಿ ಕ್ರೋಢೀಕರಿಸಲಾಗುತ್ತಿದೆ.

**ಕುಂದುಕೊರತೆ ನಿವಾರಣಾ ಕೇಂದ್ರ**

ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಅರ್ಹ ಫಲಾನುಭವಿಗಳ ಹೆಸರು ಸೇರ್ಪಡೆಯಾಗದಿರುವುದು, ನೆರವಿನ ಹಣ ಬ್ಯಾಂಕ್ ಖಾತೆಗೆ ಜಮೆಯಾಗದೇ ಇರುವುದು ಮೊದಲಾದ ಸಮಸ್ಯೆಗಳ ನಿವಾರಣೆಗಳಾಗಿ ಕುಂದುಕೊರತೆ ನಿಗಾ ಮತ್ತು ನಿವಾರಣಾ ವ್ಯವಸ್ಥೆಯನ್ನು ಕಲ್ಪಿಸುವಂತೆಯೂ ಸಹ ರಾಜ್ಯಗಳಿಗೆ ಸೂಚನೆ ನೀಡಲಾಗಿದೆ. ಇದರಡಿ ಸಲ್ಲಿಕೆಯಾಗುವ ದೂರುಗಳನ್ನು ಎರಡು ವಾರದೊಳಗೆ ಪರಿಹರಿಸುವಂತೆಯೂ ಸೂಚಿಸಲಾಗಿದೆ.

ಅಲ್ಲದೇ ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲೂ ಕುಂದುಕೊರತೆಗಳ ಮೇಲೆ ನಿಗಾ ವಹಿಸಲಾಗುವುದು. ರಾಷ್ಟ್ರಮಟ್ಟದಲ್ಲಿ ಸಂಪುಟ ಕಾರ್ಯದರ್ಶಿ ನೇತೃತ್ವದಲ್ಲಿ ಪರಾಮರ್ಶೆ ಸಮಿತಿ ಇರಲಿದೆ. ಯೋಜನೆಯ ಸಮರ್ಪಕ ಅನುಷ್ಠಾನದ ನಿಗಾ ವಹಿಸಲು ಮತ್ತು ಕೇಂದ್ರ ಸರ್ಕಾರದೊಂದಿಗೆ ಸಮನ್ವಯ ಸಾಧಿಸಲು ಪ್ರತಿ ರಾಜ್ಯ / ಕೇಂದ್ರಾಡಳಿತ ಪ್ರದೇಶಕ್ಕೆ ನೋಡಲ್ ಇಲಾಖೆ ಇರಲಿದೆ.

**ಹೆಚ್ಚಿನ ಮಾಹಿತಿ**

ರೈತರ ಮಾಹಿತಿಗಳು ಒಂದೆಡೆ ಲಭ್ಯವಾಗಲು ಆನ್‌ಲೈನ್ ವೇದಿಕೆ ಇದ್ದು, ಜಿಲ್ಲಾಡಳಿತ ಪಿಎಂ ಕಿಸಾನ್ ಡಾಟ್ ಎನ್‌ಐಸಿ ಡಾಟ್ ಇನ್ ಅಡಿ ರೈತರ ವಿವರಗಳನ್ನು ದಾಖಲಿಸಲು ಅವಕಾಶವಿದೆ. ಅರ್ಹ ಫಲಾನುಭವಿಗಳ ಪಟ್ಟಿ ಜಾಲತಾಣದಲ್ಲಿ ಲಭ್ಯವಿರುತ್ತದೆ. ಅಲ್ಲದೇ ಪಂಚಾಯತ್ ಕಚೇರಿಗಳಲ್ಲೂ ಪಟ್ಟಿ ಪ್ರಕಟಿಸಲಾಗಿರುತ್ತದೆ. ಕೃಷಿ ಇಲಾಖೆ, ರೈತ ಸಂಪರ್ಕ ಕೇಂದ್ರ, ಬಾಪೂಜಿ ಸೇವಾ ಕೇಂದ್ರ, ಅಟಲ್ ಜಿ ಸೇವಾ ಕೇಂದ್ರಗಳ ಮೂಲಕ ಹೆಚ್ಚಿನ ಮಾಹಿತಿ ಪಡೆಯಬಹುದು.

**ಪಿ ಎಂ ಕಿಸಾನ್ ಸಹಾಯವಾಣಿ ಸಂಖ್ಯೆ 011-23381092; ಇಮೇಲ್ ವಿಳಾಸ : pmkisanict@gov.in**






370ನೇ ವಿಧಿ ಅಸಿಂಧು:

# ಕಾಶ್ಮೀರದಲ್ಲಿ ನವೋದಯ

ಗೀತಾ ಗುರು




ಆಗಸ್ಟ್ 15 ದೇಶದ ಸ್ವಾತಂತ್ರ್ಯ ವಿಷಯದಲ್ಲಿ ಅತಿ ಮಹತ್ವದ ದಿನವಾದರೆ, ಆಗಸ್ಟ್ 5 ಕಾಶ್ಮೀರದ ಸ್ವಾತಂತ್ರ್ಯ ವಿಷಯದಲ್ಲಿ ಅತ್ಯಂತ ಪ್ರಮುಖವಾದ ದಿನ. ಕೇಂದ್ರ ಗೃಹ ಸಚಿವ ಅಮಿತ್ ಶಾ, ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷಾಧಿಕಾರ ನೀಡಿದ್ದ ಸಂವಿಧಾನದ 370 ಹಾಗೂ 35 'ಎ' ವಿಧಿಯನ್ನು ಅಸಿಂಧುಗೊಳಿಸಿರುವುದಾಗಿ 2019ರ ಆಗಸ್ಟ್ 5ರಂದು ಸಂಸತ್ತಿನಲ್ಲಿ ಘೋಷಿಸಿದರು. ಅದರಂತೆ ಈ ಬಾರಿ, ಸ್ವಾತಂತ್ರ್ಯೋತ್ಸವದಂದು ಜಮ್ಮು- ಕಾಶ್ಮೀರ, ಲಡಾಖ್‌ನಲ್ಲಿಯೂ ತ್ರಿವರ್ಣ ಧ್ವಜ ಹಾರುವುದರೊಂದಿಗೆ ಅಖಂಡ ಭಾರತದ ಕನಸು ನನಸಾಯಿತು.

ಜಮ್ಮು ಕಾಶ್ಮೀರವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಜಿಸುವ ಮಸೂದೆಗೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಆಗಸ್ಟ್ 9 ರಂದು ಸಹಿ ಮಾಡಿದರು. ಇದರನ್ವಯ, 2019 ರ ಅಕ್ಟೋಬರ್ 31 ರಿಂದ ಜಾರಿಯಾಗುವಂತೆ ಜಮ್ಮು ಕಾಶ್ಮೀರ ಹಾಗೂ ಲಡಾಖ್ ಕೇಂದ್ರಾಡಳಿತ ಪ್ರದೇಶಗಳು ಅಸ್ತಿತ್ವಕ್ಕೆ ಬರಲಿವೆ.

ಜಮ್ಮು ಕಾಶ್ಮೀರವು ಶಾಸನಸಭೆ ಸಹಿತವಾದ ಕೇಂದ್ರಾಡಳಿತ ಪ್ರದೇಶವಾದರೆ, ಲಡಾಖ್, ಶಾಸನಸಭೆರಹಿತ ಕೇಂದ್ರಾಡಳಿತ ಪ್ರದೇಶವೆನಿಸಲಿದೆ. ಸದ್ಯಕ್ಕೆ ಜಮ್ಮು ಕಾಶ್ಮೀರದ ಶಾಸನಸಭೆಯು ಗರಿಷ್ಠ 107 ಸದಸ್ಯರನ್ನು ಹೊಂದಿರುತ್ತದೆ. ಕ್ಷೇತ್ರ ಮರು ವಿಂಗಡಣೆಯ ಬಳಿಕ ಆ ಸಂಖ್ಯೆಯನ್ನು 114ಕ್ಕೆ ಹೆಚ್ಚಿಸಲಾಗುವುದು. ಇಲ್ಲಿನ 24 ಕ್ಷೇತ್ರಗಳು ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಭಾಗದಲ್ಲಿ ಬರುವುದರಿಂದ ಅವು ಖಾಲಿ ಉಳಿಯಲಿವೆ. ಕಾರ್ಗಿಲ್ ಮತ್ತು ಲೇಹ್ ಜಿಲ್ಲೆಗಳನ್ನು ಲಡಾಖ್ ಒಳಗೊಂಡಿರುತ್ತದೆ. ಲೋಕಸಭೆಯಲ್ಲಿ ಜಮ್ಮು ಕಾಶ್ಮೀರದ ಐವರು ಸದಸ್ಯರು ಹಾಗೂ ಲಡಾಖ್‌ನ ಒಬ್ಬ ಪ್ರತಿನಿಧಿ ಇರುತ್ತಾರೆ.



downloaded from: www.kpscvaani.com



ಅಂತರರಾಷ್ಟ್ರೀಯ ವ್ಯಾಪಾರ ಕ್ಷೇತ್ರದಲ್ಲಿ ಭಾರತ ತನ್ನದೇ ಆದ ಛಾಪು ಮೂಡಿಸಿದ್ದು, ಪಾಕಿಸ್ತಾನ ಕೈಗೊಂಡಿರುವ ವ್ಯಾಪಾರ ನಿರ್ಬಂಧದಂತಹ ಕ್ರಮದಿಂದ ಭಾರತಕ್ಕೆ ಯಾವುದೇ ನಷ್ಟವಿಲ್ಲ. ಬದಲಾಗಿ ಈ ಕ್ರಮ ಪಾಕಿಸ್ತಾನದ ಹಿತಾಸಕ್ತಿಗೇ ಹೆಚ್ಚು ಧಕ್ಕೆ ಉಂಟು ಮಾಡಲಿದೆ.

ಗಡಿಯಾಚೆಗಿನ ಭಯೋತ್ಪಾದನೆಗೆ ಪಾಕಿಸ್ತಾನ ಸರ್ಕಾರ ಕುಮ್ಮಕ್ಕು ಕೊಟ್ಟ ಹಿನ್ನೆಲೆಯಲ್ಲಿ ಭಾರತವೂ ಈ ಹಿಂದೆ ದ್ವಿಪಕ್ಷೀಯ ಸಂಬಂಧಗಳನ್ನು ಮೊಟಕುಗೊಳಿಸಿತ್ತು. 2001ರಲ್ಲಿ ಭಾರತದ ಸಂಸತ್ತಿನ ಮೇಲೆ ಪಾಕಿಸ್ತಾನ ಬೆಂಬಲಿತ ಉಗ್ರರ ದಾಳಿ ನಡೆದ ಹಿನ್ನೆಲೆಯಲ್ಲಿ ಭಾರತವು ಪಾಕಿಸ್ತಾನದಿಂದ ತನ್ನ ಹೈಕಮಿಷನರ್ ಅವರನ್ನು ಹಿಂದಕ್ಕೆ ಕರೆಸಿಕೊಂಡಿತ್ತು. ಒಟ್ಟಿನಲ್ಲಿ, ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಈ ನಿರ್ಧಾರ ದೇಶದ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದ ವಿದ್ಯಮಾನವಾಗಿ ಉಳಿಯಲಿದೆ.

**ನಿರ್ಧಾರ ಭಾಗಶಃ ಬೆಂಬಲಿಸಿದ ಹರಿಸಿಂಗ್ ಪುತ್ರ**

ಜಮ್ಮು–ಕಾಶ್ಮೀರವನ್ನು ಕಾಶ್ಮೀರದೊಂದಿಗೆ ವಿಲೀನಗೊಳಿಸಿದ್ದ ರಾಜಾ ಹರಿಸಿಂಗ್ ಅವರ ಪುತ್ರ, ಕಾಂಗ್ರೆಸ್ ಮುಖಂಡ ಕರಣ್ ಸಿಂಗ್, ಕೇಂದ್ರ ಸರ್ಕಾರದ ನಿರ್ಧಾರವನ್ನು ಭಾಗಶಃ ಸ್ವಾಗತಿಸಿದರು. ಕೇಂದ್ರ ಸರ್ಕಾರದ ನಡೆಯಲ್ಲಿ ಕೆಲವು ಸಕಾರಾತ್ಮಕ ಅಂಶಗಳು ಇವೆ ಎಂದರು.

ಭವಿಷ್ಯದಲ್ಲಿ ಜಮ್ಮು ಕಾಶ್ಮೀರದ ಗಡಿ ಗುರುತಿಸಲು ರಾಜ್ಯವನ್ನು ಕೇಂದ್ರಾಡಳಿತ ಪ್ರದೇಶವಾಗಿ ವಿಭಾಗಿಸಿದ ನಿರ್ಧಾರ, ಲಡಾಕ್‌ಗೆ ಕೇಂದ್ರಾಡಳಿತ ಪ್ರದೇಶದ ಸ್ಥಾನಮಾನ ನೀಡಿಕೆ ಮತ್ತು 35ಎ ವಿಧಿ ರದ್ದುಪಡಿಸು ಕ್ರಮಗಳು ಸರಿಯಾಗಿವೆ ಎಂದು ಅಭಿಪ್ರಾಯಪಟ್ಟರು.

ಕರಣ್ ಸಿಂಗ್ ಅವರು 17 ನವೆಂಬರ್ 1952 ರಿಂದ 30 ಮಾರ್ಚ್ 1965 ರವರೆಗೆ ಜಮ್ಮು ಕಾಶ್ಮೀರದ 'ಸದಾರ್ ಎ ರಿಯಾಸತ್' ಆಗಿದ್ದರು. ಆ ಹುದ್ದೆ ರದ್ದುಗೊಂಡು, 1965ರಲ್ಲಿ ಅವರು ಜಮ್ಮು ಕಾಶ್ಮೀರದ ಮೊದಲ ಗವರ್ನರ್ ಆಗಿ ಕಾರ್ಯನಿರ್ವಹಿಸಿದ್ದರು.

**ಬೇರೆ ರಾಜ್ಯಗಳಿಗೂ ಇದೆ ವಿಶೇಷ ಸ್ಥಾನಮಾನ**

ನಮ್ಮ ಸಂವಿಧಾನವು ಕಾಶ್ಮೀರಕ್ಕೆ ಮಾತ್ರ ವಿಶೇಷ ಸ್ಥಾನ ಮತ್ತು ಅಧಿಕಾರಗಳನ್ನು ಕೊಟ್ಟಿಲ್ಲ. 371ನೇ ವಿಧಿಯ ಪ್ರಕಾರ ಇನ್ನೂ ಕೆಲವು ರಾಜ್ಯಗಳಿಗೆ ವಿಶೇಷ ಸೌಲಭ್ಯದ ಸ್ಥಾನಮಾನ ಮತ್ತು ಅಧಿಕಾರಗಳನ್ನು ನೀಡಿದೆ. ಮಹಾರಾಷ್ಟ್ರ ಮತ್ತು ಗುಜರಾತ್ (371), ಅಸ್ಸಾಂ (371ಬಿ), ಆಂಧ್ರಪ್ರದೇಶ ಮತ್ತು ತೆಲಂಗಾಣ (371ಡಿ), ಸಿಕ್ಕಿಂ (371ಎಫ್), ಕರ್ನಾಟಕ (371ಜೆ) ಈ ರಾಜ್ಯಗಳಿಗೆ ಶಿಕ್ಷಣ, ಉದ್ಯೋಗ, ಅಭಿವೃದ್ಧಿ ವಿಷಯಗಳಲ್ಲಿ ಕೆಲವು ಕಡೆ ಇಡೀ ರಾಜ್ಯಕ್ಕೆ, ಇನ್ನು ಕೆಲವು ಕಡೆ ರಾಜ್ಯವೊಂದರ ನಿರ್ದಿಷ್ಟ ಪ್ರದೇಶಕ್ಕೆ ಪ್ರತ್ಯೇಕ ಸ್ಥಾನಮಾನ ಮತ್ತು ಸೌಲಭ್ಯಗಳನ್ನು ನೀಡಲಾಗಿದೆ.

ಆದರೆ, ಈ ರಾಜ್ಯಗಳಿಗೆ ನೀಡಿದ ವಿಶೇಷ ಸ್ಥಾನಮಾನಕ್ಕೂ ಕಾಶ್ಮೀರದ ವಿಶೇಷ ಸ್ಥಾನಮಾನಕ್ಕೂ ವ್ಯತ್ಯಾಸವಿದೆ. ಆದರೆ ನಾಗಾಲ್ಯಾಂಡ್ (371ಎ), ಮಿಜೋರಾಂ (371ಜಿ), ಅರುಣಾಚಲ ಪ್ರದೇಶ (371ಎಚ್) ಮತ್ತು ಮಣಿಪುರಕ್ಕೆ (371ಸಿ) ಸಂವಿಧಾನಾತ್ಮಕವಾಗಿ ಲಭ್ಯವಿರುವ ಸ್ಥಾನಮಾನಗಳು ಸ್ವಲ್ಪ ಅಂತರದಲ್ಲಿ ಕಾಶ್ಮೀರಕ್ಕಿದ್ದ ಸ್ಥಾನಮಾನವನ್ನೇ ಹೋಲುತ್ತವೆ.

ಮುಖ್ಯವಾಗಿ ನಾಗಾಲ್ಯಾಂಡ್ ಮತ್ತು ಮಿಜೋರಾಂಗೆ ನೀಡಿದ ವಿಶೇಷಾಧಿಕಾರಗಳನ್ನು ಗಮನಿಸಬೇಕು. 371ಎ ವಿಧಿಯಲ್ಲಿ, ನಾಗಾ ಜನ ಸಮಾವೇಶ 1960 ಮತ್ತು ಕೇಂದ್ರದ ನಡುವೆ ಆದ 16 ಅಂಶಗಳ ಒಪ್ಪಂದದಂತೆ ವಿಶೇಷಾಧಿಕಾರದ ಕೆಲವು ಅಂಶಗಳನ್ನು ಅಳವಡಿಸಲಾಗಿದೆ. 1963ರಲ್ಲಿ ರೂಪುಗೊಂಡ ನಾಗಾಲ್ಯಾಂಡ್‌ಗೆ ಸಂಬಂಧಿಸಿದಂತೆ ದೇಶದ ಪಾರ್ಲಿಮೆಂಟು, ಧರ್ಮ, ಸಾಮಾಜಿಕ ಪದ್ಧತಿ, ಆಚರಣೆ, ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯ, ಬಹುಮುಖ್ಯವಾಗಿ ಆಸ್ತಿ ಮಾಲೀಕತ್ವದ ಬಗ್ಗೆ ವಿಶೇಷಾಧಿಕಾರವನ್ನು 371ಎ ವಿಧಿ ನೀಡಿದೆ. ನಾಗಾಲ್ಯಾಂಡ್‌ನ ಶಾಸನಸಭೆಯ ಒಪ್ಪಿಗೆಯಿಲ್ಲದೆ ಕೇಂದ್ರ ಸರ್ಕಾರವಾಗಲೀ, ಪಾರ್ಲಿಮೆಂಟಾಗಲೀ ಸ್ವತಂತ್ರವಾಗಿ ತಮ್ಮ ಕಾನೂನನ್ನು ಜಾರಿ ಮಾಡುವಂತಿಲ್ಲ. ಈ ಎಲ್ಲ ಅಂಶಗಳೂ 371ಜಿ ಪ್ರಕಾರ ಮಿಜೋರಾಂಗೆ ಅನ್ವಯಿಸುತ್ತವೆ. ಅಂದರೆ, ಬೇರೆ ರಾಜ್ಯದವರು, ಕಾಶ್ಮೀರದಲ್ಲಿ ಇದ್ದಂತೆ ಈ ರಾಜ್ಯದಲ್ಲೂ ಆಸ್ತಿ ಖರೀದಿಸುವಂತಿಲ್ಲ ಎಂಬ ನಿರ್ಬಂಧ ಸೇರಿದಂತೆ ಸ್ವತಂತ್ರ ಕಾನೂನುಗಳೇ ಇವೆ.

ಇನ್ನು, ಅರುಣಾಚಲ ಪ್ರದೇಶ ಮತ್ತು ಮಣಿಪುರಕ್ಕೆ ಕಾಶ್ಮೀರ, ನಾಗಾಲ್ಯಾಂಡ್, ಮಿಜೋರಾಂನಂತೆ ತೀರಾ ವಿಶೇಷಾಧಿಕಾರ ಇಲ್ಲದಿದ್ದರೂ ರಾಜ್ಯಪಾಲರಿಗೆ ಕೆಲವು ವಿಶೇಷಾಧಿಕಾರಗಳನ್ನು ನೀಡಲಾಗಿದೆ. ಅಂದರೆ ರಾಷ್ಟ್ರಪತಿ ತಮ್ಮ ಪ್ರತಿನಿಧಿಯಾದ ರಾಜ್ಯಪಾಲರ ಮೂಲಕ ಕೆಲವು ನಿರ್ಣಯ, ನಿರ್ಬಂಧಗಳಿಗೆ ಕಾರಣವಾಗ ಬಹುದಾಗಿದೆ.



downloaded from: www.kpscvaani.com


ಅಪರೂಪದ ಸಾಹಿತಿ

# ಕೆ. ಪಿ. ಪೂರ್ಣಚಂದ್ರ ತೇಜಸ್ವಿ

ಡಾ. ಸಂಗಮೇಶ ತಮ್ಮನಗೌಡ್ರ




ಕನ್ನಡ ಸಾಹಿತ್ಯದ ನವ್ಯ ಸಾಹಿತ್ಯ ಪರಂಪರೆಯಲ್ಲಿ ಮಹಾಕವಿ ಕುವೆಂಪು ಅವರ ಮಗ ಕೆ.ಪಿ.ಪೂರ್ಣಚಂದ್ರತೇಜಸ್ವಿಯವರದು ಬಹುದೊಡ್ಡ ಹೆಸರು. ಸಾಹಿತ್ಯ ಮತ್ತು ಸಂಸ್ಕೃತಿಯ ಆಗರದಂತಿದ್ದ ಮಹಾನಗರಿ ಮೈಸೂರನ್ನು ಬಿಟ್ಟು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ನೆಲಸಿ, ಕಾಫಿ ಎಸ್ಟೇಟಿನಲ್ಲಿ ಜೀವ ಸವೆಸುತ್ತ ಪರಿಸರ ವಿಜ್ಞಾನ, ವಾಸ್ತವಿಕ ಚಿಂತನದ ಹಲವಾರು ಕೃತಿಗಳನ್ನು ರಚಿಸಿದ ನಿಗೂಢ ಪ್ರತಿಭೆಯ ವಿಶಿಷ್ಟ ವ್ಯಕ್ತಿತ್ವದಲ್ಲಿ ಲೋಹಿಯಾವಾದಿಯಾಗಿ ಜನರ ಜಂಜಾಟದಿಂದ ದೂರ ಉಳಿದು ಆತ್ಮಾನಂದದ ಚಿಲುಮೆಯಲ್ಲಿ ಭಾವಕುಲುಮೆಯ ತಿದಿ ಒತ್ತುತ್ತ ಅದ್ಭುತವಾಗಿ ಬರಹಗಾರಿಕೆಯ ಗುಂಗು ಮರೆದರು.





# ದೊಡ್ಡಬಳ್ಳಾಪುರದಲ್ಲಿ ಮಹಾತ್ಮ ಗಾಂಧಿ



ವೇಮಗಲ್ ಸೋಮಶೇಖರ್

ಮಹಾತ್ಮ ಗಾಂಧೀಜಿ ಹರಿಜನೋದ್ಧಾರ ನಿಧಿಗಾಗಿ 1933ರಲ್ಲಿ ದೇಶದಾದ್ಯಂತ ಪ್ರವಾಸ ಮಾಡಲು ಪ್ರಾರಂಭಿಸಿದರು. ಹೀಗೆ ಪ್ರವಾಸ ಮಾಡುತ್ತಾ 1934ರ ಜನವರಿ ನಾಲ್ಕರ ಗುರುವಾರದಂದು ಬೆಳಗಿನ ಜಾವ ಅನಂತಪುರದಿಂದ ಹಿಂದೂಪುರಕ್ಕೆ ರೈಲಿನಲ್ಲಿ ಆಗಮಿಸಿದರು. ಜೊತೆಯಲ್ಲಿ ಮೀರಾ ಬಹನ್, ಜಮ್ನಾಲಾಲ್ ಬಜಾಜ್ ಮತ್ತು ಅವರ ಮಗಳು 14 ವರ್ಷ ವಯಸ್ಸಿನ ಓಂ(ಉಮಾ) ಇನ್ನೂ ಕೆಲವರಿದ್ದರು. (ಆ ಸಮಯದಲ್ಲಿ ಕಸ್ತೂರಿಬಾ ಮತ್ತು ಮಹದೇವ ದೇಸಾಯಿ ಪುಣೆಯಲ್ಲಿನ ಯರವಾಡ ಸೆರೆಮನೆಯಲ್ಲಿ ಬಂಧಿತರಾಗಿದ್ದ ಕಾರಣ ಪ್ರವಾಸದಲ್ಲಿರಲಿಲ್ಲ) ಗಾಂಧಿಯವರನ್ನು ಸ್ವಾಗತಿಸಲು ಬೆಂಗಳೂರಿನಿಂದ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದ ರಾಜಸೇವಾ ಪ್ರಸಕ್ತ ಪಾಮಡಿ ಸುಬ್ಬರಾಮಶೆಟ್ಟಿ, ತಿಟ್ಟಮಾರನಹಳ್ಳಿ ಎ.ವೆಂಕಟಪ್ಪ, ಕೆಂಗೇರಿ ಗುರುಕುಲಾಶ್ರಮದ ಬ್ರಹ್ಮಚಾರಿ ರಾಮಚಂದ್ರ, ತಗಡೂರು ರಾಮಚಂದ್ರರಾಯರು, ಬೆಂಗಳೂರು ದೇಶೀಯ ವಿದ್ಯಾಶಾಲೆಯ ಜಿ.ಆರ್.ಶ್ರೀನಿವಾಸಯ್ಯಂಗಾರ್, ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಕೆ..ಚಂಗಲರಾಯರೆಡ್ಡಿ ಮುಂತಾದವರು ಬೆಂಗಳೂರಿನಿಂದ ಹಿಂದೂಪುರಕ್ಕೆ ಕಾರಿನಲ್ಲಿ ಹೋಗಿದ್ದರು. ಹಿಂದೂಪುರದಲ್ಲಿ ಸ್ನಾನ, ಪ್ರಾರ್ಥನೆ, ಫಲಹಾರ ಮುಗಿಸಿದ ಗಾಂಧೀಜಿ ಸ್ವಲ್ಪ ವಿಶ್ರಾಂತಿ ಪಡೆದು ಸುಮಾರು ಎಂಟು ಗಂಟೆ ವೇಳೆಗೆ ಹಿಂದೂಪುರದಿಂದ ಕಾರಿನಲ್ಲಿ ಮೈಸೂರು ಪ್ರಾಂತ್ಯದ ಪ್ರವಾಸ ಪ್ರಾರಂಭಿಸಿದರು. ಎಲ್ಲರೂ ಗಾಂಧಿಯವರನ್ನು ಹಿಂಬಾಲಿಸಿದರು. ಮೊದಲಿಗೆ ಮೈಸೂರು ಸಂಸ್ಥಾನದ ಗಡಿಯಲ್ಲಿನ ವಿದುರಾಶ್ವತ್ಥಕ್ಕೆ ಮಹಾತ್ಮರು ಆಗಮಿಸಿದಾಗ ಹಾದಿಯಲ್ಲಿಯೇ ಎಸ್.ಸಿ.ನಾಗಯ್ಯರೆಡ್ಡಿಯವರು ಹಾರವನ್ನು ಸಮರ್ಪಿಸಿ ನಿಧಿಯನ್ನು ಅರ್ಪಿಸಿದರು. ಅಲ್ಲಿಂದ ಗೌರಿಬಿದನೂರು ಮಾರ್ಗವಾಗಿ ದೊಡ್ಡಬಳ್ಳಾಪುರಕ್ಕೆ ಸುಮಾರು ಹತ್ತು ಗಂಟೆಗೆ ಆಗಮಿಸಿದರು.

ದೊಡ್ಡಬಳ್ಳಾಪುರದಲ್ಲಿ ಟಿ.ಸಿದ್ದಲಿಂಗಯ್ಯ, ರುಮಾಲೆ ಚನ್ನಬಸವಯ್ಯ, ರುಮಾಲೆ ಭದ್ರಣ್ಣ, ಮುಗುವಾಳಪ್ಪ ಮತ್ತು ನಾ.ನಂಜುಂಡಯ್ಯ ಮುಂತಾದವರು ಮಹಾತ್ಮರಿಗೆ ಹೂಮಾಲೆ ಹಾಕಿ ಆತ್ಮೀಯವಾಗಿ ಬರಮಾಡಿಕೊಂಡರು. ಅಲ್ಲಿನ ನಾಗರಿಕರು ನೆಲದಾಂಜನೇಯಸ್ವಾಮಿ ದೇವಾಲಯದ ಬಳಿ ಗಾಂಧೀಜಿ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಲು ವ್ಯವಸ್ಥೆ ಮಾಡಿದ್ದರು. ಅಲ್ಲಿ ಅದ್ದೂರಿಯಿಂದ ಸ್ವಾಗತ ಸಮಾರಂಭ ನಡೆಯಿತು. ಪುರಸಭೆಯವರು ಗಾಂಧಿಯವರಿಗೆ ಭಿನ್ನವತ್ತಳೆ ನೀಡಿ ಸನ್ಮಾನಿಸಿ ಹರಿಜನ ನಿಧಿಗಾಗಿ 200 ರೂಪಾಯಿಗಳನ್ನು ನೀಡಿದರೆ, ಮಹಿಳೆಯರು ಪ್ರತ್ಯೇಕವಾಗಿ 60 ರೂಪಾಯಿಗಳನ್ನು ನೀಡಿದರು. ಸಾರ್ವಜನಿಕರ ಪರವಾಗಿ ವಕೀಲ ತಿಮ್ಮಾರೆಡ್ಡಿಯವರು ಗಾಂಧಿಯವರಿಗೆ ಮಾನಪತ್ರವನ್ನು ಸಲ್ಲಿಸಿದರು. ಅದನ್ನು ಸ್ವೀಕರಿಸಿದ ಗಾಂಧೀಜಿ ಸ್ಥಳೀಯರು ತೋರಿದ ಆದರಾಭಿಮಾನಿಗಳಿಗಾಗಿ ವಂದಿಸಿದರು.

ಆ ಮಾನಪತ್ರದಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದ ಹಲವಾರು ಅಂಶಗಳಲ್ಲಿ "ಹಿಂದೂ ಸಮಾಜದಲ್ಲಿ ಕೆಳವರ್ಗದ ಜನರಿಗಾಗಿ ನೀವು ಮಾಡಿರುವ ತ್ಯಾಗ ರಾಷ್ಟ್ರದ ಕರ್ತವ್ಯ ಪ್ರಜ್ಞೆಯನ್ನು ಜಾಗೃತಗೊಳಿಸಿದೆ. ಹಿಂದೂ ಸಮಾಜದದಲ್ಲಿರುವ ಈ ಕಪ್ಪುಚುಕ್ಕೆಯನ್ನು ಸದ್ಯದಲ್ಲೇ ಸಂಪೂರ್ಣವಾಗಿ ತೊಡೆದು ಹಾಕುವಲ್ಲಿ ಎಳ್ಳಷ್ಟು ಅನುಮಾನವಿಲ್ಲ. ದೊಡ್ಡಬಳ್ಳಾಪುರ ಪಟ್ಟಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಸಾಂಪ್ರದಾಯಿಕ ಕುಂದುಕೊರತೆಗಳಿಂದ ಅವರಿನ್ನು ಮುಕ್ತವಾಗಿಲ್ಲ. ಅನಕ್ಷರಸ್ಥರಾಗಿರುವ ಹರಿಜನರು ಬಡತನದಿಂದ ಬಳಲುತ್ತಿದ್ದಾರೆ. ಈ ಹರಿಜನರ ಸೇವೆಗೆಂದೇ ದೀನಸೇವಾಸಂಘ ಸ್ಥಾಪಿಸಲಾಗಿದೆ ಇಲ್ಲಿ ಸುಮಾರು 800 ಮಂದಿ ಹರಿಜನರಿದ್ದಾರೆ. ಇವರಿಗಾಗಿಯೇ ಇರುವ ಎರಡು ಶಾಲೆಗಳಲ್ಲಿ ಶೇಕಡ 50 ರಷ್ಟು ಮಕ್ಕಳು ಹಾಜರಾಗುತ್ತಿದ್ದಾರೆ. ಉನ್ನತ ವರ್ಗದ ತರಗತಿಗಳಲ್ಲಿ ಹರಿಜನ ವಿದ್ಯಾರ್ಥಿಗಳು ಇತರ ಹಿಂದೂ ವಿದ್ಯಾರ್ಥಿಗಳೊಂದಿಗೆ ಮುಕ್ತವಾಗಿ ಬೆರೆಯುತ್ತಿದ್ದು ತಾರತಮ್ಯತೆ ಇಲ್ಲದೆ ಸಮಾನ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಅಲ್ಲದೆ ಹರಿಜನರ ಉದ್ಧಾರಕ್ಕಾಗಿ ಮೈಸೂರು ಸಂಸ್ಥಾನವು ಎಲ್ಲಾ ರೀತಿಯ ಸೌಕರ್ಯವನ್ನು ಒದಗಿಸುತ್ತಿರುವುದು ಮೆಚ್ಚುವಂತಹ ವಿಷಯವಾಗಿದೆ" ಎಂದು ಆ ಪತ್ರದಲ್ಲಿ ನಮೂದಿಸಲಾಗಿತ್ತು.

ಗಾಂಧೀಜಿ ಮಾತನಾಡುವುದಕ್ಕೆ ಮೊದಲೇ ಪ್ರೇಕ್ಷಕ ಸಮೂಹದಲ್ಲಿದ್ದ ವ್ಯಕ್ತಿಯೊಬ್ಬನು ಗಾಂಧಿಯವರಿಗೆ ಇಲ್ಲಿಯ ನಾಗರಿಕರಾದ ನಾವು ನೀಡಿರುವ ದೇಣಿಗೆ ಸಣ್ಣ ಮೊತ್ತದೆಂದು ಹೇಳಿದನು. ಅದಕ್ಕೆ 'ನೀವೇನು ಬಡವರಲ್ಲ' ಎಂದು ಗಾಂಧೀಜಿ ಮಾರ್ಮಿಕವಾಗಿ ತಮಾಷೆಯಿಂದ ಚುರುಕು ಮುಟ್ಟಿಸಿದರು. ನಂತರ ಸ್ಥಳೀಯ ನಿವಾಸಿಯಾದ ಶ್ರೀಮತಿ ಅನ್ನಪೂರ್ಣದೇವಿಯವರು ನೀಡಿದ ಚಿನ್ನದ ಜೋಡಿ ಬಳೆಗಳನ್ನು ಗಾಂಧೀಜಿ ಸ್ವೀಕರಿಸುತ್ತಾ 'ಇದು ನನ್ನ ಪಾಲ್ಗ ಅಲ್ಲವೇ' ಎಂದು ಉದ್ಗರಿಸಿದರು. ಪಟ್ಟಣಿಗರು ನೀಡಿದ ಮಾನಪತ್ರಕ್ಕೆ ಹಾಗೂ ದೇಣಿಗೆಗೆ ಮಹಾತ್ಮರು ವಂದಿಸುತ್ತಾ "ಅಸ್ಪೃಶ್ಯತೆಯನ್ನು ಪ್ರತಿಯೊಬ್ಬರೂ ತಮ್ಮ ಹೃದಯಾಂತರಾಳದಿಂದ ಕಿತ್ತು ಬಿಸಾಡುವಿರಿ ಎಂಬ ಭರವಸೆ ನನಗಿದೆ. ಇಲ್ಲಿನ ಶೇಕಡ 50ರಷ್ಟು ಹರಿಜನ ಮಕ್ಕಳು ಶಾಲೆಗೆ ಹಾಜರಾಗುತ್ತಿರುವರೆಂಬ ಸಂತೋಷದ ಸಂಗತಿಗಾಗಿ ನೀವು ಅಭಿನಂದನೆಗೆ ಅರ್ಹರಾಗಿದ್ದೀರಿ. ಆದರೆ ಇಷ್ಟು ಹರಿಜನ ಮಕ್ಕಳು ಹರಿಜನ ಶಾಲೆಗಳಿಗೆ ಹಾಜರಾಗುತ್ತಿದ್ದಾರೆ ಎಂದು ತೋರಿಸುವ ಮೂಲಕ ತಮ್ಮತಮ್ಮಲ್ಲೇ ತೃಪ್ತರಾಗುವುದರಲ್ಲಿ ಅರ್ಥವಿಲ್ಲ. ಪ್ರತಿಯೊಬ್ಬ ಹರಿಜನ ಬಾಲಕ ಬಾಲಕಿಯರಿಗೂ ಶಿಕ್ಷಣ ನೀಡುವುದು ಅತ್ಯವಶ್ಯಕವಾಗಿದೆ. ಅಸ್ಪೃಶ್ಯತೆಯ ಭಾವವನ್ನು ತಮ್ಮ ಮನದಾಳದಿಂದ ಬೇರು ಸಹಿತ ಕಿತ್ತು ಹಾಕಬೇಕಾಗಿದೆ. ಯಾವುದೇ ವ್ಯಕ್ತಿಯನ್ನು ಅಸ್ಪೃಶ್ಯನೆಂದು ಪರಿಗಣಿಸುವುದು ತಪ್ಪು. ಯಾರೊಬ್ಬರು ತಮಗಿಂತ ಕೀಳಲ್ಲ ಎಂಬ ಅಂಶವನ್ನು ಅವರು ಮರೆಯಬಾರದು. ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಲು ದೇವರು ಅವರಿಗೆಲ್ಲಾ ಶಕ್ತಿ ಸಾಮರ್ಥ್ಯ ನೀಡಲಿ" ಎಂದು ಹಾರೈಸುತ್ತಾ ತಮ್ಮ ಭಾಷಣವನ್ನು ಮುಗಿಸಿದರು. ಇಂಗ್ಲಿಷಿನಲ್ಲಿ ಆಡಿದ ಗಾಂಧಿಯವರ ಮಾತನ್ನು ಗಾಂಧಿಯವರ ಜೊತೆಯಲ್ಲಿಯೇ ಇದ್ದ ಎ.ವೆಂಕಟಪ್ಪನವರು ಕನ್ನಡಕ್ಕೆ ಭಾಷಾಂತರಿಸಿದರು. ಆ ಸಮಯದಲ್ಲಿ ರುಮಾಲೆ ಭದ್ರಣ್ಣ ಮತ್ತು ಸಂಗಡಿಗರು ರುಮಾಲೆ ಛತ್ರದಲ್ಲಿ ಖಾದಿ ಬಟ್ಟೆಗಳ ಪ್ರದರ್ಶನ ಏರ್ಪಡಿಸಿದ್ದರು. ಆಗ ಸಾವಿರಾರು ಗಾಂಧಿ ಟೋಪಿಗಳು ಖರ್ಚಾದವು. ನಂತರ ಗಾಂಧೀಜಿ ದೊಡ್ಡಬಳ್ಳಾಪುರದಿಂದ ಯಲಹಂಕದಲ್ಲಿನ ಪ್ರಸಿದ್ಧ ಹೆಂಚಿನ ಕಾರ್ಖಾನೆಯ(ಸ್ಟಾಂಡರ್ಡ್ ಬ್ರಿಕ್ ಅಂಡ್ ಟೈಲ್ ಫ್ಯಾಕ್ಟರಿ) ಮಾಲೀಕರಾದ ಶ್ರೀ ವೇಣುಗೋಪಾಲ ಮೊದಲಿಯಾರ್ ಅವರು ನೀಡಿದ್ದ ಕಾರಿನಲ್ಲಿ ತುಮಕೂರಿನತ್ತ ಪ್ರಯಾಣ ಬೆಳೆಸಿದರು. ಮಹಾತ್ಮ ಗಾಂಧೀಜಿ ದೊಡ್ಡಬಳ್ಳಾಪುರಕ್ಕೆ ಬಂದು ಭಾಷಣ ಮಾಡಿದ ಸ್ಥಳವೇ ಈಗಿನ ಗಾಂಧಿನಗರ.



1934 ಜನವರಿ 4ರಂದು ಮಹಾತ್ಮಾ ಗಾಂಧೀಜಿ ದೊಡ್ಡಬಳ್ಳಾಪುರಕ್ಕೆ ಆಗಮಿಸಿದ ಸಂದರ್ಭದ ಚಿತ್ರ


> ಪ್ರತಿಯೊಬ್ಬ ಹರಿಜನ ಬಾಲಕ ಬಾಲಕಿಯರಿಗೂ ಶಿಕ್ಷಣ ನೀಡುವುದು ಅತ್ಯವಶ್ಯಕವಾಗಿದೆ. ಅಸ್ಪೃಶ್ಯತೆಯ ಭಾವವನ್ನು ತಮ್ಮ ಮನದಾಳದಿಂದ ಬೇರು ಸಹಿತ ಕಿತ್ತು ಹಾಕಬೇಕಾಗಿದೆ. ಯಾವುದೇ ವ್ಯಕ್ತಿಯನ್ನು ಅಸ್ಪೃಶ್ಯನೆಂದು ಪರಿಗಣಿಸುವುದು ತಪ್ಪು. ಯಾರೊಬ್ಬರು ತಮಗಿಂತ ಕೀಳಲ್ಲ ಎಂಬ ಅಂಶವನ್ನು ಅವರು ಮರೆಯಬಾರದು. ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಲು ದೇವರು ಅವರಿಗೆಲ್ಲಾ ಶಕ್ತಿ ಸಾಮರ್ಥ್ಯ ನೀಡಲಿ ಎಂದು ಗಾಂಧೀಜಿಯವರು ಹಾರೈಸುತ್ತಾರೆ.







downloaded from: www.kpscvaani.com



# ಕರ್ನಾಟಕದಲ್ಲಿ ಪ್ರವಾಹ:
# ಸರ್ಕಾರ, ಕನ್ನಡಿಗರ ಸ್ಪಂದನೆ

ರಾಜ್ಯದಲ್ಲಿ ಸಂಭವಿಸಿದ ಭೀಕರ ಪ್ರವಾಹದಿಂದ ತತ್ತರಿಸಿರುವ ಜನಸಾಮಾನ್ಯರ ಬದುಕು ಹೇಳತೀರದಾಗಿದೆ. ಮನೆ, ಮಠ, ಆಸ್ತಿ ಕಳೆದುಕೊಂಡು ನಿರಾಶ್ರಿತರಾಗಿ, ಮಾನಸಿಕವಾಗಿ ನೊಂದಿರುವ ಜನರ ಬಳಿಗೆ ಸ್ವತಃ ಮಾನ್ಯ ಮುಖ್ಯಮಂತ್ರಿಯವರೇ ಹೋಗಿ ಸಾಂತ್ವಾನ ಹೇಳಿದ್ದಾರೆ. ತಮ್ಮ ಬದುಕನ್ನು ಮತ್ತೆ ಕಟ್ಟಿಕೊಡುವುದಾಗಿ ಅವರು ಭರವಸೆ ನೀಡಿರುವುದು ಜನರಲ್ಲಿ ಆಶಾಭಾವನೆ ಮೂಡಿದೆ.

ಬರದ ಬೇಗೆಯಿಂದ ತತ್ತರಿಸಿದ್ದ ಕರ್ನಾಟಕ ಆಗಸ್ಟ್ ತಿಂಗಳಿನಲ್ಲಿ ಪ್ರವಾಹವನ್ನು ಎದುರಿಸುವ ಪರಿಸ್ಥಿತಿ ಬಂದೊದಗಿದ್ದು ಅನಿರೀಕ್ಷಿತ. ಮಹಾರಾಷ್ಟ್ರದ ಕೃಷ್ಣಾ ನದಿ ಪಾತ್ರದಲ್ಲಿ ಭಾರಿ ಮಳೆಯಾಗಿದ್ದರಿಂದ ಕೃಷ್ಣಾ ನದಿಯಲ್ಲಿ ಹರಿದು ಬಂದ ಭಾರಿ ಪ್ರಮಾಣದ ನೀರು, ಜೊತೆಗೆ ರಾಜ್ಯದಲ್ಲಿ ಸುರಿದ ಭಾರಿ ಮಳೆಗೆ ರಾಜ್ಯದಲ್ಲಿ ನೂರಾರು ಗ್ರಾಮಗಳು ಜಲಾವೃತವಾದವು. ಅಂತೆಯೇ ಮಲೆನಾಡು, ಕರಾವಳಿ ಜಿಲ್ಲೆಗಳಲ್ಲಿಯೂ ಮಳೆ, ಭೂಕುಸಿತಕ್ಕೆ ತೀವ್ರ ಹಾನಿ ಸಂಭವಿಸಿದೆ. ಪ್ರಕೃತಿಯ ಮುಂದೆ ಮಾನವ ಅತ್ಯಲ್ಪ ಎಂಬುದನ್ನು ಪ್ರವಾಹ ಪರಿಸ್ಥಿತಿ ಮತ್ತೊಮ್ಮೆ ಸಾಬೀತು ಮಾಡಿತು.

ರಾಜ್ಯದಲ್ಲಿ ಆಗಸ್ಟ್ 3 ರಿಂದ 10 ರ ನಡುವೆ ವಾಡಿಕೆಗಿಂತ ಶೇ. 279 ರಷ್ಟು ಹೆಚ್ಚು ಮಳೆ ಆಗಿತ್ತು. ಇದು ಕಳೆದ 118 ವರ್ಷಗಳಲ್ಲಿಯೇ ದಾಖಲೆ ಮಳೆಯಾಗಿದೆ.







downloaded from: www.kpscvaani.com

ಮುಖ್ಯಮಂತ್ರಿ ಪರಿಹಾರ ನಿಧಿಗೆ ನೆರವು ಸಲ್ಲಿಸಬಯಸುವವರು, ಮುಖ್ಯಮಂತ್ರಿಗಳ ಪರಿಹಾರ ನಿಧಿ ಖಾತೆಗೆ ಚೆಕ್, ಡಿಡಿ ಅಥವಾ ಆನ್‌ಲೈನ್ ಮೂಲಕ ದೇಣಿಗೆ ನೀಡಬಹುದು. ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ ನೀಡ ಬಯಸುವವರು **https://cmrf.karnataka.gov.in** ವೆಬ್ ತಾಣದಲ್ಲಿ ಆರ್.ಟಿ.ಜಿ.ಎಸ್ ಅಥವಾ ಎನ್.ಇ.ಎಫ್.ಟಿ ಮೂಲಕ ನೇರವಾಗಿ ಹಣ ಪಾವತಿಸಬಹುದು.

ಇದಲ್ಲದೆ ಭೀಮ್, ಯುಪಿಐ, ಎಸ್‌ಬಿಐ ಇ–ಪೇ, ಫೋನ್ ಪೇ, ಗೂಗಲ್ ಪೇ, ಪೇಟಿಎಂ, ಹೆಚ್‌ಡಿಎಫ್‌ಸಿ ಬ್ಯಾಂಕ್, ಆಕ್ಸಿಸ್ ಬ್ಯಾಂಕ್‌ಗಳ ಮುಖಾಂತರವೂ ದೇಣಿಗೆ ನೀಡಬಹುದು.

ನದಿ ದಂಡೆಯಲ್ಲಿರುವ ನೂರಾರು ಹಳ್ಳಿಗಳು ಜಲಾವೃತವಾಗಿ ಜನ, ಜಾನುವಾರುಗಳು ನೆಲೆ ಕಳೆದುಕೊಳ್ಳಬೇಕಾಯಿತು. ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರವಾಹ, ಭೂಕುಸಿತದಿಂದ ಸಾಕಷ್ಟು ನಷ್ಟ ಸಂಭವಿಸಿತು.

ಸರ್ಕಾರ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದಲ್ಲದೆ, ಸ್ವತಃ ಮುಖ್ಯಮಂತ್ರಿಗಳೇ ಪ್ರವಾಹ ಪೀಡಿತ ಜಿಲ್ಲೆಗಳಿಗೆ ಭೇಟಿ ನೀಡಿ ಸಂತ್ರಸ್ತರಿಗೆ ಸಾಂತ್ವನ ಹೇಳಿದರು. ನಿಮ್ಮೊಂದಿಗೆ ನಾವಿದ್ದೇವೆ ಎಂದು ಧೈರ್ಯ ಹೇಳಿದರು. ಮುಖ್ಯಮಂತ್ರಿಗಳು ಮತ್ತು ಮುಖ್ಯ ಕಾರ್ಯದರ್ಶಿಗಳು ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗಳನ್ನು ಪರಿಶೀಲಿಸಿ, ಜಿಲ್ಲಾಡಳಿತಕ್ಕೆ ಮಾರ್ಗದರ್ಶನ ನೀಡಿದ್ದಾರೆ.

ಕೇಂದ್ರ ಸರ್ಕಾರವೂ ರಾಜ್ಯದ ಮನವಿಗೆ ಕೂಡಲೇ ಸ್ಪಂದಿಸಿ, ರಕ್ಷಣಾ ಕಾರ್ಯಾಚರಣೆಗೆ ಎನ್‌ಡಿಆರ್‌ಎಫ್, ಸೇನೆ, ವಾಯುಪಡೆ, ನೌಕಾಪಡೆಗಳ ಜೊತೆಗೆ ರಕ್ಷಣಾ ಸಾಮಗ್ರಿಗಳ





| ರಾಜ್ಯದ ಪ್ರವಾಹ ಪರಿಸ್ಥಿತಿಯ ಸಂಕ್ಷಿಪ್ತ ಮಾಹಿತಿ ಹಾಗೂ ರಕ್ಷಣೆ, ಪರಿಹಾರ ಕಾರ್ಯಗಳ ಚಿತ್ರ ನೋಟ ಇಲ್ಲಿದೆ: | |
|---|---|
| ಪ್ರವಾಹ ಪೀಡಿತ ಜಿಲ್ಲೆಗಳು | 22 |
| ತಾಲ್ಲೂಕುಗಳ ಸಂಖ್ಯೆ | 103 |
| ಪ್ರವಾಹದಿಂದ ಮೃತಪಟ್ಟ ಜನರ ಸಂಖ್ಯೆ | 82 |
| ನಾಪತ್ತೆಯಾದ ಜನರು | 9 |
| ಸ್ಥಳಾಂತರಗೊಂಡ ಜನರು | 6.97 ಲಕ್ಷ |
| ಸ್ಥಳಾಂತರಗೊಂಡ ಜಾನುವಾರು | 51,460 |
| ಪ್ರಾರಂಭಿಸಿದ ಪರಿಹಾರ ಕೇಂದ್ರಗಳು (ಗರಿಷ್ಠ) | 1224 |
| ಪರಿಹಾರ ಕೇಂದ್ರಗಳಲ್ಲಿ ಆಶ್ರಯ ಪಡೆದ ಜನರ ಸಂಖ್ಯೆ | 3.97 ಲಕ್ಷ |
| ಬೆಳೆ ಹಾನಿ ಪ್ರದೇಶ (ಹೆಕ್ಟೇರ್‌ಗಳಲ್ಲಿ) | 7.5 ಲಕ್ಷ |

(ಆಗಸ್ಟ್ 19, 2019ರ ವರೆಗಿನ ಮಾಹಿತಿ.)

ನೆರವು ಸಹ ಒದಗಿಸಿತು. ಕೇಂದ್ರ ಸಚಿವರಾದ ಅಮಿತ್ ಷಾ, ನಿರ್ಮಲಾ ಸೀತಾರಾಮನ್, ಡಿ.ವಿ. ಸದಾನಂದಗೌಡ, ಪ್ರಹ್ಲಾದ ಜೋಶಿ, ಸುರೇಶ್ ಅಂಗಡಿ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದ್ದಾರೆ.

ದೆಹಲಿಯಲ್ಲಿ ಪ್ರಧಾನಿ, ಗೃಹ ಸಚಿವರು, ಹಣಕಾಸು ಸಚಿವರನ್ನು ಭೇಟಿಯಾಗಿ ತ್ವರಿತವಾಗಿ ಪರಿಹಾರ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿಗಳು ಮನವಿ ಸಲ್ಲಿಸಿದರು. ಸಚಿವ ಸಂಪುಟ ರಚನೆಯಾದ ಕೂಡಲೇ ಎಲ್ಲ ಸಚಿವರೂ ಪ್ರವಾಹ ಪೀಡಿತ ಜಿಲ್ಲೆಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿ, ಪರಿಹಾರ ಕ್ರಮಗಳ ಕುರಿತು ಚರ್ಚಿಸುವಂತೆ ತಿಳಿಸಿದರು.

ಸರ್ಕಾರ ಸಂತ್ರಸ್ತರ ತಕ್ಷಣದ ನೆರವಿಗೆ 10 ಸಾವಿರ ರೂ. ಪರಿಹಾರ, ಭಾಗಶಃ ಹಾನಿಯಾದ ಮನೆಗಳ ದುರಸ್ತಿಗೆ 1 ಲಕ್ಷ ರೂ. ಹಾಗೂ ಸಂಪೂರ್ಣ ಹಾನಿಯಾದ ಮನೆಗಳ ಪುನರ್‌ನಿರ್ಮಾಣಕ್ಕೆ 5 ಲಕ್ಷ ರೂ. ಪರಿಹಾರ ಘೋಷಿಸಲಾಗಿದೆ. ತುರ್ತು ಪರಿಹಾರವಾಗಿ 10 ಸಾವಿರ ರೂ.ಗಳನ್ನು ವಿತರಣೆ ಮಾಡಲು ಈಗಾಗಲೇ ಕ್ರಮ ವಹಿಸಲಾಗಿದೆ.

ಇದಲ್ಲದೆ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಫಲಾನುಭವಿಗಳಿಗೆ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ಘೋಷಿಸಿದ್ದ ನಾಲ್ಕು ಸಾವಿರ ರೂ.ಗಳಲ್ಲಿ ಮೊದಲ ಕಂತಿನ ತಲಾ ಎರಡು ಸಾವಿರ ರೂ. ಬಿಡುಗಡೆ ಮಾಡಲಾಗಿದೆ.

ಪ್ರವಾಹ ಪರಿಹಾರಕ್ಕೆ ನೆರವು ನೀಡುವ ನಿಟ್ಟಿನಲ್ಲಿ ರಾಜ್ಯದ ಸಮಸ್ತ ಜನತೆ ಸಂತ್ರಸ್ತರ ನೆರವಿಗೆ ಮುಂದಾಗಿದ್ದು, ಸಂತ್ರಸ್ತರಿಗೆ ನೀರು, ಆಹಾರ ಪದಾರ್ಥಗಳು ಮತ್ತಿತರ ವಸ್ತುಗಳನ್ನು ಒದಗಿಸಲು ನೆರವಾಗಿದ್ದಾರೆ. ಅಲ್ಲದೆ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಶಕ್ತ್ಯಾನುಸಾರ ಧನ ಸಹಾಯ ಮಾಡುತ್ತಿದ್ದಾರೆ.



# ಬಸವನಬಾಗೇವಾಡಿ ತಾಲೂಕು ಆಸ್ಪತ್ರೆಗೆ ಕಾಯಕಲ್ಪದ ಗರಿ

ಗುರುರಾಜ ಕಣ್ಣೂರ

ಗುಣಮಟ್ಟ ಹಾಗೂ ಸೊಂಕು ರಹಿತ ಸೇವೆಗೆ ಮುಂದಾಗಿ, ಸಾರ್ವಜನಿಕರು ಹೊಗಳುವಂತಹ ಸಾಧನೆ ಮಾಡುವ ಮೂಲಕ ಪ್ರಥಮ ಬಾರಿಗೆ ಕೇಂದ್ರ ಸರ್ಕಾರದ ಕಾಯಕಲ್ಪ ಪ್ರಶಸ್ತಿಯ ಗರಿಗೆ ಪಾತ್ರವಾಗಿರುವ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕು ಸರ್ಕಾರಿ ಆಸ್ಪತ್ರೆಯು ನಿಜಕ್ಕೂ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿದೆ ಎನ್ನುವುದಕ್ಕೆ ತಾಜಾ ಉದಾಹರಣೆಯಾಗಿದೆ.

ವಿಜಯಪುರ ಜಿಲ್ಲೆಯಲ್ಲಿಯೇ, ತಾಲೂಕು ಆಸ್ಪತ್ರೆಯ ವಿಭಾಗದಲ್ಲಿ ಮೊದಲ ಕಾಯಕಲ್ಪ ಹೊಂದಿದ ಏಕೈಕ ತಾಲೂಕಾಸ್ಪತ್ರೆ ಎಂಬ ಹೆಗ್ಗಳಿಕೆಗೆ ಬಸವನಬಾಗೇವಾಡಿ ತಾಲೂಕು ಆಸ್ಪತ್ರೆ ಪಾತ್ರವಾಗಿದೆ. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ ನರೇಂದ್ರ ಮೋದಿ ಅವರ ಕನಸಿನ ಸ್ವಚ್ಛ ಭಾರತ ಅಭಿಯಾನದಡಿ ಕೊಡ ಮಾಡುವ ಈ ಪ್ರಶಸ್ತಿಯನ್ನು ಜಿಲ್ಲೆಯ 4 ತಾಲೂಕು ಆಸ್ಪತ್ರೆಗಳನ್ನು ಹಿಂದಕ್ಕೆ ಹಾಕಿ ತನ್ನದಾಗಿಸಿಕೊಂಡಿದೆ. ಅಲ್ಲದೆ ಈ ಆಸ್ಪತ್ರೆಯು ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆಯಡಿ ಆರು ತಿಂಗಳಲ್ಲಿ 200 ರೋಗಿಗಳನ್ನು ದಾಖಲು ಮಾಡಿಕೊಂಡು ಚಿಕಿತ್ಸೆಯನ್ನು ನೀಡುವ ಮೂಲಕ ಕೂಡ ದಾಖಲೆಯನ್ನು ಮಾಡಿದೆ.

ಪ್ರಶಸ್ತಿಗೆ ಪರಿಗಣಿಸುವ ಸಂದರ್ಭದಲ್ಲಿ ತ್ಯಾಜ್ಯಗಳ ವಿಲೇವಾರಿ, ಮರುಬಳಕೆ, ಒಳ ರೋಗಿಗಳ ವಾರ್ಡ್ ಸ್ವಚ್ಛತೆ, ಶೌಚಾಲಯ, ಪರಿಸರ, ರೋಗಿಗಳಿಗೆ ಕುಡಿಯುವ ನೀರು ಸರಬರಾಜು, ಸೊಳ್ಳೆ ಪರದೆ, ಸಿಬ್ಬಂದಿ ಲಭ್ಯತೆ ಸೇರಿದಂತೆ ಪ್ರಮುಖ ಅಂಶಗಳ ಆಧಾರದ ಮೇಲೆ 100 ಅಂಕಗಳನ್ನು ನಿಗದಿ ಪಡಿಸಲಾಗಿರುತ್ತದೆ. ಇದರಲ್ಲಿ ಈ ಆಸ್ಪತ್ರೆಯು 85 ಅಂಕ ಪಡೆದಿದೆ. "ಸ್ವಚ್ಛತೆಯೇ ಆರೋಗ್ಯ" ಎನ್ನುವ ಧ್ಯೇಯ ಹೊಂದಿರುವ ಈ ತಾಲೂಕಾಸ್ಪತ್ರೆಯು ವೈದ್ಯಕೀಯ ಸೇವೆಯ ಜತೆಗೆ ಸ್ವಚ್ಛತೆ, ಶುಚಿತ್ವಕ್ಕೆ ಹೆಚ್ಚು ಒತ್ತು ನೀಡುತ್ತಿದೆ. ಎಲ್ಲಿ ಸ್ವಚ್ಛತೆ, ಶಿಸ್ತು ಇರುತ್ತದೋ ಅಲ್ಲಿ ಉತ್ತಮ ಆರೋಗ್ಯ ಇರುತ್ತದೆ ಎನ್ನುವುದು ಇಲ್ಲಿನ ಸಿಬ್ಬಂದಿಗಳ ಅಭಿಮತ.

"ಸ್ವಚ್ಛತೆಯೇ ಆರೋಗ್ಯ" ಎನ್ನುವ ಧ್ಯೇಯ ಹೊಂದಿರುವ ಈ ತಾಲೂಕಾಸ್ಪತ್ರೆಯು ವೈದ್ಯಕೀಯ ಸೇವೆಯ ಜತೆಗೆ ಸ್ವಚ್ಛತೆ, ಶುಚಿತ್ವಕ್ಕೆ ಹೆಚ್ಚು ಒತ್ತು ನೀಡುತ್ತಿದೆ. ಎಲ್ಲಿ ಸ್ವಚ್ಛತೆ, ಶಿಸ್ತು ಇರುತ್ತದೋ ಅಲ್ಲಿ ಉತ್ತಮ ಆರೋಗ್ಯ ಇರುತ್ತದೆ ಎನ್ನುವುದು ಇಲ್ಲಿನ ಸಿಬ್ಬಂದಿಗಳ ಅಭಿಮತ.



ಆಸ್ಪತ್ರೆಯ ಆವರಣವನ್ನು ಪ್ರವೇಶಿಸಿದ ಕೂಡಲೇ ಕಣ್ಣು ಹಾಯಿಸಿದಲೆಲ್ಲಾ ಹಸಿರು ಲೋಕವೇ ನಿಮ್ಮ ಮುಂದೆ ಅನಾವರಣವಾಗುತ್ತದೆ. ಈ ಆಸ್ಪತ್ರೆಯಲ್ಲಿ 82 ಖಾಯಂ ಸಿಬ್ಬಂದಿಗಳಿದ್ದು, 40 ಸಿಬ್ಬಂದಿಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ಸ್ವಚ್ಛತೆ ಕಾಪಾಡಲು ನಿಯೋಜಿಸಲಾಗಿದೆ. ಅವರು ದಿನಕ್ಕೆ ಮೂರು ಬಾರಿ ವಾರ್ಡ್‌ಗಳನ್ನು, ಹೊರಾಂಗಣ ಪ್ರಾಂಗಣವನ್ನು, ಮತ್ತು ಆಸ್ಪತ್ರೆಯ ಸುತ್ತ ಮುತ್ತ ಸ್ವಚ್ಛತೆ ಕಾಪಾಡುತ್ತಾರೆ.

1957 ರಲ್ಲೇ 6 ಎಕರೆ ವಿಸ್ತಾರವಾದ ಪ್ರದೇಶದಲ್ಲಿ ಸ್ಥಾಪನೆಯಾಗಿರುವ ಈ ಆಸ್ಪತ್ರೆಗೆ ಒಟ್ಟು 100 ಹಾಸಿಗೆಗಳಿವೆ. ಎಲ್ಲ ವಿಭಾಗಗಳಲ್ಲೂ ಯಾವುದೇ ಖಾಸಗಿ ಹೈಟೆಕ್ ಆಸ್ಪತ್ರೆಗೆ ಕಡಿಮೆಯಿಲ್ಲದಂತೆ ಕಾರ್ಯನಿರ್ವಹಿಸುತ್ತಿದೆ. ತಾಲೂಕಿನ ವಿವಿಧ ಹಳ್ಳಿಗಳಿಂದ ನಿತ್ಯ ಆಗಮಿಸುವ ಐದನೂರಕ್ಕೂ ಅಧಿಕ ರೋಗಿಗಳ ಪಾಲಿಗೆ ಧನ್ವಂತರಿಯಂತೆ ಸೇವೆ ಒದಗಿಸುತ್ತಿರುವ ಜೊತೆಗೆ ವಾರ್ಡ್‌ನ ಸ್ವಚ್ಛತೆ ಕಾಪಾಡುವುದನ್ನು ಇಲ್ಲಿನ ಸಿಬ್ಬಂದಿಯವರು ಸವಾಲಾಗಿ ಸ್ವೀಕರಿಸಿದ್ದಾರೆ. ಇನ್ನೂ ಪ್ರತಿನಿತ್ಯ ಬಂದು ಹೋಗುವ ರೋಗಿಗಳಿಗೆ ಶುದ್ಧ ಕುಡಿಯುವ ನೀರು, ಹಾಸಿಗೆ, ಕೆಲವು ಬಡ ರೋಗಿಗಳಿಗೆ ಊಟದ ವ್ಯವಸ್ಥೆ, ಹೀಗೆ ಹತ್ತು ಹಲವು ಜನಪರ ಸೇವೆಗಳನ್ನು ನೀಡುತ್ತಿರುವ ಕಾರಣಗಳಿಂದ ಈ ಆಸ್ಪತ್ರೆ ಜನಸ್ನೇಹಿಯಾಗಿದೆ.

ಇಲ್ಲಿ ಒಂದು ರೋಗಿಗಳ ಸಹಾಯಕರಿಗೆ ವಿಶ್ರಾಂತಿ ಧಾಮ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. 2 ಡಯಾಲಿಸಸ್ ಯಂತ್ರಗಳನ್ನು ಹೊಂದಿದ ಸುಸಜ್ಜಿತ ವಿಭಾಗ, 1 ಯಂತ್ರ ಒಳಪಟ್ಟ ಮಕ್ಕಳ ತೀವ್ರ ನಿಗಾ ಘಟಕ, 1 ವಯಸ್ಕ ರೋಗಿಗಳ ತೀವ್ರ ನಿಗಾ ಘಟಕ, 1 ಸುಸಜ್ಜಿತ ಶಸ್ತ್ರ ಚಿಕಿತ್ಸಾ ಕೊಠಡಿ, ಎದೆ ಹಾಲುಣಿಸುವ ಸ್ಥಳ, ಮಕ್ಕಳ ಸಂತಾನ ಹರಣ ಚಿಕಿತ್ಸೆ ಕೊಠಡಿ, ತುರ್ತು ಚಿಕಿತ್ಸಾ ಘಟಕ, ಔಷಧಿಯ ಸಸ್ಯಗಳ ವನ, ಬಟ್ಟೆ ತೊಳೆಯುವ ಸ್ಥಳ, ರೋಗಿಗಳಿಗೆ ರಿಯಾಯತಿ ದರದಲ್ಲಿ ಕ್ಯಾಂಟೀನ, ನಂದಿನಿ ಬೂತ್, ಹಾಪ್‌ಕಾಮ್ಸ್ ಮಳಿಗೆ, ಹೊಂದಿರುವ, ಈ ತಾಲೂಕಾಸ್ಪತ್ರೆಗೆ ನಿತ್ಯವೂ 40 ಒಳರೋಗಿಗಳಾಗಿ ಬಂದರೆ 500 ಕ್ಕೂ ಹೆಚ್ಚು ಜನ ಹೊರ ರೋಗಿಗಳಾಗಿ ಬರುತ್ತಾರೆ.

ಇನ್ನೂ ಹೆಚ್ಚಿನ ಸ್ವಚ್ಛತೆಗೆ ಆದ್ಯತೆ ನೀಡುವ ಉದ್ದೇಶದಿಂದ ಇನ್ನೂ ಹೆಚ್ಚುವರಿ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ವೈದ್ಯಕೀಯ ಸೇವೆಯಲ್ಲಿ ಇನ್ನು ಗುಣಮಟ್ಟ ಕಾಪಾಡಲು ಹೆಚ್ಚುವರಿ ವೈದ್ಯರ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ. ಇದರಿಂದ ವೈದ್ಯರ ಕೊರತೆ ಕಡಿಮೆಯಾಗಲಿದೆ. ವೈದ್ಯಕೀಯ ಸೇವೆ ಜತೆಗೆ ಸ್ವಚ್ಛತೆಗೂ ಆದ್ಯತೆ ನೀಡಲಾಗುತ್ತಿದೆ. ಗುಣಮಟ್ಟ ಸೇವೆ ನೀಡಲು ಸಿಬ್ಬಂದಿ ಹಾಗೂ ಸಾರ್ವಜನಿಕರ ಪಾಲು ಹೆಚ್ಚಿನದಿದೆ. ನಿರಂತರವಾಗಿ ಸಿಬ್ಬಂದಿ ಹಾಗೂ ರೋಗಿಗಳಿಗೆ ಸ್ವಚ್ಛತೆ ಕುರಿತಾಗಿ ಶಿಕ್ಷಣ ಹಾಗೂ ತಿಳುವಳಿಕೆ ನೀಡಲಾಗಿತ್ತು ಎಂದು ತಾಲೂಕು ಆಡಳಿತ ವೈದ್ಯಾಧಿಕಾರಿ ಡಾ. ಎಸ್.ಎಲ್ ಲಕ್ಕಣ್ಣನವರು ಹೇಳುತ್ತಾರೆ.

ಈ ಪ್ರಶಸ್ತಿಯಿಂದ ನಮ್ಮ ಸಿಬ್ಬಂದಿ ವರ್ಗದವರ ಸಂತೋಷ ಹಿಮ್ಮಡಿಯಾಗಿದೆ. ಕೇವಲ ಪ್ರಶಸ್ತಿಗೆ ಅಪೇಕ್ಷೆ ಪಡದೇ ಬಡ ರೋಗಿಗಳ ಸೇವೆಯಲ್ಲಿ ನಮ್ಮೆಲ್ಲರ ಚಿತ್ತವಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ನಾಗರಬೆಟ್ಟ ಅವರು ಹೇಳುತ್ತಾರೆ. ಅಲ್ಲದೆ ಪ್ರಶಸ್ತಿ ಮೊತ್ತ 1 ಲಕ್ಷರೂಗಳನ್ನು ಪೂರ್ತಿಯಾಗಿ ಆಸ್ಪತ್ರೆಯ ಅಭಿವೃದ್ಧಿಗೆ ಬಳಸಿಕೊಳ್ಳಲಾಗುತ್ತಿದೆಯಂತೆ.





downloaded from: www.kpscvaani.com



# ಹಲವು ರೋಗಗಳಿಗೆ ರಾಮಬಾಣ ಕರಿಬೇವು

ಸಂಗಮೇಶ ಎಸ್. ಜಮಾದಿ



ನಮ್ಮ ಆಯುರ್ವೇದ ಇತಿಹಾಸದ ಸಾಂಪ್ರದಾಯಕ ಗಿಡ, ಮರಗಳು ಇವತ್ತಿನ ವೈದ್ಯ ವಿಜ್ಞಾನಲೋಕಕ್ಕೆ ಸವಾಲಾಗಿ ನಿಂತಿದೆ. ವೈದ್ಯರು ಗುಣಪಡಿಸಲಾಗದ ಅದೆಷ್ಟೋ ಖಾಯಿಲೆಗಳು, ಎಲೆ ಬೇರುಗಳಿಂದ ತಯಾರಿಸಿದ ಔಷಧದಿಂದ ವಾಸಿಯಾದಂತಹ ಉದಾಹರಣೆಗಳು ನಮ್ಮ ಮುಂದೆ ಇವೆ. ವೈದ್ಯ ಲೋಕವೇ ಆಚ್ಚರಿ ಪಡುವಂತಹ ಗಿಡ ಬೇರುಗಳು ಇಂದಿಗೂ ಇದ್ದು, ಸರಿಯಾದ ಕ್ರಮದಲ್ಲಿ ಅದರ ಉಪಯೋಗವನ್ನು ಪಡೆದುಕೊಂಡರೆ ಯಶಸ್ಸನ್ನು ಪಡೆಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಸಾಂಪ್ರದಾಯಕ ಔಷಧಿಗಳಾಗಿ ಸಸ್ಯಗಳ ಉಪಯುಕ್ತ ಬಳಕೆಯನ್ನು ನಮ್ಮ ಹಿರಿಯರು ಬಹಳ ಹಿಂದಿನಿಂದಲೂ ಬಳಕೆ ಮಾಡುವ ಮೂಲಕ ಎಷ್ಟೋ ರೋಗಗಳನ್ನು ಗುಣಪಡಿಸಿರುವುದಕ್ಕೆ ಉದಾಹರಣೆಯನ್ನು ಕಾಣುತ್ತೇವೆ.

ಹಿಂದಿನ ಕಾಲದಲ್ಲಿ ಮನೆಯ ಹಿತ್ತಲಿನಲ್ಲಿಯೇ ತರಕಾರಿ ಹಣ್ಣು ಹಂಪಲುಗಳ ಜೊತೆಗೆ ಔಷಧೀಯ ಸಸ್ಯಗಳನ್ನು ಕೂಡ ನಮ್ಮ ಹಿರಿಯ ಪೂಜ್ಯರು ಬೆಳೆಸುತ್ತಿದ್ದರು. ಇದರಿಂದ ಮನೆಯ ಔಷಧೋಪಚಾರದ ಸಮಸ್ಯೆಯೂ ಬಗೆಹರಿಯುತ್ತಿತ್ತು. ಅಂತಹ ಗಿಡಗಳಲ್ಲಿ ಒಂದು ಅಂದರೆ ಕರಿಬೇವು. ಇಂತಹ ಕರಿಬೇವಿನ ಮಾಹಿತಿಯ ಉಪಯೋಗ ಮತ್ತು ಅದರಿಂದ ನಮಗೆ ಸಿಗುವ ಉಪಯುಕ್ತ ಮಾಹಿತಿ ವಿವರಿಸಲು ಇಲ್ಲಿ ಸಣ್ಣ ಪ್ರಯತ್ನ ಮಾಡಲಾಗಿದೆ. ಸುಮಾರು 5 ಅಡಿ ಇಂದ 15 ಅಡಿಯವರೆಗೆ ಬೆಳೆಯುವ ಈ ಗಿಡದ ಒಂದೊಂದು ಎಲೆಯಲ್ಲೂ ಸುಮಾರು 12–18 ಕಿರು ಎಲೆಗಳಿರುತ್ತವೆ. ಪ್ರತಿ ಚಿಗುರೆಲೆಯು 2–4 ಸೆಂಮೀ ಉದ್ದ ಮತ್ತು 1–2 ಸೆಂಮೀ ಅಗಲವಾಗಿರುತ್ತದೆ. ಇವುಗಳು ಅತೀ ಸುವಾಸನೆ ಭರಿತವಾಗಿರುತ್ತದೆ.

ಇದರ ಹೂವುಗಳು ಚಿಕ್ಕದಾಗಿದ್ದು, ಬಿಳಿ ಬಣ್ಣವನ್ನು ಹೊಂದಿರುತ್ತದೆ. ಮಸಾಲೆ ಪದಾರ್ಥವನ್ನು ತಯಾರಿಸಲು ಬಳಸುವ ಎಲೆ ಎಂದೇ ಕರಿಬೇವು ಪ್ರಸಿದ್ಧವಾಗಿದೆ. ಅಲ್ಲದೆ ಅಡುಗೆ ತಯಾರಿಸುವ ಬಹುಪಾಲು ಎಲ್ಲಾ ಪದಾರ್ಥಗಳಲ್ಲಿ ಇದನ್ನು ಬಳಸಲಾಗುತ್ತದೆ. ದಕ್ಷಿಣ ಭಾರತದಲ್ಲಿ ಇದು ಮಸಾಲೆ ಪದಾರ್ಥಗಳಲ್ಲಿ ಬಳಸಲಾಗುವ ಅವಿಭಾಜ್ಯ ಘಟಕವಾಗಿದೆ. ಈ ಭಾಗದಲ್ಲಿ ಕರಿಬೇವಿನ ಎಲೆಗಳಿಲ್ಲದೇ ಮಸಾಲೆ ಪದಾರ್ಥವು ರುಚಿಹೀನ ಎಂದು ಭಾವಿಸಲಾಗುತ್ತದೆ. ಕರಿಬೇವಿನ ಎಲೆಯು ಕಹಿಯಾದ ಬೇವಿನ ಮರದ ಎಲೆಗಳ ಹಾಗೆ ಇರುವುದರಿಂದ ಕನ್ನಡದಲ್ಲಿ ಇದನ್ನು 'ಕರಿ ಬೇವು' ಎಂದು ಕರೆಯಲಾಯಿತು. ಈ ಗಿಡವು ಹಲವಾರು ರೀತಿಯ ಕಾಯಿಲೆಗಳನ್ನು ತಡೆಗಟ್ಟುವ ಸಾಮರ್ಥ್ಯವನ್ನು ಹೊಂದಿದೆ. ಒಗ್ಗರಣೆ ಎಂದ ಕೂಡಲೇ ನಮಗೆ ನೆನಪಾಗುವುದು ಕರಿಬೇವು. ಕರಿಬೇವು ಇಲ್ಲದ ಅಡಿಗೆ, ಊಟ ಎಂದಿಗೂ ಪೂರ್ಣವಾಗುವುದಿಲ್ಲ. ಆದರೆ ಕೆಲವರಿಗೆ ಕರಿಬೇವು ಎಂದ ತಕ್ಷಣ ಮೂಗು ಮುರಿಯುತ್ತಾರೆ. ಆದರೆ ಇದು ಅಡುಗೆಗೆ ಮಾತ್ರವಲ್ಲ ನಮ್ಮ ದೇಹದ ಆರೋಗ್ಯವನ್ನು ಕಾಪಾಡುತ್ತದೆ ಎಂಬುವುದರಲ್ಲಿ ಎರಡು ಮಾತಿಲ್ಲಾ.

**ಕರಿಬೇವಿನ ಪೌಷ್ಟಿಕಾಂಶ:**

ಕರಿಬೇವಿನಲ್ಲಿ ಪೌಷ್ಟಿಕಾಂಶ ಅಂಶಗಳು ಬಹಳಷ್ಟು ಇವೆ. ಕರಿಬೇವಿನ ಎಲೆಯಲ್ಲಿ ತೇವಾಂಶ 66.3%, ಪ್ರೋಟೀನು 6.1%, ಕೊಬ್ಬು 1.0%. ಸಕ್ಕರೆ–ಪಿಷ್ಟದ ಅಂಶ 16.0%, ನಾರಿನ ಅಂಶ 6.4%, ಲವಣಾಂಶ 4.2% ಹಾಗೂ ಪ್ರತಿ 100 ಗ್ರಾಂ. ಎಲೆಗಳಲ್ಲಿ 810 ಮಿಗ್ರಾಂ ಕ್ಯಾಲ್ಸಿಯಂ, 600 ಮಿಗ್ರಾಂ ರಂಜಕ 3.1 ಮಿಗ್ರಾಂ ಕಬ್ಬಿಣ, 10,500 ಐ. ಯು ಕ್ಯಾರೋಟೀನ್ (ಎ ಜೀವಾತು ರೂಪದಲ್ಲಿ), 4 ಮಿಗ್ರಾಂ, ಸಿ ಜೀವಾತು. ಇವಲ್ಲದೆ ಹಲವಾರು ಬಗೆಯ ಅಮೈನೋ ಆಮ್ಲ ಇದೆ.

ಮಸಾಲೆ ಪದಾರ್ಥವನ್ನು ತಯಾರಿಸಲು ಬಳಸುವ ಎಲೆ ಎಂದೇ ಕರಿಬೇವು ಪ್ರಸಿದ್ಧವಾಗಿದೆ. ಅಲ್ಲದೆ ಅಡುಗೆ ತಯಾರಿಸುವ ಬಹುಪಾಲು ಎಲ್ಲಾ ಪದಾರ್ಥಗಳಲ್ಲಿ ಇದನ್ನು ಬಳಸಲಾಗುತ್ತದೆ. ದಕ್ಷಿಣ ಭಾರತದಲ್ಲಿ ಇದು ಮಸಾಲೆ ಪದಾರ್ಥಗಳಲ್ಲಿ ಬಳಸಲಾಗುವ ಅವಿಭಾಜ್ಯ ಘಟಕವಾಗಿದೆ. ಈ ಭಾಗದಲ್ಲಿ ಕರಿಬೇವಿನ ಎಲೆಗಳಿಲ್ಲದೇ ಮಸಾಲೆ ಪದಾರ್ಥವು ರುಚಿಹೀನ ಎಂದು ಭಾವಿಸಲಾಗುತ್ತದೆ.



**ದೇಹದ ಆರೋಗ್ಯ ಕಾಪಾಡುವ ಕರಿಬೇವು:**

ಕರಿಬೇವು ಎಲೆಗಳನ್ನು ಬಳಸುವುದರಿಂದ ನಮ್ಮ ದೇಹದ ಶ್ವಾಸಕೋಶದ ಸಮಸ್ಯೆಗಳು ಪರಿಹಾರ ಆಗುವುದರೊಂದಿಗೆ, ಜೀರ್ಣಕ್ರಿಯೆಗೂ ಸಹಾಯವಾಗುತ್ತದೆ. ಕರಿಬೇವಿನ ಸೊಪ್ಪಿನಲ್ಲಿ ವಾಯುಕಾರಕವನ್ನು ತೆಗೆದುಹಾಕುವ ಅಂಶ ಇರುವುದರಿಂದ ಜೀರ್ಣಕ್ರಿಯೆಯನ್ನು ಹೆಚ್ಚಿಸಿ, ಅನಗತ್ಯ ವಿಷ ಪದಾರ್ಥವನ್ನು ದೇಹದಿಂದ ಹೊರ ಹಾಕಲು ಸಹಾಯ ಮಾಡುತ್ತದೆ. ದೇಹದಲ್ಲಿರುವ ಪಿತ್ತದ ಅಂಶವನ್ನು ತೆಗೆದು ಹಾಕುವ ಮೂಲಕ ಪಚನ ಕ್ರಿಯೆಯು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಾಹಣೆ ಮಾಡಲು ಅನುಕೂಲ ಮಾಡಿ ಕೊಡುತ್ತದೆ. ಹಾಗೂ ಅತಿಸಾರದ ಲಕ್ಷಣಗಳನ್ನು ನಿವಾರಿಸುತ್ತದೆ.

ಕರಿಬೇವಿನಲ್ಲಿ ಕಾರ್ಬಜೋಲ್ ಅಲ್ಕಾಲೋಯ್ಡ್ ಅಂಶವಿದ್ದು, ಇದು ಅತಿಸಾರಕ್ಕೆ ಉತ್ತಮ ಮದ್ದಾಗಿದೆ. ಅಲ್ಲದೇ ಕರಿಬೇವು ಕೊಲೆಸ್ಟ್ರಾಲ್ ಕಡಿಮೆ ಮಾಡುವುದರೊಂದಿಗೆ ಚರ್ಮದ ಕಾಂತಿಗೂ ಇದು ಸಹಾಯಕಾರಿಯಾಗಿದೆ. ಅಲ್ಲದೆ ಹೊಟ್ಟೆ ಬೊಜ್ಜು ಸಹ ಕರಗಿಸಲು ಇದು ಅಮೂಲ್ಯವಾದ ಮದ್ದು. ಹಾಗೂ ಮನುಷ್ಯನ ಇನ್ನಿತರ ರೋಗಗಳಾದ ಮಧುಮೇಹ ನಿವಾರಣೆಗೂ ಇದು ರಾಮಬಾಣವಾಗಿದೆ. ಇದರಲ್ಲಿರುವ ಆಂಟಿ ಆಕ್ಸಿಡೆಂಟ್ ಪ್ರಮಾಣ ನಮ್ಮ ದೇಹದಲ್ಲಿರುವ ಸಕ್ಕರೆ ಅಂಶವನ್ನು ನಿಯಂತ್ರಿಸುವ ಮೂಲಕ ಮಧುಮೇಹವನ್ನು ನಿಯಂತ್ರಣದಲ್ಲಿರಿಸುತ್ತದೆ ಎಂದು ನಮ್ಮ ಹಿರಿಯರು ಹೇಳುತ್ತಾರೆ. ಕರಿಬೇವಿನಲ್ಲಿರುವ ಫೈಬರ್, ರಕ್ತದಿಂದ ಸಕ್ಕರೆಯ ಮಟ್ಟವನ್ನು ಕಡಿಮೆಗೊಳಿಸುತ್ತದೆ ಮತ್ತು ರಕ್ತದಲ್ಲಿ ಇನ್ಸುಲಿನ್ ಅನ್ನು ಹೆಚ್ಚಿಸುತ್ತದೆ. ಕರಿಬೇವಿನ ಎಲೆ ತೂಕ ನಷ್ಟಕ್ಕೆ ಸಹಾಯ ಮಾಡುತ್ತದೆ. ಆದ್ದರಿಂದ ಮಧುಮೇಹ ಮತ್ತು ತೂಕ ಹೆಚ್ಚಿರುವ ಜನರು ತಪ್ಪದೆ ಕರಿಬೇವಿನ ಎಲೆ ತಿನ್ನುವುದನ್ನು ರೂಢಿ ಮಾಡಿಕೊಳ್ಳುವುದು ಉತ್ತಮ.





downloaded from: www.kpscvaani.com

ಹೆಚ್ಚು ಆಲ್ಕೋಹಾಲ್ ಸೇವಿಸುವವರ ಆಹಾರದಲ್ಲಿ ಕರಿಬೇವನ್ನು ಸೇರಿಸುವುದರಿಂದ ಲಿವರ್ ಸಂಬಂಧಿತ ಕಾಯಿಲೆಗಳಿಂದ ರಕ್ಷಿಸುತ್ತದೆ ಎಂದು ಅಧ್ಯಯನವೊಂದು ತಿಳಿಸಿದೆ. ಈ ಎಲೆಗಳ ಗುಣಲಕ್ಷಣಗಳು ಸಕ್ಕರೆ ಕಾಯಿಲೆ ನಿರೋಧಕವಾಗಿ, ಆಂಟಿ ಆಕ್ಸಿಡೆಂಟ್ ಆಗಿ, ಸೂಕ್ಷ್ಮಾಣು ನಿರೋಧಕವಾಗಿ, ಊತ ನಿರೋಧಕವಾಗಿ, ಹೆಪಟೋಪ್ರೊಟೆಕ್ಟಿವ್ ಆಗಿ, ಆಂಟಿ ಹೈಪರ್‌ಕೊಲೆಸ್ಟೆರೋಲೆಮಿಕ್ ಆಗಿ ಹಾಗೂ ಇತರ ರೋಗ ಲಕ್ಷಣಗಳಲ್ಲಿ ಅತ್ಯಂತ ಮಾದರಿ ಉಪಯೋಗಕಾರಿಯಾಗಿದೆ. ಇದಲ್ಲದೆ ಭಾರತೀಯರಲ್ಲಿ ಗಣನೀಯ ಪ್ರಮಾಣದಲ್ಲಿ ಕಂಡು ಬರುತ್ತಿರುವ ರಕ್ತಹೀನತೆ ಬಳಳಿಕೆಯನ್ನು ತಡೆಗಟ್ಟಲು ಇದು ಅವಶ್ಯಕವಾಗಿದೆ. ಹಾಗಾಗಿ ಇದನ್ನು ಪ್ರತಿಯೊಬ್ಬರು ಉಪಯೋಗಿಸುವ ಮೂಲಕ ರಕ್ತಹೀನತೆ ಹೋಗಲಾಡಿಸಲು ಈ ದಿಸೆಯಲ್ಲಿ ಪ್ರಯತ್ನ ಮಾಡಬಹುದು.

ಕರಿಬೇವಿನಲ್ಲಿರುವ ಫೋಲಿಕ್ ಆಮ್ಲ ಮತ್ತು ಅಧಿಕವಾದ ಕಬ್ಬಿಣದ ಅಂಶ ರಕ್ತಹೀನತೆಯನ್ನು ನಿವಾರಿಸಿ ರಕ್ತದ ಹರಿವನ್ನು ಉತ್ತಮಗೊಳಿಸುತ್ತದೆ. ಕರಿಬೇವಿನ ಎಲೆಯ ರಸವನ್ನು ತೆಗೆದು ಶುದ್ಧವಾದ ಬೆಲ್ಲದಲ್ಲಿ ಸೇರಿಸಿ ಖಾಲಿ ಹೊಟ್ಟೆಯಲ್ಲಿ ಮುಂಜಾನೆ ಕುಡಿದರೆ ರಕ್ತಹೀನತೆ ಇಂದ ಬಳಲುವವರು ರಕ್ತಹೀನತೆಯಿಂದ ಮುಕ್ತರಾಗುತ್ತಾರೆ. ಈ ಎಲೆಗಳನ್ನು ಕುದಿಸಿ ಕಷಾಯ ಮಾಡಿ ಕುಡಿಯುವುದರಿಂದ ಮೂತ್ರಕ್ಕೆ ಸಂಬಂಧಿಸಿದ ಕಾಯಿಲೆಗಳು ಸಹ ಗುಣಮುಖವಾಗುತ್ತದೆ. ರಕ್ತದಿಂದ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡುವುದರಲ್ಲಿ ಇದು ಮಹತ್ವದ ಪಾತ್ರ ವಹಿಸುತ್ತದೆ ಎಂದು ತಿಳಿದರೆ ನಿಮಗೆ ಆಶ್ಚರ್ಯವಾಗಬಹುದು. ಇದು ರಕ್ತದಲ್ಲಿನ ಉತ್ತಮ ಕೊಲೆಸ್ಟ್ರಾಲ್ ಪ್ರಮಾಣವನ್ನು ಹೆಚ್ಚಿಸುವ ಮೂಲಕ ಹೃದಯ ರಕ್ತನಾಳದ ಕಾಯಿಲೆ ಮತ್ತು ಎಥೆರೋಕ್ಲಾರೋಸಿಸ್‌ನಿಂದ ನಮ್ಮನ್ನು ರಕ್ಷಿಸುತ್ತದೆ. ಅಲ್ಲದೆ ಇನ್ನಿತರ ರೋಗಗಳಾದ ನೆಗಡಿ, ಕೆಮ್ಮು, ಅಸ್ತಮಾ ಹಾಗೂ ಹೃದಯಕ್ಕೆ ಸಂಬಂಧಪಟ್ಟ ರೋಗಗಳನ್ನು ತಡೆಗಟ್ಟಬಹುದಾಗಿದೆ.



**ಕರಿಬೇವಿನಲ್ಲಿರುವ ಫೋಲಿಕ್ ಆಮ್ಲ ಮತ್ತು ಅಧಿಕವಾದ ಕಬ್ಬಿಣದ ಅಂಶ ರಕ್ತಹೀನತೆಯನ್ನು ನಿವಾರಿಸಿ ರಕ್ತದ ಹರಿವನ್ನು ಉತ್ತಮಗೊಳಿಸುತ್ತದೆ. ಕರಿಬೇವಿನ ಎಲೆಯ ರಸವನ್ನು ತೆಗೆದು ಶುದ್ಧವಾದ ಬೆಲ್ಲದಲ್ಲಿ ಸೇರಿಸಿ ಖಾಲಿ ಹೊಟ್ಟೆಯಲ್ಲಿ ಮುಂಜಾನೆ ಕುಡಿದರೆ ರಕ್ತಹೀನತೆ ಇಂದ ಬಳಲುವವರು ರಕ್ತಹೀನತೆಯಿಂದ ಮುಕ್ತರಾಗುತ್ತಾರೆ.**

**ಕೂದಲು ಬೆಳವಣಿಗೆಯನ್ನು ಹೆಚ್ಚಿಸುತ್ತದೆ:**

ದೇಹದಲ್ಲಿನ ಪೋಷಕಾಂಶಗಳ ಕೊರತೆಯಿಂದ ತಲೆ ಕೂದಲು ಬಿಳಿಯಾಗುವುದನ್ನು ಇಂದಿನ ದಿನಗಳಲ್ಲಿ ಸಾಮಾನ್ಯವಾಗಿದೆ. ಇದು ಬಿಳಿ ಕೂದಲು ಆಗುವುದನ್ನು ತಡೆಗಟ್ಟುವುದರೊಂದಿಗೆ ಕೂದಲು ಬೆಳವಣಿಗೆಗೆ ಸಹಾಯಕಾರಿಯಾಗಿದೆ. ಕೂದಲು ಆರೋಗ್ಯ ಪೂರ್ಣವಾಗಿ ಮತ್ತು ಸೊಂಪಾಗಿ ಬೆಳೆಯುವಲ್ಲಿ ಕರಿಬೇವಿನ ಎಲೆಗಳು ಸಹಾಯಕಾರಿ ಎಂಬುದಾಗಿಯೂ ಕಂಡು ಬಂದಿದೆ. ಇವುಗಳು ಕಬ್ಬಿಣದ ಅಂಶವನ್ನು ಸಹ ಒಳಗೊಂಡಿದೆ.


ಕರಿಬೇವು ನಮ್ಮ ಕೂದಲಿನ ಸ್ವಾಸ್ಥ್ಯದಲ್ಲಿ ಕಮಾಲನ್ನೇ ಮಾಡುತ್ತದೆ. ಅಂತೆಯೇ ತ್ವಚೆಯ ಸಂರಕ್ಷಣೆಗೂ ಇದನ್ನು ಬಳಸಬಹುದಾಗಿದೆ. ಇದು ಹೆಚ್ಚು ಪ್ರಮಾಣದ ನ್ಯೂಟ್ರಿನ್ ಮತ್ತು ವಿಟಮಿನ್‌ಗಳನ್ನು ತನ್ನಲ್ಲಿ ಒಳಗೊಂಡಿದ್ದು, ಕೂದಲಿನ ಬೆಳವಣಿಗೆಗೆ ಸಹಾಯ ಮಾಡುತ್ತದೆ, ಮತ್ತು ಹಾನಿಗೊಳಗಾದ ಕೂದಲಿಗೆ ಮರುಜೀವ ನೀಡುತ್ತದೆ. ಕರಿಬೇವಿನಲ್ಲಿ ಉತ್ಕರ್ಷಣ ನಿರೋಧಿ ಅಂಶಗಳಿದ್ದು ಇದು ಅಮಿನೋ ಆಸಿಡ್ ಅನ್ನು ಒಳಗೊಂಡಿದೆ. ಇದು ಕೂದಲು ಉದುರುವುದನ್ನು ತಡೆಯುತ್ತದೆ ಎಂದು ಹೇಳಬಹುದು.

ಒಟ್ಟಿನಲ್ಲಿ ಕರಿಬೇವಿನ ಗಿಡದ ಪ್ರತಿಯೊಂದು ಭಾಗವೂ ಔಷಧೀಯ ಗುಣಗಳನ್ನು ಹೊಂದಿದೆ. ಗದ್ದೆ ಎನ್ನದೆ ಎಲ್ಲಾ ಕಡೆ ಬೆಳೆಯುವ ಈ ಗಿಡಕ್ಕೆ ನಾವು ಯಾರು ಹೆಚ್ಚು ಗಮನ ಹರಿಸುವುದಿಲ್ಲ. ಹಿತ್ತಲಿನ ಮದ್ದು ನಮ್ಮ ಅರಿವಿಗೆ ಬರುವುದಿಲ್ಲ. ನಾವು ದೂರದ ನಗರಗಳಿಗೆ ಹೋಗಿ ಬೇಕಾದಷ್ಟು ಹಣ ಖರ್ಚು ಮಾಡಿ ಬರುತ್ತೇವೆ. ಎಷ್ಟೆಲ್ಲಾ ಹಣ ಖರ್ಚು ಮಾಡಿದರು ಸಹ ನಮ್ಮ ರೋಗ ಬೇಗ ವಾಸಿ ಆಗುವುದಿಲ್ಲ. ಇಂತಹ ಹತ್ತು ಹಲವಾರು ಉದಾಹರಣೆಗಳು ನಮ್ಮ ಕಣ್ಣ ಮುಂದೆ ದಿನಾಲೂ ನಡೆಯುತ್ತಿರುತ್ತವೆ. ಆದರೆ ಪ್ರಕೃತಿಯಿಂದ ಸಿಗುವ ಯಾವುದೇ ರೀತಿಯ ಸಸ್ಯಗಳು ಅಥವಾ ಇನ್ನಾವುದೇ ಔಷಧೀಯ ಸಸ್ಯಗಳಿಂದ ಯಾವುದೇ ರೀತಿಯ ಹಾನಿಕಾರಕ ಅಂಶಗಳು ಖಂಡಿತಾವಾಗಿಯೂ ಇರುವುದಿಲ್ಲ. ಆದ್ದರಿಂದ ಇಂತಹ ಸಾವಿರಾರು ಗಿಡಮೂಲಿಕೆ ಸಸ್ಯಗಳು ನಮ್ಮಲ್ಲೇ ಇದ್ದು, ಜನರು ಅವುಗಳ ಬಗ್ಗೆ ಅರಿತು ಸೂಕ್ತ ತಿಳುವಳಿಕೆ ಪಡೆಯುವ ಮೂಲಕ ಆಯುರ್ವೇದ ವೈದ್ಯರ ಮಾರ್ಗದರ್ಶನ ಪಡೆದು ನಮ್ಮ ಸಾಂಪ್ರದಾಯಕ ಪದ್ಧತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಜಾಗೃತರಾಗಿ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಸೂಕ್ತ.



# ಮೈ-ಮನ ಪುಳಕಗೊಳಿಸುವ ಕುಮಾರಪರ್ವತ ಚಾರಣ

ಬಲ್ಲೇನಹಳ್ಳಿ ಮಂಜುನಾಥ್





downloaded from: www.kpscvaani.com





ಅದೊಂದು ಅವಿಸ್ಮರಣೀಯ ಅನುಭವ. ಇನ್ನೆಂದು ಈ ಚಾರಣ ಬೇಡವೆಂದು ಶಪಿಸಿಕೊಂಡು ಮೇಲತ್ತಿ ಹೋದವರು ಜನ್ಮ ಸಾರ್ಥಕವಾಯಿತೆಂಬ ಮನೋಭಾವ ಕಾಡದಿರದು. ಅಂತಹ ಒಂದು ಚಾರಣವೇ ಕುಮಾರ ಪರ್ವತದ್ದು.

ಎತ್ತ ನೋಡಿದರತ್ತ ಹಸಿರು, ಕಣ್ಣಾಯಿಸಿದಷ್ಟೂ ದೂರ ಶುಭ್ರ ನೀಲಾಕಾಶ. ಡಿಕ್ಕಿ ಹೊಡೆದು ಬಿಡಬಹುದೇನೋ ಎಂಬಂತೆ ತೇಲಿಬರುವ ಮೋಡಗಳ ಸಾಲು, ಸಾಲು, ಎತ್ತಿಕೊಂಡು ಹೋಗುತ್ತೇನೆಂದು ಭಯ ಹುಟ್ಟಿಸುತ್ತಾ ಬರುವ ಸುಳಿಗಾಳಿ ನಿಮ್ಮನ್ನು ಯಾವುದೋ ಲೋಕಕ್ಕೆ ಕೊಂಡೊಯ್ಯಂತೆ ಭಾಸವಾಗುತ್ತದೆ. ಇಷ್ಟು ಎತ್ತರಕ್ಕೆ ಬಂದಿದ್ದೇವೆಯೇ? ಎಂಬ ಕುತೂಹಲ ಆ ಕ್ಷಣ ಮನದಲ್ಲಿ ಹುಟ್ಟಿಕೊಳ್ಳದೇ ಇರದು.

ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋದವರೆಲ್ಲರೂ ದೇವಸ್ಥಾನದ ಹಿಂಬದಿ ಕಾಣುವ ಅಚ್ಚ ಹಸಿರಹಾಸು ಹೊದ್ದ ಪರ್ವತವನ್ನು ನೋಡದೆ ಇರಲಾರರು. ಸುಬ್ರಹ್ಮಣ್ಯನೇ ಈ ಬೆಟ್ಟದಿಂದ ಇಳಿದು ಬಂದಿರುವನೇನೋ ಎಂಬ ಭಕ್ತಿಭಾವ ಮೂಡುತ್ತದೆ. ಹಾಗೆಯೇ ಸಹಜವಾಗಿ ಈ ಪರ್ವತವನ್ನು ಒಮ್ಮೆ ಹತ್ತಿ ಬರಬೇಕೆಂಬ ಆದಮ್ಯ ಆಸೆಯು ಆಗದಿರದು. ಕುಮಾರಪರ್ವತವನ್ನು ಸುಬ್ರಹ್ಮಣ್ಯದಿಂದ ಏರಲು ಹೊರಟರೆ ನಿಮಗೆ ಲೆಂಕಿರಿಗುಡ್ಡ, ಗಿರಿಗದ್ದೆ, ಭತ್ತದ ರಾಶಿ, ಅರಣ್ಯ ಇಲಾಖೆಯ ಚೆಕ್‌ಪೋಸ್ಟ್, ಕಲ್ಲುಚಪ್ಪರ, ಶೇಷಪರ್ವತ, ಸಿಗುತ್ತದೆ. ಮಾರಿಗುಡಿ ಆಳದ ರುದ್ರ ರಮಣೀಯ ದೃಶ್ಯವನ್ನೂ ಕಣ್ತುಂಬಿಸಿಕೊಳ್ಳಬಹುದಲ್ಲದೆ, ಸೂರ್ಯಾಸ್ತ, ಸುರ್ಯೋದಯವನ್ನು ಕಣ್ತುಂಬಿಸಿಕೊಳ್ಳಬಹುದು.

'ಕುಮಾರಪರ್ವತ' ಕಾಡು–ಬೆಟ್ಟ–ಗುಡ್ಡಗಳ ಸಂಗಮ. ಪುಷ್ಪಗಿರಿಯ ತಪ್ಪಲು, ಕುಮಾರಧಾರ ನದಿ ಸೃಷ್ಟಿಗೆ ಕಾರಣವಾದ ಪರ್ವತವಿದು. ಸುಬ್ರಹ್ಮಣ್ಯದಿಂದ ಈ ಪರ್ವತದ ತುದಿಗೆ ಬರೋಬರಿ 13 ಕಿ.ಮಿ. ದೂರವಾಗುತ್ತದೆ. ಕನಿಷ್ಠವೆಂದರೂ ಈ ಪರ್ವತ ಹುತ್ತ ತುದಿ ತಲುಪಿ ಇಳಿದು ಬರಲು ಬರೋಬರಿ ಒಂದು ದಿನ ಬೇಕೇ ಬೇಕು. ಕಡಿದಾದ ಬೆಟ್ಟ ಗುಡ್ಡ, ರಕ್ತಕ್ಕಾಗಿ ಬೇಟೆಯಾಡಲು ಸಂಚು ಹೂಡಿರುವ ಜಿಗಣೆಗಳು, ಆಯ ತಪ್ಪಿದರೆ ಭಕ್ಷಿಸಲು ಕಾದಿರುವ ಕಮರಿ ಕಂದಕಗಳು ನಿಮ್ಮನ್ನು ಚಾರಣ ಆರಂಭಿಸುತ್ತಿದ್ದಂತೆ ಸ್ವಾಗತಿಸುತ್ತದೆ. ಹಾಗಾಗಿ ಪರ್ವತ ಏರುವುದು ಹರಟೆ ಹೊಡೆದಷ್ಟು ಸುಲಭವಲ್ಲ.

ಸುಬ್ರಹ್ಮಣ್ಯದಿಂದ ಹೊರಟ ನಿಮಗೆ 3 ಕಿಮೀಗೆ ಭೀಮನಕಲ್ಲು ಸಿಗುತ್ತದೆ. 5 ಕಿ.ಮೀಗೆ ಗಿರಿಗದ್ದೆ ಎದುರಾದರೆ, 8 ಕಿ.ಮೀಗೆ ಕಲ್ಲು ಮಂಟಪ ಕಾಣಿಸಿಕೊಳ್ಳುತ್ತದೆ. 10 ಕಿ.ಮೀನಲ್ಲಿ ಭತ್ತದರಾಶಿ ಎಂಬ ಬೆಟ್ಟಗಳ ಸಮೂಹವಿದ್ದು, ಇದನ್ನು ದಾಟಿದರೆ ಶೇಷ ಪರ್ವತ ಎದುರಾಗುತ್ತದೆ. ಆದನ್ನು ದಾಟಿ ಮುಂದೆ ಹೋದರೆ ಎದುರಾಗುವುದೇ ಕುಮಾರಪರ್ವತ. ಇದು ಸಮುದ್ರ ಮಟ್ಟದಿಂದ 5615 ಅಡಿ ಎತ್ತರವಿದೆ.



5 ಕಿ.ಮೀ ಪ್ರಯಾಣ ಮುಗಿದ ನಂತರವೇ ನಿಜವಾದ ಚಾರಣ ಆರಂಭವಾಗುವುದು. ಕಡಿದಾದ ಬೆಟ್ಟ ಗುಡ್ಡ ನಿಮ್ಮನ್ನು ಹೈರಾಣಾಗಿಸದೆ ಬಿಡದು. ಕಾಲು ಮುಂದಕ್ಕೆ ಕೀಳಲಾರವು, ದೇಹ ಚಲಿಸಲಾರದು, ಸಾಕಪ್ಪ ಸಾಕು ಈ ಚಾರಣವೂ ಬೇಡ ಇಳಿದುಬಿಡೋಣ ಎನ್ನಿಸಿಬಿಡುತ್ತದೆ. ಪ್ರಯಾಣ ಮಾಡುವ ಕಾಲುದಾರಿಯು ಹಾವು ಹರಿದಂತಿದ್ದು, ಎಚ್ಚರಿಕೆಯ ನಡಿಗೆ ಆಗತ್ಯ. ಶರೀರ ಸಮತೋಲನ ತಪ್ಪದಂತೆ ನಡೆಯಬೇಕು. ಭತ್ತದರಾಶಿ ಮತ್ತು ಶೇಷ ಪರ್ವತದ ಬಳಿ ಮೋಡ ಮೈಮೇಲೆ ಹಾದು ಹೋದ ಅನುಭವ ಆಗುತ್ತದೆ. ಆಳದ ಕಂದಕಗಳ, ಮುಗಿಲೆತ್ತರದ ಕಪ್ಪುಬಂಡೆಗಳು ಭಯ ಹುಟ್ಟಿಸದೆ ಇರದು. ಆದರೆ ಹಾರಿ ಬರುವ ಮೋಡ, ಸುಯ್ಯೆಂದು ಬಂದು ಹೋಗುವ ತುಂತುರು ಮಳೆ ಭಯವನ್ನು ಮರೆಸಿ ಚೇತೋಹಾರಿ ಅನುಭವ ನೀಡುತ್ತದೆ. ಕುಮಾರ ಪರ್ವತದ ಎತ್ತರೆತ್ತರಕ್ಕೆ ನಡೆದಂತೆ ಸಾಗುವ ದಾರಿ ಕಿರಿದಾಗುತ್ತಾ ಹೋಗುತ್ತದೆ.



ತಂತಿಯ ಮೇಲೆ ನಡೆದಂತೆ ಪ್ರಯಾಣ ಅತ್ತ ಧರಿ, ಇತ್ತ ಪುಲಿ ಎಂಬ ಸ್ಥಿತಿ... ಈ ಸವಾಲನ್ನು ನೀವು ಗೆದ್ದಿರೆಂದರೆ ಕುಮಾರಪರ್ವತದ ಚಾರಣದ ಕನಸು ನನಸಾದಂತೆಯೇ.

ಸುಬ್ರಹ್ಮಣ್ಯದಿಂದ 1300 ಮೀಟರ್ ಎತ್ತರದ 13 ಕಿ.ಮೀ ದೂರದಲ್ಲಿರುವ ಪರ್ವತದ ಶಿಖರಕ್ಕೆ 1 ದಿನಕ್ಕೆ ಹೋಗಿ ಬರುವುದು ತುಸು ಕಷ್ಟ. ಆದ್ದರಿಂದ ಆಹಾರ ಪಾನೀಯ, ಹೊದೆಯಲು ವಸ್ತ್ರ ಬೇಕೇ–ಬೇಕು. ಅರಣ್ಯ ಇಲಾಖೆಯ ಅನುಮತಿ ಪಡೆದೇ ಪ್ರಯಾಣ ಆರಂಭಿಸಬೇಕು. ಅದಕ್ಕಾಗಿ ಮೊದಲೇ ನೊಂದಣಿ ಮಾಡಿಸಬೇಕು. ಗುಂಪಾಗಿ ಹೋಗುವುದು ಒಳ್ಳೆಯದು. ಬೆಳದಿಂಗಳು ಇರುವ ವೇಳೆ ಹೋದರೆ ಅರಣ್ಯ ಇಲಾಖೆಯವರ ಅನುಮತಿ ಪಡೆದು ರಾತ್ರಿ ಉಳಿದುಕೊಳ್ಳಬಹುದು.

**ಚಾರಣಿಗರ ಪಾಲಿಗೆ ಸಂಜೀವಿನಿ ಈ ಮನೆ :**

ಕುಮಾರಪರ್ವತಕ್ಕೆ ಹೋಗುವ ಹಾದಿಯಲ್ಲಿ 4–5 ಕಿ.ಮೀ ಪ್ರಯಾಣದ ನಂತರ ನಿಮಗೆ ಗಿರಿಗದ್ದೆ ಸಿಗುತ್ತದೆ. ನಿಮಗೆ ಅಲ್ಲಿ ಒಂದು ಕೃಷಿಕರ ಕುಟುಂಬದ ಮನೆ ಸಿಗುತ್ತದೆ. ಈ ಕುಟುಂಬದ ಮಹಾಲಿಂಗೇಶ್ವರ ಭಟ್ಟರು ಮತ್ತು ನಾರಾಯಣಭಟ್ಟರು ಇಲ್ಲಿ ಕೃಷಿ ಮಾಡಿಕೊಂಡಿದ್ದು, 20ಕ್ಕೂ ಅಧಿಕ ಹಸುಗಳನ್ನು ಸಾಕಿ ಹೈನುಗಾರಿಕೆ ಮಾಡುತ್ತಾರೆ. ಗಿರಿಗದ್ದೆ ಜೋಯಿಸರು ಎಂದೇ ಹೆಸರಾದ ಈ ಕುಟುಂಬ ಚಾರಣಿಗರ ಪಾಳಿಗೆ ಕಾಮಧೇನುವಿದ್ದಂತೆ. ನಡೆದು ಬರುವ ಚಾರಣಿಗರೆಲ್ಲರಿಗೂ ಭಟ್ಟರ ಮನೆಯಲ್ಲಿ ನೀರು, ಬೆಲ್ಲ, ಮಜ್ಜಿಗೆ, ಪಾನಕ.. ದೊರೆಯುತ್ತದೆ. ಇದು ದಣಿದು ಬಂದ ಚಾರಣಿಗರಿಗೆ ಅಮೃತ ಸವಿದಂತಾಗುತ್ತದೆ. ಬಹುತೇಕ ಚಾರಣಿಗರು ಇವರ ಮನೆಯಲ್ಲಿ ವಿಶ್ರಾಂತಿ ಪಡೆದು ಚಾರಣ ಮುಂದುವರಿಸಿದರೆ, ಅಸಾಧ್ಯವೆನಿಸಿದವರೂ ಇಲ್ಲಿ ಉಳಿದು ಮರುಪ್ರಯಾಣ ಮಾಡುತ್ತಾರೆ. ಹೀಗಾಗಿ ಜೋಯಿಸರ ಮನೆ ಚಾರಣಿಗರ ಪಾಲಿಗೆ ಸಂಜೀವಿನಿ ಇದ್ದಂತೆ. ಈ ಕಡಿದಾದ ಬೆಟ್ಟ, ಗುಡ್ಡದಲ್ಲಿ ಹೇಗಪ್ಪ ಇವರು ವಾಸಿಸುತ್ತಾರೆ? ಎಂದೆನ್ನಿಸದೇ ಇರದು. ಇವರ ಆತಿಥ್ಯ ಸೇವೆಗೆ ಥ್ಯಾಂಕ್ಸ್ ಹೇಳಲೇಬೇಕು. ಗಿರಿಗದ್ದೆಯಲ್ಲಿ ದೇವಸ್ಥಾನದ ವತಿಯಿಂದ ಶೌಚಾಲಯ ಮತ್ತು ಸ್ನಾನ ಗೃಹವಿದ್ದು, ಮುಂಚಿತವಾಗಿ ಜೋಯಿಸರ ಮನೆಗೆ 9448647947 ಫೋನ್ ಮಾಡಿ ತಿಳಿಸಿದರೆ ಊಟ, ವಿಶ್ರಾಂತಿಗೆ ತಕ್ಕಮಟ್ಟಿಗೆ ವ್ಯವಸ್ಥೆ ಮಾಡಿಕೊಡುತ್ತಾರೆ. ಇಲ್ಲಿ ಅರಣ್ಯ ಇಲಾಖೆಯವರು ಪ್ರಕೃತಿ ವೀಕ್ಷಣೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಚೆಕ್‌ಪೋಸ್ಟ್ ಕೂಡ ಇದ್ದು ಹಣ ಪಾವತಿಸಿ ಮುಂದುವರಿಯಬೇಕಾಗುತ್ತದೆ. ಸುಬ್ರಹ್ಮಣ್ಯ ಮತ್ತು ಮಡಿಕೇರಿ ಕಡೆಯಿಂದ ಚಾರಣ ಮಾಡುವ ಅವಕಾಶವಿದ್ದು ಸೂಕ್ತ ಸಿದ್ಧತೆ ಮಾಡಿಕೊಂಡು ಚಾರಣ ಮಾಡಿದರೆ ಜೀವನದ ಅದ್ಭುತ ಅನುಭವವೊಂದು ನಿಮ್ಮದಾಗಲಿದೆ ಎನ್ನುತ್ತಾರೆ ಸ್ಥಳೀಯರಾದ ನಿವೃತ್ತ ಪ್ರಾಂಶುಪಾಲ ನೀಲಪ್ಪಗೌಡ.

ಬೇಸಿಗೆ ಕಾಲದಲ್ಲಿ ಅರಣ್ಯಕ್ಕೆ ಬೆಂಕಿ ಬೀಳುವ ಸಂಭವವಿರುವುದರಿಂದ ಅರಣ್ಯ ಇಲಾಖೆಯವರು ಬೇಸಿಗೆ ಕಾಲದಲ್ಲಿ ಚಾರಣಕ್ಕೆ ಪ್ರವೇಶವನ್ನು ನೀಡುವುದಿಲ್ಲ. ಆದ್ದರಿಂದ ಚಾರಣ ಮಾಡುವವರು ಅರಣ್ಯ ಇಲಾಖೆಯವರಿಂದ ಮಾಹಿತಿ ಪಡೆದು ಹೋಗುವುದು ಸೂಕ್ತ. ಮಳೆಗಾಲ ಕಳೆದ ನಂತರ ನವಂಬರ್‌ನಿಂದ ಫೆಬ್ರವರಿಯವರೆವಿಗೂ ಚಾರಣಕ್ಕೆ ಸೂಕ್ತ ಸಮಯವಾಗಿದೆ.



downloaded from: www.kpscvaani.com

# ರಾಜ್ಯ ಸಚಿವ ಸಂಪುಟ ಸಚಿವರ ಕಿರು ಪರಿಚಯ



ಬಿ. ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

**ಜಗದೀಶ್ ಶೆಟ್ಟರ್**



ಕ್ಷೇತ್ರ : ಹುಬ್ಬಳ್ಳಿ–ಧಾರವಾಡ ಕೇಂದ್ರ
ಜನ್ಮ ದಿನಾಂಕ : 17.12.1955
ವಿದ್ಯಾರ್ಹತೆ : ಬಿ.ಕಾಂ, ಎಲ್‌ಎಲ್‌ಬಿ (ಸ್ಪೆಷಲ್)
ವೃತ್ತಿ : ವಕೀಲ

ಇವರು 1994–1999, 1999–2004, 2004–2007, 2008–2013, 2013–2018ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು, 1999 ಮತ್ತು 2014–2018 ರಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದರು. ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಅವರು, 2012–2013 ರಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿದ್ದರು.

* * *

**ಗೋವಿಂದ ಮಕ್ತಪ್ಪ ಕಾರಜೋಳ**



ಕ್ಷೇತ್ರ : ಮುಧೋಳ (ಪ.ಜಾ)
ಜನ್ಮ ದಿನಾಂಕ : 25.01.1951
ವಿದ್ಯಾರ್ಹತೆ: ಡಿಪ್ಲೋಮಾ (ಮೆಟಿರಿಯಲ್ ಮ್ಯಾನೇಜರ್)
ವೃತ್ತಿ: ಕೃಷಿ, ಸಮಾಜ ಸೇವೆ

ಇವರು 1994–1999, 2004–2007, 2008–2013, 2013–2018ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು 2004ರಲ್ಲಿ ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕರಾಗಿದ್ದರು. ತಮ್ಮ ರಾಜಕೀಯ ಸೇವಾ ಅವಧಿಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು, ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ, ಮಾಹಿತಿ ಹಾಗೂ ಪ್ರವಾಸೋದ್ಯಮ ಮತ್ತು ಜವಳಿ, ಸಮಾಜ ಕಲ್ಯಾಣ, ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ.

**ಕೆ.ಎಸ್. ಈಶ್ವರಪ್ಪ**



ಕ್ಷೇತ್ರ: ಶಿವಮೊಗ್ಗ
ಜನ್ಮ ದಿನಾಂಕ: 10.06.1948
ವಿದ್ಯಾರ್ಹತೆ: ಬಿ.ಕಾಂ
ವೃತ್ತಿ: ವ್ಯಾಪಾರ

ಇವರು 1989–1994, 1994–1999, 2004–2007, 2008–2013ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾಗಿ, 2014–2018ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿ, ಮತ್ತು 2012–2013ರಲ್ಲಿ ಉಪ ಮುಖ್ಯಮಂತ್ರಿಯಾಗಿದ್ದರು.

* * *

**ಚಂದ್ರಕಾಂತಗೌಡ ಸಿ. ಪಾಟೀಲ್**



ಕ್ಷೇತ್ರ: ನರಗುಂದ
ವಿದ್ಯಾರ್ಹತೆ : ಪಿ.ಯು.ಸಿ
ಜನ್ಮ ದಿನಾಂಕ : 22.10.1958
ವೃತ್ತಿ : ಕೃಷಿ ಮತ್ತು ವ್ಯಾಪಾರ

ಇವರು 2004–2007, 2008–2013ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು ಮುಖ್ಯಮಂತ್ರಿಯವರ ಸಂಸದೀಯ ಕಾರ್ಯದರ್ಶಿಯಾಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾಗಿ, ಮತ್ತು ಕೆ.ಎಸ್.ಎಸ್.ಐ.ಡಿ.ಸಿ ಅಧ್ಯಕ್ಷರಾಗಿದ್ದರು.

* * *

**ಬಸವರಾಜ ಎಸ್. ಬೊಮ್ಮಾಯಿ**

ಕ್ಷೇತ್ರ : ಶಿಗ್ಗಾಂವ್
ಜನ್ಮ ದಿನಾಂಕ : 28.01.1960
ವಿದ್ಯಾರ್ಹತೆ : ಬಿ.ಇ (ಮೆಕ್ಯಾನಿಕಲ್)
ವೃತ್ತಿ : ಕೈಗಾರಿಕೋದ್ಯಮಿ



ಇವರು 2008–2013, 2013–2018 ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು 1998–2004ರವರೆಗೆ ವಿಧಾನ ಪರಿಷತ್ ಸದಸ್ಯರಾಗಿ. ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾಗಿ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ಉಪನಾಯಕರಾಗಿ, ಮತ್ತು ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ.

* * *




**ಡಾ. ಅಶ್ವಥ್ ನಾರಾಯಣ್ ಸಿ.ಎಸ್**



ಕ್ಷೇತ್ರ : ಮಲ್ಲೇಶ್ವರಂ
ಜನ್ಮ ದಿನಾಂಕ : 02.02.1968
ವಿದ್ಯಾರ್ಹತೆ : ಎಂ.ಬಿ.ಬಿ.ಎಸ್
ವೃತ್ತಿ : ವೈದ್ಯಕೀಯ ಸೇವೆ

ಇವರು 2008–2013, 2013–2018ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು 1995–1999ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಮತ್ತು ರಾಜೀವ್ ಗಾಂಧಿ ಆರೋಗ್ಯ ಮತ್ತು ವಿಜ್ಞಾನ ವಿಶ್ವವಿದ್ಯಾಲಯದ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

* * *

**ಆರ್. ಅಶೋಕ್**



ಕ್ಷೇತ್ರ : ಪದ್ಮನಾಭನಗರ
ಜನ್ಮ ದಿನಾಂಕ : 01.07.1957
ವಿದ್ಯಾರ್ಹತೆ : ಬಿ.ಎಸ್ಸಿ
ವೃತ್ತಿ : ಕೃಷಿ / ಸಾರ್ವಜನಿಕ ಸೇವೆ

ಇವರು 1998–1999, 1999–2004, 2004–2007, 2008–2013, 2013–2018ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಾರಿಗೆ, ಆಹಾರ ಮತ್ತು ನಾಗರಿಕರ ಸರಬರಾಜು, ಗ್ರಾಹಕರ ವ್ಯವಹಾರ ಮತ್ತು ಗೃಹ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. 2012–2013ರಲ್ಲಿ ಉಪ ಮುಖ್ಯಮಂತ್ರಿಯಾಗಿದ್ದರು.

**ಜೆ. ಸಿ. ಮಾಧುಸ್ವಾಮಿ**



ಕ್ಷೇತ್ರ : ಚಿಕ್ಕನಾಯಕನಹಳ್ಳಿ
ಜನ್ಮ ದಿನಾಂಕ : 04.02.1953
ವಿದ್ಯಾರ್ಹತೆ : ಎಂ.ಎ, ಎಲ್.ಎಲ್.ಬಿ
ವೃತ್ತಿ : ಕೃಷಿ

ಇವರು 1989–1994, 1996ರ ಉಪ ಚುನಾವಣೆಯಲ್ಲಿ ಮತ್ತು 2004–2007ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿದ್ದಾರೆ.

* * *

**ಎಸ್. ಸುರೇಶ್ ಕುಮಾರ್**



ಕ್ಷೇತ್ರ : ರಾಜಾಜಿನಗರ (ಬೆಂಗಳೂರು)
ಜನ್ಮ ದಿನಾಂಕ : 11–11–1955
ವಿದ್ಯಾರ್ಹತೆ : ಬಿ.ಎಸ್ಸಿ, ಎಲ್.ಎಲ್.ಬಿ
ವೃತ್ತಿ : ವಕೀಲ

ಇವರು 1994–1999, 1999–2004, 2008– 2013, 2013–2018ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ನಗರಾಭಿವೃದ್ಧಿ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.



downloaded from: www.kpscvaani.com

**ಕೋಟ ಶ್ರೀನಿವಾಸ ಪೂಜಾರಿ**
**ಎಂಎಲ್‌ಸಿ, ಸ್ಥಳೀಯ ಸಂಸ್ಥೆಗಳ ಕ್ಷೇತ್ರ,**
ಜನ್ಮ ದಿನಾಂಕ : **54 ವರ್ಷ**
ವಿದ್ಯಾರ್ಹತೆ : **7ನೇ ತರಗತಿ**
ವೃತ್ತಿ : **ಕೃಷಿ**



ದಿನಾಂಕ 06.01.2010–04.01.2016ರ ವರೆಗೆ ವಿಧಾನ ಪರಿಷತ್ ಸದಸ್ಯರಾಗಿದ್ದ ಇವರು ಮತ್ತೊಮ್ಮೆ 06.01.2016 ರಿಂದ 05.01.2022ರ ವರೆಗೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದು, ಮುಜರಾಯಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

• • •

**ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ**
ಕ್ಷೇತ್ರ : **ನಿಪ್ಪಾಣಿ**
ಜನ್ಮ ದಿನಾಂಕ : **20.11.1969**
ವಿದ್ಯಾರ್ಹತೆ : **ಪಿ.ಯು.ಸಿ**
ವೃತ್ತಿ : **ಕೃಷಿ, ವ್ಯಾಪಾರ, ಸಮಾಜ ಸೇವೆ**



2013–2018ರಲ್ಲಿ ವಿಧಾನಸಭಾ ಸದಸ್ಯರಾಗಿದ್ದ ಇವರು ಪ್ರಸ್ತುತ ವಿಧಾನಸಭಾ ಸದಸ್ಯರಾಗಿದ್ದಾರೆ.

• • •

**ಲಕ್ಷ್ಮಣ ಸಂಗಪ್ಪ ಸವದಿ**
ಜನ್ಮ ದಿನಾಂಕ : **16–02–1962**
ವಿದ್ಯಾರ್ಹತೆ : **ಪಿ.ಯು.ಸಿ**
ವೃತ್ತಿ: **ಕೃಷಿ**



ಇವರು 2004– 2007 ರಲ್ಲಿ ವಿಧಾನಸಭೆ ಸದಸ್ಯರಾಗಿದ್ದರು. ಅವರು ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಗಳಾಗಿ ಹಾಗೂ ಸಹಕಾರ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

• • •

**ಪ್ರಭು ಬಿ. ಚೌವ್ಹಾಣ**
ಕ್ಷೇತ್ರ : **ಔರಾದ್ ( ಪ.ಜಾ)**
ಜನ್ಮ ದಿನಾಂಕ: **16–07–1969**
ವಿದ್ಯಾರ್ಹತೆ: **ಬಿ.ಎ**
ವೃತ್ತಿ : **ಕೃಷಿ**



ಇವರು 2008–2013 ಮತ್ತು 2013–2018ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ಕೂಡ ವಿಧಾನಸಭಾ ಸದಸ್ಯರಾಗಿದ್ದಾರೆ.

• • •

**ಸಿ. ಟಿ. ರವಿ**
ಕ್ಷೇತ್ರ : **ಚಿಕ್ಕಮಗಳೂರು**
ಜನ್ಮ ದಿನಾಂಕ : **18–07–1967**
ವಿದ್ಯಾರ್ಹತೆ : **ಎಂ.ಎ**
ವೃತ್ತಿ : **ಕೃಷಿ**



ಇವರು 2004 –2007, 2008– 2013, 2013– 2018 ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು, ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು ಉನ್ನತ ಶಿಕ್ಷಣ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

• • •

**ವಿ. ಸೋಮಣ್ಣ**
ಕ್ಷೇತ್ರ : **ಗೋವಿಂದರಾಜ ನಗರ (ಬೆಂಗಳೂರು)**
ಜನ್ಮ ದಿನಾಂಕ : **20–07–1951**
ವಿದ್ಯಾರ್ಹತೆ : **ಬಿ.ಎ**
ವೃತ್ತಿ : **ಸಮಾಜ ಸೇವೆ**



ಇವರು 1994–1999, 1999–2004, 2004–2007, 2008– 2009 ರಲ್ಲಿ ವಿಧಾನಸಭಾ ಸದಸ್ಯರಾಗಿ ಮತ್ತು 2010 – 2016ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು ಬಂದೀಖಾನೆ ಮತ್ತು ಗೃಹರಕ್ಷಕ ದಳ, ವಸತಿ ಮತ್ತು ಮುಜರಾಯಿ, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು ಮತ್ತು ವಸತಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ.

• • •

**ಬಿ. ಶ್ರೀರಾಮುಲು**
ಕ್ಷೇತ್ರ : **ಮೊಳಕಾಲ್ಮೂರು (ಪ.ಪಂ)**
ಜನ್ಮ ದಿನಾಂಕ : **08–08–1970**
ವಿದ್ಯಾರ್ಹತೆ : **ಬಿ.ಎ**
ವೃತ್ತಿ : **ಕೃಷಿ ಮತ್ತು ವ್ಯಾಪಾರ**



ಇವರು 2004–2007, 2008–2013, 2013–2014 (29.05.2013 ರಿಂದ 19.03.2014) ರಲ್ಲಿ ವಿಧಾನಸಭಾ ಸದಸ್ಯರಾಗಿ ಮತ್ತು 2014– 2018ರಲ್ಲಿ ಲೋಕಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು ಪ್ರವಾಸೋದ್ಯಮ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ.

• • •

**ಹೆಚ್. ನಾಗೇಶ್**
ಕ್ಷೇತ್ರ : **ಮುಳಬಾಗಿಲು ( ಪ.ಜಾ)**
ಜನ್ಮ ದಿನಾಂಕ : **20–07–1958**
ವಿದ್ಯಾರ್ಹತೆ : **ಬಿ.ಇ, ಎಫ್‌ಐಇ**
ವೃತ್ತಿ : **ಸಮಾಜ ಸೇವೆ**



ಪ್ರಸ್ತುತ ಇವರು ವಿಧಾನಸಭಾ ಸದಸ್ಯರಾಗಿದ್ದು ದಿನಾಂಕ 14.06.2019ರಿಂದ ಸಣ್ಣ ಕೈಗಾರಿಕೆ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

Published by : The Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

downloaded from: www.kpscvaani.com